# ಅಪರಂಜಿ

ತಿಳಿನಗೆಯ ಕಾರಂಜಿ

ಆಗಸ್ಟ್ 2023




ಬಿಡಿ ಪ್ರತಿ: ರೂ. 10/-

TEMPLE OF KNOWLEDGE

# ಪುಸ್ತಕವಿಲ್ಲದ ಕೋಣೆ ಆತ್ಮವಿಲ್ಲದ ದೇಹವಿದ್ದಂತೆ

ಬೀChiಯವರ ವಿಡಂಬನೆ ಹಾಸ್ಯದ ಮೂಲಕ ಮೌಲ್ಯಗಳು ಬೆಳೆಯುತ್ತದೆ ಹಾಗೂ ಬೀChi ಅವರ ಪುಸ್ತಕಗಳು ಪ್ರೇರಣೆ, ಸ್ಫೂರ್ತಿ ಮತ್ತು ಮನರಂಜನೆಯಿಂದ ತುಂಬಿವೆ ಸಕಾರಾತ್ಮಕ ಪರಿಣಾಮ ಬೀರುತ್ತದೆ.

**50 ಪುಸ್ತಕಗಳ ಪ್ಯಾಕ್**

ನಿಮಗಾಗಿ ಮತ್ತು ಇತರರಿಗೆ ಉಡುಗೊರೆಯಾಗಿ ನೀಡಲು ಈ ಅದ್ಭುತ ಪುಸ್ತಕಗಳ ಸಂಗ್ರಹವನ್ನು ಖರೀದಿಸಿ ಆಸಕ್ತ ಓದುಗರು, ಶಾಲೆಗಳು, ಕಾಲೇಜುಗಳು, ಕಾರ್ಪೊರೇಟ್‌ಗಳು, ವಿಶ್ವವಿದ್ಯಾನಿಲಯಗಳು ಮತ್ತು ಓದಲು ಆಸಕ್ತಿ ಹೊಂದಿರುವ ಇತರ ಸಂಸ್ಥೆಗಳಿಗೆ ಇದನ್ನು ಹಂಚಿಕೊಳ್ಳಿ. ಪುಸ್ತಕಗಳು ನಿಮ್ಮ ಮನೆ ಸೇರಲಿ ಹಾಗೂ ಬಂಧುಗಳಿಗೆ, ಸ್ನೇಹಿತರಿಗೆ ಕಾಣಿಕೆಯಾಗಿ ಎಲ್ಲಾ ಸಮಾರಂಭಕ್ಕೂ ಪುಸ್ತಕಗಳು ಉಡುಗೊರೆಯಾಗಿ ಕೊಡಬಹುದು.

**ಬೆಲೆ ರೂ7592 after discount ರೂ 6799 ಪ್ರತಿಗಳನ್ನು ಪಡೆಯಲು ಸಂಪರ್ಕಿಸಿ**


Pay 9845264304

ಆಸಕ್ತರು ಸಂಪರ್ಕಿಸಿ : 080–29731414 ಮೊ : 9035302302

---

## BEECHI PRAKASHANA

## ಬೀchi ಪ್ರಕಾಶನ,



### BOOKS AVAILABLE

- Kannada Books
- Banking Exam Books
- Biographies
- Business & Economics
- Children & Young Adult Books
- Comics
- Competitive Exam Books
- Engineering Entrance Exam
- Fiction & Non-Fiction Books
- Office Stationery
- ಕನ್ನಡ ಪುಸ್ತಕಗಳು
- Health & Family
- Humour
- Law
- Literature
- Medical Entrance
- Politics
- Reference Books
- Religion & Spirituality
- Romance
- Other Books

Email : admin@beechi.in | www.beechi.in | 9845264304

Ravi Graphics
OFFSET PRINTERS

Bringing colours alive

*What we specialize into :*

- Books
- Brochures
- Catelogues
- Boxes
- Mono Cartons



53/8, 2nd Main Road, Industrial Town, Rajajinagar, Bangalore - 560 010
Tel: 4088 9999/55, Fax : 4088 9944 website : www.ravigraphics.com

Bag is everything

bag factory
bagfactory.co.in

Our Promise

- 100% recyclable paper bags & pouches
- Pan-India delivery
- Premium customisation for high-street brands




Reach us for your paper bag requirements

+91 89719 95599 | sales@bagfactory.co.in | bagfactory.co.in

Published on 3rd of every month
Mailed on 5th of every month
Mailed at: Bangalore P.S.O. 560026

REGISTERED KA/BGW-544/2021-2023
**RNI NO. KAR-KAN/2005/15457**

www.mallige.com

NABH ACCREDITED · PATIENT SAFETY & QUALITY OF CARE

Certificate No.: MC-2068



Established in 1978 we are a multi-speciality, tertiary care hospital.

# CARING AND HEALING

| 126 | 60+ | 25+ |
|---|---|---|
| BEDS | LEADING SPECIALISTS | SPECIALTIES |

An institution of heritage in the heart of Bengaluru.




MALLIGE HOSPITAL
PERSONALISED COMPLETE HEALTHCARE

MALLIGE LABS

**Mallige Medical Centre Pvt. Ltd.**
31 & 32 Crescent Road, Bangalore 560001, India.
+91.80.67165555 +91.80.45577099 +91.80.22203333
Email: info@mallige.com

Printed by: V.R. BHARATH for the Publihser KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore - 560 003. Printed at: Ravi Graphics, 58/8, 2nd Main Road, Rajajinagar, Bangalore 560 010. Ph: 40889999/55
Editor : M. SHIVAKUMAR
No. of Pages: 40+4 APARANJI KANNADA MONTHLY.

## ಸಂಪಾದಕ ಮಂಡಳಿ

**ಸಂಪಾದಕರು**

ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**

ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**

ಶ್ರೀ ಎಚ್. ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ

ಆಡಳಿತ ಮಂಡಳಿ

ಮ್ಯಾನೇಜಿಂಗ್ ಟ್ರಸ್ಟಿ

ಶ್ರೀ ಉಲ್ಲಾಸ ರಾಯಸಂ

ಟ್ರಸ್ಟಿಗಳು

ಶ್ರೀ ಎಂ ಶಿವಕುಮಾರ್

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ಎಚ್.ಎನ್. ಆನಂದ

ಶ್ರೀ ಸಿ.ಆರ್. ಸತ್ಯ

ಶ್ರೀ ಕೆ. ರವೀಂದ್ರ ರಾವ್

ಶ್ರೀ ವಿ. ಆರ್. ಭರತ್



ಚಂದಾ ವಿವರ :

ಬಿಡಿ ಪ್ರತಿ : ರೂ. 10/–

ವಾರ್ಷಿಕ ಚಂದಾ : ರೂ. 100/–

ಹತ್ತು ವರ್ಷದ ಚಂದಾ: ರೂ. 750/–

ಸಂಪರ್ಕ ಸಮಯ:

ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ: ಮನಿಆರ್ಡರ್ ಸ್ವೀಕರಿಸಲಾಗುವುದಿಲ್ಲ.




# ಅಪರಂಜಿ

ತಿಳಿನಗೆಯ ಕಾರಂಜಿ


ಸಂಪುಟ 40

ಸಂಚಿಕೆ – 11

ಆಗಸ್ಟ್–2023


## ಈ ಸಂಚಿಕೆಯಲ್ಲಿ...


| | | |
|---|---|---|
| ಅಪರಂಜಿ ಕಿಡಿ | **ಪ್ರಕಾಶ್** | 1 |
| ಅಪರೂಪದ ಅತಿಥಿ | **ವತ್ಸನ** | 3 |
| ಪದಕುಲುಮೆ | **ಎಸ್ ಎನ್ ಗಣನಾಥ** | 6 |
| ಏತರ್ ಏರಿದಾಗ | **ನಳಿನಿ ಸೂರ್ಯಪ್ರಕಾಶ್** | 7 |
| ಹಂಡೆ ಹನುಮ | **ವೈ. ಎನ್. ಗುಂಡೂರಾವ್** | 10 |
| ಫಜೀತಿಯಾದ ಆಚೆಮನೆ ಸುಬ್ಬಮ್ಮನ ಹಾಡು! | **ಆಶಾ ರಘು** | 13 |
| ಯದ್ಭಾವಂ ತದ್ಭವತಿ | **ನಾಗರತ್ನ ರಾಮಮೂರ್ತಿ** | 15 |
| ಠುಸ್ಸಾದ ಖುಷಿ ಬೆಲೂನ್ | **ಅರವಿಂದ. ಜಿ. ಜೋಷಿ** | 17 |
| ಹೋಯ್, ರೀ.....! | **ಗಣೇಶ್ ಎಸ್. ಹೆಗಡೆ, ಶಿರಸಿ** | 19 |
| ಇರುವ ಭಾಗ್ಯವ ನೆನೆದು.... | **ಗಣೇಶ ಹೆಗ್ಗಡೆ** | 21 |
| ತುಂತುರು | **ದಂನಆ** | 24 |
| ಅಮೇರಿಕಾಯಣ | **ಎಂ.ವಿ. ಶಶಿಭೂಷಣ ರಾಜು** | 25 |
| ಯೂಟ್ಯೂಬ್ ಅವಾಂತರ..... | **ಜ್ಯೋತಿ ರಾಜೇಶ್** | 29 |
| ವಾಸ್ತು ವಿಸ್ತರಣೆ | **ಅಚ್ಯುತ ರಾವ್** | 30 |
| ವೃದ್ಧಾಶ್ರಮ | **ರಾಮಮೂರ್ತಿ S.K.** | 33 |
| ಟೂತ್ ಪೇಸ್ಟ್ ಪರಸಂಗ | **ಕೆ.ಎಸ್.ಸೋಮೇಶ್ವರ** | 36 |
| ಈ ವೇಷ ನೋಡಬೇಡ ಅಮ್ಮಯ್ಯ | **ಸುಕೇಶವ** | 38 |


**ವ್ಯಂಗ್ಯ ಚಿತ್ರಗಳು:**
**ಹೊರ ಪುಟ–**
**ಒಳ ಪುಟ–ಆದರ್ಶ ಪೈ ಮತ್ತು ರಘುಪತಿ ಶೃಂಗೇರಿ**


*ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 003,* email: koravanjiaparanji@gmail.com ಮೊಬೈಲ್:9845264304



ಸಂಪರ್ಕ ವಿಳಾಸ : ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ. ನೋ. 96, 'ಸುಕೇಶವ', ಎರಡನೇ ಅಡ್ಡರಸ್ತೆ, 20ನೇ ಮುಖ್ಯ ರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್, ಬೆಂಗಳೂರು–560 068. ದೂರವಾಣಿ: 080–26688488. email:belururamamurthy@gmail.com



**For Online payment of ubscription:** Name : KORAVANJI APARANJI TRUST
Current Account No.: 109804180000056, IFS Code : SVCB0000098
SVC Co-operative Bank Ltd., Branch: Malleshwaram
Please mail us your name and address if you are a new subscriber. Mail your subscriber ID if it is renewal. Our email ID: koravanjiaparanji@gmail.com

*ಮುದ್ರಣ : ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ : ಶ್ರೀ ಬಾಲಾಜಿ ಪ್ರಿಂಟರ್ಸ್, (ರವಿ) ಸಹಕಾರನಗರ*



## ಅಪರಂಜಿ ಕಿಡಿ

● ಪ್ರಕಾಶ್

ರೋಗಿ ಮೇಲ್ವಿಚಾರಣೆಗೆ ರೋಬೋಟ್ ಉಪಯೋಗ

ಸುದ್ದಿ

ಸಾಫ್ಟ್ವೇರಿನಲ್ಲಿ ಕರುಣಾರಸ ಹೇಗೆ ತೋರಿಸುತ್ತಾರೋ !!

* * *

ವಾಹನದ ರಹಸ್ಯ ಪೆಟ್ಟಿಗೆಯಲ್ಲಿ ಗಾಂಜಾ

ಪತ್ರಿಕೆ

ಅದು "ರಹಸ್ಯ " ಹೇಗಾಯಿತು??

* * *

ಸಹನೆಯೇ ಅಶ್ವಿನ್ ಅವರ ಆಯುಧ ಆದಂತೆ ಕಾಣುತ್ತೆ !!

ಪಾಪ ವೆಸ್ಟಿಂಡೀಸ್ ಪರದಾಡುವಂತೆ ಆಯಿತು!!

* * *

ಜಯದ ಕನಸಿನಲ್ಲಿ ದಕ್ಷಿಣ ವಲಯ

ಕ್ರಿಕೆಟ್ ಸುದ್ದಿ

ಹೌದು, ಪಶ್ಚಿಮ ವಲಯಕ್ಕೆ ಉತ್ತರ ಕೊಡಲೇ ಬೇಕು !!!

* * *

ಭಾರತೀಯ ರೂಪಾಯಿ ಬಳಕೆಗೆ ಶ್ರೀಲಂಕಾ ಸಿಧ್ಧ

ದಿನಪತ್ರಿಕೆ

ಧರ್ಮಕ್ಕೆ ದಟ್ಟಿ ಕೊಟ್ಟರೆ ಮೊಳ ಹಿಡಿದು ನೋಡಿದಂತೆ !!

* * *

"ಸೀಮಾತೀತ ವಿಮರ್ಶೆ ದೂರ ಮಾಡುವುದು ಸಲ್ಲ"

ಹೇಳಿಕೆ

ಅಂಗಂದ್ರೇನ್ ಸಾರ್ ?!?

■

# ಅಪರೂಪದ ಅತಿಥಿ

ವತ್ಸನ

ಶರಲೇಖ ದೆಹಲಿಗೆ ತೆರಳಿ ಒಂದು ತಿಂಗಳ ಮೇಲಾಯಿತು. ಅವನು ಹಿಂದಕ್ಕೆ ಬರುವ ಸೂಚನೆಯೇ ಇಲ್ಲ. ಮೊನ್ನೆ ಅವನಿಂದ ಒಂದು ಮೆಸೇಜ್ ಬಂದಿತ್ತು. "ಇಲ್ಲಿನ ಅಪರಾಧ ಪರಿಸರ ಬೆಂಗಳೂರಿಗಿಂತ ನೂರು ಪಟ್ಟು ವಾಸಿ. ಅಲ್ಲಿದ್ದಾಗ ತಿಂಗಳಿಗೆ ಒಂದು ಪ್ರಸಂಗ ಸಿಕ್ಕಿದರೆ ಅದೇ ಹೆಚ್ಚು. ಇಲ್ಲಿ ಹಾಗಿಲ್ಲ. ಪುರುಸತ್ತೇ ಇಲ್ಲದಷ್ಟು ಕೇಸುಗಳಿವೆ. ಇಲ್ಲಿನ ಖದೀಮರು ಬೆಂಗಳೂರಿನವರಿಗಿಂತ ಹೆಚ್ಚಿ ಛಾಲೆಂಜಿಂಗ್. ಡಿಸೆಂಬರ್ ಹೊತ್ತಿಗೆ ಊರಿಗೆ ಹಿಂತಿರುಗಲು ಪ್ರಯತ್ನಿಸುವೆ." ಸರಿ, ಇನ್ನು ನನ್ನ ಬರಹಗಳ ಗತಿ? ಕಳೆದ ತಿಂಗಳೇನೋ ರವಿಕಿರಣನ ದೆಸೆಯಿಂದ ಒಂದು ಹೊಸ ಅನುಭವವನ್ನು ದಾಖಲಿಸಲು ಸಾಧ್ಯವಾಯಿತು. ಈ ಬಾರಿಯೂ ನನ್ನ ಅನುಭವವನ್ನೇ ದಾಖಲಿಸಿದರೆ ಹೇಗೆ? ಅಂದುಕೊಂಡೆ. ಒಡನೆಯೇ, ಪ್ರಾರಂಭದಿಂದ ಶರಲೇಖನ ಸಾಹಸಗಳನ್ನೇ ನಿರೂಪಿಸುತ್ತಿದ್ದವನು ಹೀಗೆ ಅಚಾನಕ್ ಆಗಿ ಟ್ರಾಕ್ ಬದಲಿಸಬಹುದೇ ಎಂಬ ಅಳುಕು ಮೂಡಿತು. ಈ ತರಹ ಇಬ್ಬಂದಿ ಬಂದಾಗಲೆಲ್ಲಾ, ನಾನು ನನ್ನ ತಂಗಿಯ ಮಗಳು ಭವಾನಿಯ ಸಲಹೆ ಕೇಳುತ್ತೇನೆ. ಹಾಗಾಗಿ ಅವಳನ್ನ ಕೇಳಿದೆ. ಅವಳು, "ಮಾವ, ಶರಲೇಖ ಅಂಕಲ್ ಇಲ್ಲ ಅಂದ ಮಾತ್ರಕ್ಕೆ ನಿಮ್ಮ ಬರೆಯುವ ಹವ್ಯಾಸ ಯಾಕೆ ನಿಲ್ಲಬೇಕು. ಖಂಡಿತ ನಿಮ್ಮ ಅನುಭವಗಳನ್ನೇ ಬರೆಯಿರಿ" ಅಂತ ಸ್ಪಷ್ಟವಾಗಿ ಹೇಳಿದಳು. ಅಂತೂ ಗ್ರೀನ್ ಸಿಗ್ನಲ್ ಸಿಕ್ಕಿತು. ಇನ್ನೇಕೆ ತಡ?

ಶರಲೇಖನ ಶತಕವನ್ನು ಬರೆಯುವ ಭರದಲ್ಲಿ ಇಷ್ಟು ದಿನ ನನ್ನ ಇತರ ಮಿತ್ರರ ಬಗ್ಗೆ ಹೇಳುವುದಕ್ಕೆ ಅವಕಾಶವೇ ಸಿಕ್ಕಿರಲಿಲ್ಲ. ಒಂದಾನೊಂದು ಕಾಲದಲ್ಲಿ ನಾನು ಮೆಡಿಕಲ್ ಕಾಲೇಜಿನಲ್ಲಿ ಓದುತ್ತಿದ್ದಾಗ ನನ್ನೊಂದಿಗಿದ್ದ ಸಹಪಾಠಿಗಳಲ್ಲಿ ಅನೇಕರು ಬೆಂಗಳೂರಿನಲ್ಲೇ ನೆಲೆಸಿದ್ದಾರೆ. ತಿಂಗಳಿಗೊಮ್ಮೆ ನಾವು ಹಲವು ಆಪ್ತರು ಬೆಂಗಳೂರು ಕ್ಲಬ್ಬಿನಲ್ಲಿ ಒಂದು ಸಂಜೆ ಕಲೆತು ಹರಟುವುದು ಪರಿಪಾಠ. ಎಲ್ಲರೂ ವೈದ್ಯರೇ. ನಾನು ಹೇಳಬೇಕೆಂದಿರುವ ಪ್ರಸಂಗದ ಸಂಜೆ ಶಂಕರ, ಚಿದಾನಂದ ಮತ್ತು ಚಂದ್ರಹಾಸ ಐತಾಳ ನನ್ನೊಂದಿಗೆ ಕ್ಲಬ್ಬಿನಲ್ಲಿ ಸೇರಿ ಸಂಜೆಗೆ ರಂಗೇರಿಸುವ ಕಾರ್ಯಕ್ರಮವಿತ್ತು. ಇದಕ್ಕೆ ಒಂದು ವಾರಕ್ಕೆ ಮುಂಚೆ ನನಗೆ ಮುಂಬೈನಿಂದ ಒಂದು ಕಾಲ್ ಬಂದಿತ್ತು. ನನ್ನ ಮತ್ತೊಬ್ಬ ಸಹಪಾಠಿ, ವಸಂತ ಬಂಗೇರ ಆ ಬದಿಯಿಂದ ಮಾತನಾಡುತ್ತಿದ್ದ. "ಮುಂದಿನ ವಾರ ಬೆಂಗಳೂರಿಗೆ ಬರುವವನಿದ್ದೇನೆ. ನಿನ್ನನ್ನ ಭೇಟಿಮಾಡಲು ಸಾಧ್ಯವೇ?" ಅಂತ ಕೇಳಿದ. "ಖಂಡಿತಾ ಬಾರಯ್ಯಾ. ಮುಂದಿನವಾರ ನಾವೆಲ್ಲಾ ಸಹಪಾಠಿಗಳೂ ಕ್ಲಬ್ಬಿನಲ್ಲಿ ಸೇರುತ್ತಿದ್ದೇವೆ. ನೀನೂ ಬಂದರೆ ಅದೇ ನಮಗೆ ಹಬ್ಬ" ಅಂತ ಹಳೆಯ ಗೆಳೆಯನನ್ನ ಆದರದಿಂದ ಆಹ್ವಾನಿಸಿದೆ.

ವಸಂತ ಒಂದು ದಿನ ಮುಂಚೆಯೇ ಬೆಂಗಳೂರಿಗೆ ಬಂದ. ನಾನೇ ಅವನನ್ನ ಏರ್‌ಪೋರ್ಟಿನಲ್ಲಿ ಎದುರುಗೊಂಡು ನಮ್ಮ ಕ್ಲಬ್ಬಿನಲ್ಲೇ ವಸತಿಗೆ ವ್ಯವಸ್ಥೆ ಮಾಡಿದೆ. ಮಾರನೆಯ ಸಂಜೆ ನಾವೆಲ್ಲಾ ಕ್ಲಬ್ಬಿನಲ್ಲಿ ಸೇರಿದೆವು. ನಮ್ಮೆಲ್ಲರಿಗೂ ವಸಂತನ ಬಹುದಿನಗಳನಂತರದ ಭೇಟಿ ಖುಷಿ ತಂದಿತು.

ಮೇಜಿನ ಸುತ್ತ ಹರಟುತ್ತಾ ಕುಳಿತಿದ್ದಾಗ, ಚಂದ್ರಹಾಸ ಒಮ್ಮೆಲೆ, "ಈಗ ನಾವೆಲ್ಲಾ ಒಬ್ಬೊಬ್ಬರಾಗಿ ನಮಗಾಗಿರುವ ಅತ್ಯಂತ ಅಪೂರ್ವ ಅನುಭವವನ್ನು ಹೇಳೋಣ,

ಏನಂತೀರ?" ಅಂತ ಒಂದು ಸವಾಲು ಎಸೆದ. ಶಂಕರ, "ಅದು ವಸಂತನಿಂದಲೇ ಪ್ರಾರಂಭವಾಗಲಿ. ಹೇಗೂ ಇಷ್ಟುದಿನಗಳ ನಂತರದ ಭೇಟಿ. ಅವನ ಯಾವುದೇ ಅನುಭವ ನಮಗೆ ಅಪೂರ್ವವೇ" ಅಂದ.

ವಸಂತ, "ಇದೆಂತಹ ಕಾಕತಾಳೀಯ ಅಂತೀನಿ. ನಿಜವಾಗ಼್ೂ ಬೆಂಗಳೂರಿಗೆ ಬರುಕ್ಕೆ ಮುಂಚೆ ನನ್ನ ಜೀವನದಲ್ಲೇ ಕಂಡಿರದಂತಹ ವಿಚಿತ್ರ ಘಟನೆ ನಡೆಯಿತು. ಅದನ್ನೇ ನಿಮ್ಮೊಂದಿಗೆ ಹಂಚಿಕೊಳ್ಳುವೆ." ಅಂತ ಹೇಳಿ ಎದುರಿದ್ದ ಪಾನೀಯದ ಗುಟುಕೊಂದನ್ನ ಹೀರಿ, ಪ್ರಾರಂಭಿಸಿದ.

"ನಾನು ಇಲ್ಲಿಗೆ ಹೊರಡುಕ್ಕೆ ಹಿಂದಿನ ದಿನದ ಬೆಳಗ್ಗೆ ನಾನು ಆಫೀಸಿನಲ್ಲಿ ಕೂತಿದ್ದೆ. ಹನ್ನೆರಡು ಘಂಟೆ ಹೊತ್ತಿಗೆ ಯಾವುದೋ ಒಬ್ಬ ಅಪರಿಚಿತ ನನ್ನನ್ನು ನೋಡಲು ಬಂದ. ನೋಡುಕ್ಕೆ ಸಾಧಾರಣ ಉಡುಪು. ನನ್ನದು ಹೋಲ್‌ಸೇಲ್ ವ್ಯವಹಾರ. ನನ್ನ ಗಿರಾಕಿಗಳೆಲ್ಲಾ ಬಹು ಜರ್ಬಿನವರೇ. ಇವನು ಹಾಗೇನೂ ಕಾಣಲಿಲ್ಲ. ಆದರೂ ಯಾವ ಹುತ್ತದಲ್ಲಿ ಯಾವ ಹಾವಿರುತ್ತದೋ, ಮಾತನಾಡಿಸಿ ಕಳಿಸೋಣ ಅಂತ ಅವನನ್ನು ಒಳಕ್ಕೆ ಕರೆದೆ.

"ಯಾರು ನೀವು, ನನ್ನಿಂದೇನು ಸಹಾಯ ಬೇಕು ನಿಮಗೆ?" ಅಂತ ಸೌಜನ್ಯದಿಂದ ಕೇಳಿದೆ.

"ಯಾರಿಗೆ ಯಾರಿಂದ ಸಹಾಯ ಬೇಕು ಅನ್ನೋದನ್ನ ಮೊದಲು ನಿರ್ಧರಿಸಿದರೆ ವಾಸಿ ಅಲ್ಲವೇ" ಅಂದ ಆ ಪ್ರಾಣಿ. ನನಗೋ ತಾಳ್ಮೆ ಬಹಳ ಕಡಿಮೆ. ಆದರೂ ಬೆಳಗಾಗೆದ್ದು ಇವನೊಂದಿಗೆ ಯಾಕೆ ವಾಗ್ವಾದ ಅಂದುಕೊಂಡು, "ನೀವು ಬಂದ ಕಾರಣ ಹೇಳಿದರೆ ನಿಮ್ಮ ಪ್ರಶ್ನೆಗೂ ಉತ್ತರ ಸಿಗಬಹುದು" ಅಂತ ಉತ್ತರಿಸಿದೆ.

ಆತ ಏನೂ ಮಾತನಾಡಲಿಲ್ಲ. ಸುಮ್ಮನೆ ನನ್ನನ್ನು ದೃಷ್ಟಿಸಿ ನೋಡಲು ಪ್ರಾರಂಭಿಸಿದ. ಆ ದೃಷ್ಟಿಯಲ್ಲಿ ಯಾವುದೋ ಒಂದು ಸೆಳೆತ ಇತ್ತು. ಒಮ್ಮೆಲೆ ಆತ ಮಾತನಾಡಲು ಪ್ರಾರಂಭಿಸಿದ. ಎಂತಹ ಮಾತು ಅಂತೀರಿ. ತುಟಿ ಅಲುಗುತ್ತಿರಲಿಲ್ಲ. ಶಬ್ದ ಹೊರಡುತ್ತಿರಲಿಲ್ಲ. ಅವನು ನನ್ನ ಮನಸ್ಸಿನೊಳಗೆ ಕುಳಿತು ಸ್ಪಷ್ಟವಾಗಿ ಆತ ಹುಟ್ಟು ಸಾವುಗಳ ಬಗ್ಗೆ ಮಾತನಾಡಲು ಪ್ರಾರಂಭಿಸಿದ. ನನಗೋ ತೀವ್ರ ಭಯ ಶುರು ಆಯಿತು. ಇವನಿಂದ ತಪ್ಪಿಸಿಕೊಳ್ಳೋದು ಹೇಗಪ್ಪಾ ಅಂತ ಅಂದುಕೊಂಡೆ. ಆತ "ನಿನ್ನ ನೆರಳಿನಿಂದ ನೀನು ತಪ್ಪಿಸಿಕೊಳ್ಳೋದು ಸಾಧ್ಯವೇನೋ ಮೂರ್ಖ" ಅಂದು ಬಿಡೋದೇ? ಹೀಗೆ ಏಕಾಏಕೀ ಏಕವಚನಕ್ಕೆ ಇಳಿದುಬಿಟ್ಟನಲ್ಲಾ ಆಸಾಮಿ ಅಂತ ಅನ್ನಿಸಿತು. ಆದರೂ ಇವನಿಂದ ಒಳ್ಳೆಯ ಮಾತಿನಲ್ಲೇ ಬಚಾವಾಗಬೇಕು ಅಂತ ನಿರ್ಧರಿಸಿ "ಈಗ ನಾನೇನು ಮಾಡಬೇಕು?" ಅಂತ ದೈನ್ಯಭಾವದಿಂದ ಕೇಳಿದೆ. ಆತ "ನನ್ನೊಂದಿಗೆ ಬಾ" ಅಂತ ಆಜ್ಞೆಮಾಡಿದ. ಅವನೊಂದಿಗೆ ಹೊರಟದ್ದು ಜ್ಞಾಪಕ. ಆಮೇಲಿನದೇನೂ ನೆನಪಿಲ್ಲ. ಎಚ್ಚರವಾದಾಗ ಆಫೀಸಿನಲ್ಲೇ ಕುಳಿತಿದ್ದೆ. ಆಸಾಮಿ ಮಾಯವಾಗಿದ್ದ. ನನ್ನ ಸೆಕ್ರೆಟರಿಯನ್ನು ಕರೆದು ನನ್ನ ನೋಡುಕ್ಕೆ ಬಂದಿದ್ದನಲ್ಲಾ ಅವನೆಲ್ಲಿ? "ಅಂತ ಕೇಳಿದೆ. ಅವರು ಐದು ನಿಮಿಷದ ಹಿಂದೆ ನಿಮ್ಮ ಆಫೀಸಿನಿಂದ ಹೊರಕ್ಕೆ ಬಂದು ಏನೂ ಹೇಳದೆ ಹೊರಟುಹೋದರು" ಅಂದ.

ಯಾವುದೋ ಕೆಟ್ಟ ಕನಸಿರಬೇಕು. ಅಂದುಕೊಂಡೆ. ಅಷ್ಟು ಹೊತ್ತಿಗೆ ಬೆಂಗಳೂರು ಫ್ಲೈಟ್ ಸಮಯವೂ ಆಗಿತ್ತು. ನೇರವಾಗಿ ಮನೆಗೆ ಹೋಗಿ ಸೂಟ್‌ಕೇಸ್ ತೆಗೆದುಕೊಂಡು ಟ್ಯಾಕ್ಸಿ ಹಿಡಿದು ಏರ್‌ಪೋರ್ಟ್‌ಗೆ ಹೊರಟೆ" ಎಂದು ತನ್ನ ಅನುಭವವನ್ನು ವಸಂತ

ವಿವರಿಸಿದ.

ನಾವೆಲ್ಲರೂ ಮೂಕರಾಗಿದ್ದೆವು. ಇದು ಸುಳ್ಳೋ ನಿಜವೋ ಎಂಬ ಪ್ರಶ್ನೆ ಎಲ್ಲರ ಮನದಲ್ಲಿತ್ತು. ವಸಂತ, "ನೀವು ಇದನ್ನು ನಂಬದಿದ್ದರೆ ನಿಮ್ಮದೇನೂ ತಪ್ಪಿಲ್ಲ. ಅಷ್ಟು ವಿಚಿತ್ರ ಈ ಅನುಭವ. ಅಂತಹಾಗೆ ಇಲ್ಲಿ ರೆಸ್ಟ್‌ರೂಮ್ ಎಲ್ಲಿದೆ?" ಅಂದ ಕೇಳಿದ ವಸಂತ. ನಾನು "ಆ ಬಾಗಿಲಿನಿಂದ ಹೊರಕ್ಕೆ ಹೋಗಿ ಎಡಕ್ಕೆ ತಿರುಗಿದರೆ ಸಿಗುತ್ತದೆ" ಅಂತ ಉತ್ತರಿಸಿದೆ.

ಶಂಕರ "ಅಂತೂ ಒಳ್ಳೇ ವಿಚಿತ್ರ ಅನುಭವ ಹೇಳ್ಬಿಟ್ನಲ್ಲಾ ವಸಂತ" ಅಂತ ಉದ್ಗರಿಸಿದ. ಮಾತುಕತೆ ಮುಂದುವರಿಯಿತು. ಎಷ್ಟು ಹೊತ್ತಾದರೂ ವಸಂತ ಹಿಂತಿರುಗದಿದ್ದಾಗ ನನಗೆ ಗಾಬರಿ ಆಯಿತು. ರೆಸ್ಟ್‌ರೂಮಿಗೆ ಹೋಗಿ ನೋಡಿದೆ. ಅಲ್ಲಿ ಅವನ ಸುಳಿವೇ ಇರಲಿಲ್ಲ. ಅವನು ತನ್ನ ರೂಮಿಗೆ ಹೋಗಿರಬಹುದು ಅಂದುಕೊಂಡು, ಅವನ ರೂಮ್ ನಂಬರ್ ತಿಳಿಯಲು ರಿಸೆಪ್ಷನ್‌ಗೆ ಹೋದೆ. ವಸಂತ ಬಂಗೇರಾ ಯಾವ ರೂಮಿನಲ್ಲಿದಾರೆ?

ನಿನ್ನೆ ಸಂಜೆ ಚೆಕ್ ಇನ್ ಮಾಡಿದರು "ಅಂತ ಕೇಳಿದೆ. ಆತ ರಿಜಿಸ್ಟರ್ ನೋಡಿ, "ಆ ಹೆಸರಿನವರು ಯಾರೂ ಇಲ್ಲವಲ್ಲಾ" ಅಂತ ಹೇಳಿದ.

"ಅರೆ, ನಾನೇ ಅವರ ಜೊತೆ ಬಂದು ರೂಮ್ ಬುಕ್ ಮಾಡಿದೆ. ಅವರು ರಿಜಿಸ್ಟರ್ ನಲ್ಲಿ ಸಹಿ ಹಾಕಿದ್ದೂ ನೋಡಿದೆ, ಅದು ಹೇಗೆ ಯಾರೂ ಇಲ್ಲ ಅಂತಿ?" ಅಂತ ದಬಾಯಿಸಿದೆ. "ನೀವೇ ನೋಡಿ" ಅಂತ ಅವನು ರಿಜಿಸ್ಟರನ್ನು ನನನ್ನ ಮುಂದೆ ಚಾಚಿದ. ನಿಜ, ಅವನ ಹೆಸರೇ ಇರಲಿಲ್ಲ.

ಅಷ್ಟು ಹೊತ್ತಿಗೆ ನನ್ನ ಮೊಬೈಲ್ ರಿಂಗಾಯಿತು.

"ನಾನು ರೀಮಾ ಬಂಗೇರಾ, ನಿನ್ನೆ ವಸಂತ ಬೆಂಗಳೂರಿಗೆ ಬರೋದಿತ್ತು. ನಿಮ್ಮೊಂದಿಗೆ ಇರ್ತೇನೆ ಅಂತ ಹೇಳಿದ್ದರು. ದುರದೃಷ್ಟದಿಂದ ನಿನ್ನೆ ಬೆಳಗ್ಗೆ ಅಫೀಸಿನಲ್ಲಿ ಹಾರ್ಟ್ ಅಟ್ಯಾಕ್ ಅಗಿ ಹಿ ಪಾಸ್ಡ್ ಅವೇ. ನಿಮಗೆ ಮೋದಲೇ ತಿಳಿಸಲು ಆಗಲಿಲ್ಲ. ಕ್ಷಮಿಸಿ" ಅಂತ ರೀಮಾ ಹೇಳಿದರು.

ನನ್ನ ಸಂತಾಪಗಳನ್ನು ಅವರಿಗೆ ತಿಳಿಸಿ ಫೋನ್ ಕಾಲ್ ಮುಗಿಸಿದೆ. ■

**ಅಪರಂಜಿ 2023 ವಿಶೇಷಾಂಕ**

– ನಮ್ಮ ಲೇಖಕರಿಗೆ ಮನವಿ

ಅಕ್ಟೋಬರ್ 2023 ಅಪರಂಜಿ ವಿಶೇಷಾಂಕ್ಕಾಗಿ ತಿಳಿಹಾಸ್ಯ/ಪ್ರಬಂಧ ಪ್ರಾಕಾರಗಳ ಲೇಖನಗಳನ್ನು ಕಳಿಸಿ. ನುಡಿ 01 ತತ್ರಾಂಶದಲ್ಲಿ ಟೈಪ್ ಮಾಡಿ ಮೈಲ್‌ಗೆ ಅಟ್ಯಾಚ್ ಮಾಡಿ ಕಳಿಸಿದ ಲೇಖನಗಳನ್ನು ಮಾತ್ರ ಪರಿಗಣಿಸಲಾಗುವುದು. ದಯಮಾಡಿ ಗಮನಿಸಿ – ಹಸ್ತಪ್ರತಿಗಳನ್ನು ಸ್ವೀಕರಿಸುವುದನ್ನು ನಿಲ್ಲಿಸಲಾಗಿದೆ. ನಿಮ್ಮ ಲೇಖನಗಳು ನಮಗೆ ಅಪರಂಜಿಯಲ್ಲಿರುವ ಮಿಂಚಂಚೆಗೆ ಆಗಸ್ಟ್ 30ರೊಳಗೆ ತಲುಪಬೇಕು.

## ಪದಕುಲುಮೆ

✍ ಎಸ್ ಎನ್ ಗಣನಾಥ

| | |
|---|---|
| ಸಂಸ್ಥಾಪೆಕರು | ಯೋಗ್ಯತೆ ಇಲ್ಲದಿದ್ದರೂ ಸಂಸ್ಥೆಗಳನ್ನು ಸ್ಥಾಪಿಸುವ ಪೆದ್ದು ಜನ |
| ನುಂಗೋಪ | ಯಾರನ್ನಾದರೂ ನುಂಗುವಂಥ ಕೋಪ |
| ಒಡ್ಡಾರಾಧನೆ | ಜಲಾಶಯಗಳಿಗೆ ಮಾಡುವ ಪೂಜೆ–ಪುನಸ್ಕಾರ |
| ಮೇಘದ್ಯೂತ | ಮಳೆ ಆಧಾರಿತ ಬೇಸಾಯ ಎಂಬ ಜೂಜು |
| ವಿಷ್ಗಳಿಗೆ | ಶುಭಾಶಯ/ಅಭಿನಂದನೆಗಳನ್ನು ಹೇಳುವ ಸಮಯ |
| ಕಸವರ | ತ್ಯಾಜ್ಯ ಸಂಸ್ಕರಿಸಿ ಗಳಿಸಿದ ಹಣದಿಂದ ಖರೀದಿಸಿದ ಚಿನ್ನ |
| ಚತುರಗ | ಜಾಣ ಕುದುರೆ (ಚತುರ + ತುರಗ) |
| ಖಾರಾಗೃಹ | ಆಂಧ್ರದವರ ಅಡುಗೆ ಮನೆ |
| ಗಾಳಿಸುದ್ದಿ | ಬಿರುಗಾಳಿ, ಚಂಡಮಾರುತ ಇವುಗಳ ಕುರಿತಾದ ವರದಿ |
| ಹೊಸಮನಿ | ಇತ್ತೀಚೆಗೆ ಜನಪ್ರಿಯವಾಗುತ್ತಿರುವ ಕ್ರಿಪ್ಟೋ ಕರೆನ್ಸಿ ಉದಾ: ಬಿಟ್ ಕಾಯಿನ್ |
| ದೇವನೊಬ್ಬ | ನೇಮ ಹಲವು ಒಂದೇ ದೇವರಿಗೆ ಮಾಡುವ ವಿವಿಧ ವ್ರತಾಚರಣೆಗಳು |
| ದೋಷಸೇವೆ | ಇನ್ನೊಬ್ಬರ ತಪ್ಪುಗಳನ್ನು ತಿದ್ದುವುದು |
| ಪಾಕತಾಳೀಯ | ಇಬ್ಬರ ಮನೆಯಲ್ಲೂ ಒಂದೇ ದಿನ ಒಂದೇ ಥರದ ಅಡುಗೆ (ಉದಾ: ಬೆಂಡೆಕಾಯಿ ಮಜ್ಜಿಗೆಹುಳಿ) ಮಾಡಿದ್ದಾಗ .......... |
| ಪುತ್ರಾರ್ಜಿತ | ಮಗ ಗಳಿಸಿರುವ ಆಸ್ತಿ |
| ಪ್ರಾಮಾಣಿಕ | ಪ್ರಾಮ್ನಲ್ಲಿ ಮಾತ್ರ ಇಂಥವರನ್ನು ನೋಡಲು ಸಾಧ್ಯ. |
| ಉಪದೇಶ | ಉಪ + ದೇಶ ಅರ್ಥಾತ್ ರಾಜ್ಯ |
| ವೃಥಾಚರಣೆ | ವ್ರತಗಳನ್ನು ತಪ್ಪು ತಪ್ಪಾಗಿ ಮಾಡುವುದು |
| ಸೀಟಿ | ಜನ್ ಶಿಳ್ಳೆ ಹೊಡೆಯಲು ಉತ್ಸುಕನಾದ ನಾಗರಿಕ |
| ಸುರ್ಗಳ್ಳರು | ರಾಗಗಳನ್ನು ಕದಿಯುವವರು |
| ಕೌಮುದಿ | ವಯಸ್ಸಾದ ಹಸು |

■

# ಏತರ್ ಏರಿದಾಗ

✍ನಳಿನಿ ಸೂರ್ಯಪ್ರಕಾಶ್

ಮೂರು ವರ್ಷಗಳ ಹಿಂದೆ, ಅತ್ತ ಇದ್ದ ಕೆಲಸದಿಂದ ಸ್ವಯಂ ನಿವೃತ್ತಿ ತೊಗೊಂಡು, ಇತ್ತ ಮನೆಯಲ್ಲಿ ಫುಲ್ ಟೈಮ್ ಗೃಹಿಣಿಯಾದೆ. ಕಾರಣಾಂತರಗಳಿಂದ ಪತಿರಾಯರು ಗಾಡಿ ಓಡಿಸೋದನ್ನ ನಿಲ್ಲಿಸಿದ್ದರು. ಹಾಗಾಗಿ ವಾಕಿಂಗ್ ಮಾಡುವುದು ಆರೋಗ್ಯಕ್ಕೆ ಒಳ್ಳೇದು ಅಂತ ನಮ್ಮ ಗಾಂಧಿಬಜಾರಿನ ರಸ್ತೆಗಳನ್ನೆಲ್ಲಾ (ನನ್ನ ಚಪ್ಪಲಿಯ ಜೊತೆ) ಸವೆಸಿದೆ. ದಿನಸಿ ಅಂಗಡಿ, ಫ್ಯಾನ್ಸಿ ಸ್ಟೋರ್ಸ್, ಹಾರ್ಡ್‌ವೇರ್ ಶಾಪು, ಮೆಡಿಕಲ್ ಸ್ಟೋರ್ಸು, ಹೂವು–ಹಣ್ಣು–ತರಕಾರಿ, ಬ್ಯಾಂಕು, ಪೋಸ್ಟ್ ಆಫೀಸು, ದೇವಸ್ಥಾನ, ಹೋಟೆಲ್ಲು, ಎಲ್ಲಾ ಕಡೆಗೂ ನಡೆದದ್ದೇ ನಡೆದದ್ದು.

ಹೊಸದರಲ್ಲಿ ಅಗಸ ಎತ್ತಿ ಎತ್ತಿ ಒಗೆದನಂತೆ! ಹಾಗಾಯ್ತು ನನ್ನ ಕತೆ. ಶುರುವಿನಲ್ಲಿ ಕಾಲಿಗೆ ಚಕ್ರ ಕಟ್ಕೊಂಡ ಹಾಗೆ ತಿರುಗ್ತಿದ್ದ ನನ್ನ ಉತ್ಸಾಹ ತಿಂಗಳುಗಳು ವರ್ಷಗಳೆರಡಾಗ್ತಿದ್ದ ಹಾಗೆ ಕಮ್ಮಿಯಾಗ್ತಾ ಬಂತು. ಬ್ಯಾಂಕೊಂದು ದಿಕ್ಕಲ್ಲಿದ್ದರೆ, ದಿನಸಿ ಅಂಗಡಿ ಮತ್ತೊಂದು ದಿಕ್ಕು! ಎರಡೂ ಕೆಲಸ ಒಟ್ಟಿಗೆ ಮನೆ ಬಿಟ್ಟಾಗ ಮುಗಿಸೋಣವೆಂದ್ರೆ ದಿಕ್ಕು ದಿಕ್ಕುಗಳಲ್ಲೂ ಓಡಾಡಬೇಕಾದ ಪರಿಸ್ಥಿತಿ! ಉಸ್ಸಪ್ಪಾ ಅಂದ್ಕೋತ ಹಾಗೇ ರಸ್ತೆ ಸವೆಸ್ತಿದ್ದೆ. ನನ್ನ ಕಣ್ಣುಗಳು ಅದ್ಯಾವಾಗ ಬರ್ರೋ ಬರ್ರೋ ಅಂತ ಹೊಂಡಾ, ಸ್ಕೂಟಿಯೇರಿ ತಿರುಗಾಡುವ ಹೆಂಗೆಳೆಯರನ್ನ ಗಮನಿಸೋದಕ್ಕೆ ಶುರು ಮಾಡಿದ್ದವೋ ನಾ ಕಾಣೆ ! ಲೈಸೆನ್ಸ್ ಇಲ್ಲದ ಹೈಸ್ಕೂಲು ಪಿಳ್ಳೆಗಳು, ಮನೆಗೆಲಸಕ್ಕೆ ಬಂದಿಳಿಯುವ ಕಸಮುಸುರೆ ಮಲ್ಲಿಯರು, ಕಾಲೇಜು ಬಳ್ಳಿಗಳು, ದ್ವಿಚಕ್ರಿಗಳಾಗಿ ಸಮಯದ ಜೊತೆ ರೇಸಿಗಿಳಿದ ಆಫೀಸು ಮಳ್ಳಿಯರು, ಹೋಂ ಮೇಕರ್ ಸಿಲ್ಲಿ ಲಲ್ಲಿಯರು...ಒಟ್ಟಿನಲ್ಲಿ ಎಲ್ರೂ ಹೊಂಡಾರೂಢರಾಗಿ ಬರ್ರೋ ಬರ್ರೋ ಅಂತ ದಿಕ್ಕು ದಿಕ್ಕುಗಳಲ್ಲೂ ಸಾಗುತ್ತಿರುವಾಗ, ನಾ ಮಾತ್ರ ರಸ್ತೆಯ ಹೊಂಡಗಳನ್ನ ದಾಟುತ್ತಾ ದಿಕ್ಕೆಟ್ಟಂತಾದೆ !

ಇನ್ನು ನನ್ನಿಂದಾಗಲ್ಲವೆನಿಸಿ ಅಂತೂ ಒಂದಿನ ನಾನೂ ಗಾಡಿ ಕಲಿಯುವ ತೀರ್ಮಾನಕ್ಕೆ ಬಂದೆ. ಪತಿರಾಯರು ಗೋಣಾಡಿಸಿದರು. ಮಗ ಮಾತ್ರ, ಈ ವಯಸ್ಸಿನಲ್ಲಿ ನಿಂಗ್ಯಾಕೆ ಟ್ರ್ಯಾಫಿಕ್ಕಿನ ಉಸಾಬರಿ, ತೆಪ್ಪಗಿರು ಅಂದ. ಊಹೂಂ ! ಅವನ ಮಾತು ಕೇಳೋರ್ಯಾರು? ಮನೆಯ ಹತ್ತಿರ ಡ್ರೈವಿಂಗ್ ಸ್ಕೂಲಿಗೆ ಸೇರಿಯೇಬಿಟ್ಟೆ. ಎಲ್ಲದಕ್ಕೂ ಸ್ವಯಂ ಪ್ರೇರಣೆ ಮುಖ್ಯ ನೋಡಿ.

ನನ್ನ ಡ್ರೈವಿಂಗ್ ಟೀಚರ್ ಎಂಬ ಲಲನಾಮಣಿ ಮೊದಲನೆಯ ಥಿಯರಿ ಕ್ಲಾಸು ಮುಗಿಸಿದಳು. ಮಾರನೇ ದಿನ ಆಕ್ಸಿಲರೇಟರಿನ ಮೇಲಿನ ಹಿಡಿತದ ಪಾಠ ಶುರುವಾಯಿತು. ಬಲಗಡೆ ಹ್ಯಾಂಡಲ್ ಹಿಡಿದು, ಮಣಿಕಟ್ಟನ್ನು ನಮ್ಮ ಕಡೆಗೆ ತಿರುಗಿಸಿದರೆ ವೇಗ ಹೆಚ್ಚತ್ತೆ, ವಿರುದ್ಧ ದಿಕ್ಕಿಗೆ ತಿರುಗಿಸಿದರೆ ಕಮ್ಮಿಯಾಗತ್ತೆ. ನಂತರದ ಎರಡೂ ಕ್ಲಾಸು ಮಣಿಕಟ್ಟನ್ನು ತಿರುಗಿಸೋದೇ ಆಯ್ತು. ""ನಿಮ್ಮ ಹತ್ರ ಟೂ ವೀಲರ್ ಇಲ್ವಲ್ಲ, ಅದಕ್ಕೆ ಮನೇಲೆ ಲಟ್ಟಣಿಗೆ ಹಿಡಿದು ಅಭ್ಯಾಸ ಮಾಡಿ"" ಅಂದಳು ಲಲನಾಮಣಿ. ಅರೆ! ಲಟ್ಟಣಿಗೆಯನ್ನು ಹೀಗೂ ಉಪಯೋಗಿಸಬಹುದು ಅಂತ ಅವತ್ತೇ ಗೊತ್ತಾಗಿದ್ದು ನೋಡಿ! ಮನೇಲಿ ಲಟ್ಟಣಿಗೆಯನ್ನು ಸ್ಕೂಟಿಯ ಹ್ಯಾಂಡಲ್ ಹಿಡಿದ ಹಾಗೆ ಎರಡೂ ಕೈಯಲ್ಲಿ ಹಿಡಿದು, ಬಲಗೈ ಮಣಿಕಟ್ಟನ್ನು ನಾಜೂಕಾಗಿ ಮೇಲೆ ಕೆಳಗೆ ತಿರುಗಿಸೋದನ್ನ ಅಭ್ಯಾಸ ಮಾಡಿದ್ದೂ ಮಾಡಿದ್ದೆ! ನಂತರದ ಕ್ಲಾಸುಗಳಲ್ಲಿ ಸ್ಕೂಟಿಯೇರಿ ಸ್ಟಾರ್ಟ್

ಮಾಡೋದು, ಕಾಲುಗಳನ್ನು ಕೆಳಗೆ ಬಿಟ್ಟು ಸ್ವಲ್ಪ ಸ್ವಲ್ಪವೇ ಮುಂದೆ ಹೋಗೋದು...ಹೇಗೂ ಟೀಚರಮ್ಮ ಹಿಂದೆ ಗಾಡಿ ಹಿಡ್ಕೊಂಡಿರೋಳು ಎಂಬ ಧೈರ್ಯ! ಆದರೆ ಒಂದಲ್ಲ ಒಂದಿನ ನಾನೊಬ್ಬಳೇ ಓಡಿಸಬೇಕಲ್ಲಾ ಎಂಬ ಯೋಚನೆ ಬಂದಾಗೆಲ್ಲಾ ಕಾಲುಗಳಲ್ಲಿ ಸಣ್ಣಗೆ ನಡುಕ ಶುರುವಾಗೋದು !ಆದರೆ ಸಾವಿರಾರು ರೂಪಾಯಿ ತೆತ್ತಾಗಿದೆ. ಇನ್ನು ಕಲಿಯದೆ ಬೇರೆ ದಾರಿಯೇ ಇರಲಿಲ್ಲ!

ನೀವು ಕ್ಲಾಸು ಮುಗಿಸಿ ಮನೆ ಕಡೆ ಅಭ್ಯಾಸ ಮಾಡಿದಷ್ಟೂ ಬೇಗ ಕಲೀತೀರ ಅಂದಳು ಟೀಚರಮ್ಮ. ಮನೆಯಲ್ಲಿ ಲಟ್ಟಣಿಗೆ ಇಟ್ಕೊಂಡೇ ನಂಗೆ ಸ್ಕೂಟಿಯ ಬ್ಯಾಲೆನ್ಸೂ ಬಂದಿದ್ರೆ ಎಷ್ಟು ಚೆನ್ನಾಗಿರ್‍ತಿತ್ತು! ಯಾವುದಾದ್ರೂ ಟೂ ವೀಲರ್ ಸಿಕ್ಕಿದ್ರೆ ಅಂತ ಪರಿತಪಿಸಿದೆ. ನನ್ನ ಮಹತ್ಕಾರ್ಯಕ್ಕೆ ತನ್ನ ಅಳಿಲು ಸೇವೆ, ಅಲ್ಲಲ್ಲ ಹನೂಮಂತನ ಸೇವೆ ಸಲ್ಲಿಸಿದ ನನ್ನ ತಮ್ಮ, ಅಂದ್ರೆ ನನ್ನ ಚಿಕ್ಕಮ್ಮನ ಮಗ. ತನ್ನ ಹೊಂಡಾವನ್ನ ಮೂರು ನಾಲ್ಕು ಸಲ ನಮ್ಮನೇಗೆ ತಂದ. ಮೈದಾನದಲ್ಲು ನನ್ನ ಅಭ್ಯಾಸಕ್ಕೆ ಜೊತೆಯಾದ. ಇತ್ತತ್ತ ಬಾ ಅಂದ್ರೆ ಇದ್ದ ಮನೇನೆ ಬಿಟ್ಟುಕೊಡು ಅಂತ ಕೇಳೋಕ್ಕಾಗತ್ತ? ನಿನ್ನ ಕೆಲಸ ಬಗಸೆ ಬಟ್ಟು ನಂಗೆ ಗಾಡಿ ಕಲಿಸು ಅಂತ ಅವನನ್ನ ಕೇಳೋ ಹಾಗಿಲ್ಲ. ಅಂತೂ ನನ್ನ ಎರಡು ವಾರದ ಕ್ಲಾಸು ಮುಗಿದೇ ಹೋಯ್ತು! ಕೊನೆಯ ದಿನದ ಹೊತ್ತಿಗೆ ಮೈಯೆಲ್ಲಾ ಕಣ್ಣಾಗಿಟ್ಕೊಂಡು, ಅಳುಕುತ್ತಲೇ ಬ್ಯಾಲೆನ್ಸ್ ಮಾಡ್ತಾ ನಿಧಾನವಾಗಿ ಸ್ಕೂಟಿ ಓಡಿಸುವಷ್ಟು ಮಟ್ಟಿಗೆ ತಯಾರಾದೆ. ಇನ್ನು ನೀವುಂಟು, ನಿಮ್ಮ ಅಭ್ಯಾಸವುಂಟು ಅಂತ ಟೀಚರಮ್ಮ ಟಾಟಾ ಹೇಳಿಬಿಟ್ಟಳು!

ಪೆಟ್ರೋಲ್ ಉಸಾಬರಿಯೇ ಬೇಡ. ಎಲೆಕ್ಟ್ರಿಕ್ ಗಾಡಿಯನ್ನೇ ತೊಗೊಳ್ಳೋಣ ಅಂತ ನಿರ್ಧಾರ ಮಾಡಿದ್ವಿ. ಬುಕ್ ಮಾಡಿದ್ರೆ ಬರೋಕ್ಕೆ ಮೂರು ವಾರವಾದ್ರೂ ಬೇಕು. ಅಷ್ಟರಲ್ಲಿ ನನ್ನ ಅಭ್ಯಾಸದ ಗತಿಯೇನು? ಹೊಂಡಾಕ್ಕಾಗಿ ನನ್ನ ಚಡಪಡಿಕೆ ಶುರುವಾಯ್ತು. ದಿನಗಳುರುಳಿ ಹೋದವು. ಬಾಡಿಗೆ ಗಾಡಿ ತಾ ಅಂದ್ರೆ ನನ್ನ ಮಗ ಸುತರಾಂ ಒಪ್ಪಲಿಲ್ಲ. ನಮ್ಮದೇ ಗಾಡಿ ಬರತ್ತಲ್ಲ, ಪ್ರ್ಯಾಕ್ಟೀಸ್ ಮಾಡು ಅಂದ. ಯೋಚಿಸಿ ಯೋಚಿಸಿ ಹೈರಾಣಾದೆ. ಒಂದಿನ ಇದ್ದಕ್ಕಿದ್ದ ಹಾಗೆ ಮಿಂಚು ಹೊಡೆದ ಹಾಗೆ ಐಡಿಯಾವೊಂದು ಹೊಳೀತು! ಆಗಲೇ ನೆನಪಾಗಿದ್ದು ಪಕ್ಕದ ಮನೆ ಕಸಮುಸುರೆ ಮಲ್ಲಿ, ಉರುಫ್ ರೇಖಾ! ದಿನವೂ ಪಕ್ಕದ ಮನೇಗೆ ಬೆಳಿಗ್ಗೆ ಒಂಭತ್ತೂವರೆ ನಂತರ ಭರ್‍ರ್ ಅಂತ ಹೊಂಡಾರೂಢಳಾಗಿ ಬಂದಿಳೀತಾಳೆ. ಸುಮಾರು ಒಂದು ಘಂಟೆ ಕಾಲ ಪಕ್ಕದ ಮನೆ ಕೆಲಸ ಮಾಡ್ತಾಳೆ. ಅದೇ ಸಮಯದಲ್ಲಿ ಅವಳ ಹೊಂಡಾ ತೊಗೊಂಡು ನಾನು ಅಭ್ಯಾಸ ಮಾಡಿದ್ರೆ ಹೇಗೆ...? ಅಂತ. ಒಂದು ಘಂಟೆಗೆ ಅವಳಿಗೆ ಐವತ್ತೋ ಅರವತ್ತೋ ಕೊಟ್ಟರಾಯಿತು ಅಂತ! ನನ್ನೀ ಭರ್ಜರಿ ಐಡಿಯಾಗೆ ನನ್ನ ಬೆನ್ನು ನಾನೇ ತಟ್ಕೊಂಡೆ!

ಮಾರನೇ ದಿನ ಅವಳು ಬರೋದನ್ನೇ ಬಕಪಕ್ಷಿಯ ಹಾಗೆ ಕಾದೆ. ಅವಳನ್ನ ಕಂಡಾಕ್ಷಣವೇ ಹೋಗಿ, ಹೀಗೆ, ಹೀಗ್ಹೀಗೆ ಅಂತ ಒಂದೇ ಉಸಿರಿನಲ್ಲಿ ಒದರಿದೆ. ಒಪ್ಪಿಕೊಂಡಳು. "ಕೋ" ಅಂತ ಕೀ ಕೈಗಿತ್ತಳು! ನಿಧಿ ಸಿಕ್ಕಂತಾಯ್ತು ನಂಗೆ! ಹಿಗ್ಗಿ ಹೀರೇಕಾಯಾದೆ. ಭರಪೂರ ಒಂದು ಗಂಟೆಕಾಲ ಮನೆಯ ಸುತ್ತಮುತ್ತಲಿನ ಕ್ರಾಸುಗಳಲ್ಲಿ ಓಡಿಸಿದ್ದೂ ಓಡಿಸಿದ್ದೇ. ಹೀಗೆ ದಿನಕ್ಕೊಂದು ಗಂಟೆ ನನ್ನ ಅಭ್ಯಾಸ ಸಾಗಿತ್ತು. ಅವಳಿಗೂ ಒಂದಷ್ಟು ಲಾಭ! ಒಂದು ವಾರದ ಹೊತ್ತಿಗೆ ಬುಲ್ ಟಂಪಲ್ ರಸ್ತೆ, ಸಿಟಿ ಮಾರ್ಕೆಟ್, ಎಲ್ಲಾ ಸುತ್ತಿದೆ. ಕೊನೆಗೊಂದಿನ ಧೈರ್ಯ ಮಾಡಿ ಜೆ.ಸಿ.ರಸ್ತೆಗೆ ಗಾಡಿ ನುಗ್ಗಿಸಿದೆ! ಅಂತೂ ನಿರಾತಂಕವಾಗಿ ಓಡಿಸಿ, ಮಾರ್ಕೆಟ್ಟಿನ ಫ್ಲೈಓವರ್ ಮೇಲೆ ಸಾಗಿ ಮನೆ

ತಲುಪಿದೆ. ವಾಹ್! ತಕ್ಕ ಮಟ್ಟಿಗೆ ಧೈರ್ಯದಿಂದ ಓಡಿಸಬಲ್ಲೆ ಎಂಬ ಆತ್ಮವಿಶ್ವಾಸ ಅಷ್ಟುಹೊತ್ತಿಗೆ ಬಂತು. ಅಲ್ಲಿಗೆ ಒಂದು ಹತ್ತು ದಿನ ಅಭ್ಯಾಸವಾಗಿತ್ತೆನ್ನಿ.

ನಂತರ ಒಂದೆರಡು ದಿನಗಳಲ್ಲಿ ನಾವು ಬುಕ್ ಮಾಡಿದ್ದ ಎಲೆಕ್ಟ್ರಿಕ್ ಗಾಡಿ ಡೆಲಿವರಿ ತೊಗೊಂಡ್ವಿ. "ಏತರ್" ಗಾಡಿ, ಬೂದು ಬಣ್ಣದ್ದು. ಜಯನಗರದ ಗಣಪತಿ ದೇವಸ್ಥಾನದಲ್ಲಿ ಪೂಜೆ ಮಾಡಿಸಿಕೊಂಡು ಬಂದ್ವಿ. ನನ್ನದೇ ಗಾಡಿಯ ಮೇಲೆ ಕೂರುವ ಸುದಿನ ಬಂದೇಬಿಡ್ತು. ಹೆತ್ತೋರಿಗೆ ಹೆಗ್ಗಣ ಮುದ್ದು ಅಂತೆ. ಕೊನೆಗೂ ತನ್ನ ಮಗಳು ಛಲ ಬಿಡದೆ ಗಾಡಿ ಕಲಿತೇಬಿಟ್ಳು ಅಂತ ನನ್ನ ಅಮ್ಮ ಹೊರಗೆ ಬಂದು ನಾನು ಗಾಡಿ ಬಿಡೋದನ್ನ ಕಣ್ಣುತುಂಬಿಕೊಂಡ್ರೆ, ನಮ್ಮತ್ತೆಯೂ ಖುಷಿ ಪಟ್ಟರು. ಈಗಾಗಲೇ ಗಾಡಿ ಬಿಡುವ ಓರಗಿತ್ತಿ ಓರೆಗಣ್ಣಿನಿಂದ ನೋಡಿದ್ರೆ, ಪಕ್ಕದ ಮನೆ ವಿಜಯ ನಂಗೂ ಗಾಡಿ ಕಲಿಸ್ತೀರೇನ್ರಿ ಅಂತ ಕೇಳಿದರು. ಎದುರು ಮನೆಯ ವಾಚ್ಮನ್ನು, ಅಂತೂ ಮೇಡಮ್ಮು ಗಾಡಿ ಕಲ್ತೇಬಿಟ್ರು ಅಂತ ಉದ್ಗರಿಸಿದ. ಒಟ್ಟಿನಲ್ಲಿ ಬೆಂಗಳೂರಿನಲ್ಲಿ ಗಾಡಿ ಓಡಿಸೋದು ನಾನು ಕನಸಿನಲ್ಲೂ ಊಹಿಸದ ಸಂಗತಿಯಾಗಿತ್ತು. ಕಲಿತ ಮೇಲೆ ನನಗೇ ಆಶ್ಚರ್ಯ ! ಅದಕ್ಕೇ ಹೇಳೋದಲ್ವೇ, ಕಲಿಯೋ ತನಕ ಬ್ರಹ್ಮ ವಿದ್ಯೆ, ಕಲಿತ ಮೇಲೆ ಕೋತಿ ವಿದ್ಯೆ ಅಂತ!!

■

## ಲಕ್ಷ್ಮಣ್ ಕೊರವಂಜಿ

ನಲವತ್ತರ ದಶಕದಲ್ಲಿ ಯುವ ಕನ್ನಡಿಗ ಆರ್.ಕೆ. ಲಕ್ಷಣ್ ಕೊರವಂಜಿಗಾಗಿ ರಚಿಸಿ ಕೊಟ್ಟ ವ್ಯಂಗ್ಯಚಿತ್ರಗಳು ಹಲವು.

ಅವುಗಳಲ್ಲಿ ಇದೂ ಒಂದು – ನಿಮಗಾಗಿ.



“ಏನೋ, ನಿಮ್ತಂದೆ ಹೇಳಿದ್ಮಾತೇ ಕೇಳೋದಿಲ್ವಂತೆ ’ ?

“ಹೌದು ಸಾರ್, ಸ್ವಲ್ಪಾನು ಕೇಳೋದಿಲ್ಲ ಅವರು. ಬೆಳಗ್ಗೆ ಸ್ಕೂಲ್ಗೆ ಹೋಗೊಲ್ಲಾಂದ್ರೆ, ಹೋಗ್ಲೇಬೇಕೂಂತ ಹಟಹಿಡಿದ್ರು”—

# ಹಂಡೆ ಹನುಮ

✍ ವೈ. ಎನ್. ಗುಂಡೂರಾವ್

ದುಡಿಯುವವರಿಗಿಂತ ದೋಚುವವರೇ ಜಾಸ್ತಿ' ಅಂತಾ ಹೇಳಿದ ಹಾಗೆ ಹಳ್ಳಿಗಳಲ್ಲಿ ದುಡಿದು ತಿನ್ನುವುದಕ್ಕಿಂತ ಪುಗಸಟ್ಟೆ ಸಿಕ್ಕರೆ ತಿಂದು, ಕಾಡು ಹರಟೆ ಹೊಡೆಯುತ್ತಾ ಕುಳಿತಿರುವವರಿಗೇನು ಕಡಿಮೆಯಿರುತ್ತಿರಲಿಲ್ಲ.

ಪುಗಸಟ್ಟೆ ಸಿಗಲಿಲ್ಲವೆಂದು ಮೇಲೆ ಮತ್ತೇನು ಮಾಡಲು ಸಾಧ್ಯ? ಅಲ್ಲಿ – ಇಲ್ಲಿ, ಸಣ್ಣ–ಪುಟ್ಟ ಕಳ್ಳತನಕ್ಕಿಳಿದು ಹೊಟ್ಟೆ ಹೊರೆದು ಕೊಳ್ಳುವುದು ಬೀಡಿ, ಸಿಗರೇಟಿಗೆ ಕಾಸು ಸಂಪಾದಿಸಿಕೊಳ್ಳುವುದು ಇವೆಲ್ಲ ಸಾಮಾನ್ಯ.

ಇವೆಲ್ಲ ಒಂದು ಹಂತದವರೆಗೆ ಸರಿ. ಕಳ್ಳತನ ಮಾಡಿದರೂ ಯಾರ ಗಮನಕ್ಕೂ ಬಾರದಂತಿದ್ದರೆ ಸರಿ. ಇಲ್ಲವೇ ಒಂದು ಸಾರಿ ಸಿಕ್ಕಿಬಿದ್ದು ಕಳ್ಳನೆನಿಸಿಕೊಂಡ ಮೇಲೆ ಯಾರೂ ಅಂತಹವರನ್ನು ನಂಬುತ್ತಿರಲಿಲ್ಲ. ಆದರೆ ಒಂದು ಸಾರಿ ಕಳ್ಳತನದ ಕಸುಬಿಗೆ ಬಿದ್ದವರ ಕೈ ಕಡಿಯುತ್ತಲೇ ಇರುತ್ತದೆ. 'ಹೋಗು ಏನಾದರು ಕದ್ದು ಬಾ' ಎಂದು ತುರಿಸಿದ ಅಂಗೈ ದಾರಿ ತೋರಿಸತೊಡಗುತ್ತದೆ ಈ ಸ್ಥಿತಿ ತಲುಪಿದವ ಖಂಡಿತ ಸುಮ್ಮನೆ ಕೂಡಲಾರ. ಹನುಮನ ಸ್ಥಿತಿಯೂ ಇದೇ ಆಗಿತ್ತು.

ಸಣ್ಣ–ಪುಟ್ಟ ಕಳ್ಳತನದಿಂದಲೇ ಜೀವನ ಸಾಗಿಸುವ ಹಂತ ತಲುಪಿದ್ದ. ಆದರೆ ಹಂಡೆ ಹನುಮ ಎನ್ನುವ ಹೆಸರಿಗೆ ತಕ್ಕಂತೆ ಗುಡಾಣದಂತಹ ಹೊಟ್ಟೆ ಇದ್ದುದರಿಂದ ಹನುಮನಿಗೆ ಈ ಹೆಸರು ಬಂತೋ ಇಲ್ಲವೇ ಹಂಡೆ ಕದಿಯುತ್ತಿದ್ದುದರಿಂದ ಬಂತೋ ದೇವರಿಗೇ ಗೊತ್ತು. ಹನುಮ ಮೊದಮೊದಲು ಯಾರಿಗೂ ತಿಳಿಯದಂತೆ ಹೊಲಗದ್ದೆಗಳಲ್ಲಿ ಬೆಳೆ ಬಲಿತಾಗ ಕಳ್ಳತನ ಮಾಡುತ್ತಿದ್ದವ ತನ್ನ ಕಾರ್ಯಕ್ಷೇತ್ರವನ್ನು ಪಕ್ಕದ ಹಳ್ಳಿಗಳಿಗೂ ವಿಸ್ತರಿಸಿಕೊಂಡ . ಆದರೆ ಸದಾಕಾಲ ಊರ ಹೊರಗೇ ಸುತ್ತುತ್ತಾ ಕೈಯಲ್ಲಿ ಹಣ ಹಿಡಿದು ಝುಣಗುಟ್ಟಿಸುತ್ತಿದ್ದರೆ ಯಾರಿಗಾದರೂ ಸಂಶಯ ಬಂದೇ ಬರುತ್ತದೆ.

ಆದರೂ ನಮ್ಮ ಊರಿನ ಜನ ತಮ್ಮ ಹುಷಾರಿನಲ್ಲಿ ತಾವಿದ್ದರು. ಒಮ್ಮೆ ಗೊಂತಿನಲ್ಲಿರುವ ಹಸುವನ್ನು ಮೇಯಲು ಬಿಡಲು ಯಾರೂ ಮನೆಯಲ್ಲಿ ಇಲ್ಲದಿದ್ದುದರಿಂದ ದಾರಿಯಲ್ಲಿ ಹೋಗುತ್ತಿದ್ದ ಹನುಮನನ್ನು ಕರೆದರು ನಮ್ಮಮ್ಮ. ಹಸು ಬಿಟ್ಟವ ಕೊಟ್ಟಿಗೆ ಮೂಲೆಯ ಬಚ್ಚಲು ಮನೆಯಲ್ಲಿದ್ದ ತಾಮ್ರದ ಹಂಡೆಯ ಮೇಲೆ ಅವನ ದೃಷ್ಟಿ ಬಿತ್ತು. ಪಾಪ, ಕರೆದ ತಕ್ಷಣ ಸಹಾಯ ಮಾಡಿದನಲ್ಲ ಎಂದು ಕಾಫಿ ಕೊಟ್ಟು ಕಳಿಸಿದರು.

ಹೊಸ ತಾಮ್ರದ ಹಂಡೆಯನ್ನು ತಂದಿದ್ದು ನೀರೊಲೆಯ ಮೇಲೆ ಕೂಡಿಸಿದ್ದು ಅದಕ್ಕೆ ಭದ್ರವಾಗಿ ಇಟ್ಟಿಗೆ ಗೋಡೆ ಕಟ್ಟಿಸಿರಲಿಲ್ಲ. ಇವೆಲ್ಲ ಹನುಮನಿಗೆ ಭಾರಿ ಸಹಾಯಕವಾದವು. ನಾಲ್ಕಾರು ದಿವಸ ಕಳೆದ ಮೇಲೆ ಹಂಡೆ ನಾಪತ್ತೆ? "ಅಯ್ಯಯ್ಯೋ ಹಂಡೆ ಕಟ್ಟೆ ಕಟ್ಟಿಸೋದ್ರೊಳಗೇ ಹಂಡೆನೇ ಎತ್ಕೊಂಡು ಹೋದ್ರಲ್ಲಪ್ಪಾ" ಎಂದು ಕೊಂಡು ಅಮ್ಮ ಅಪ್ಪನೊಂದಿಗೆ ಹನುಮ ಬಂದಿದ್ದ ವಿಷಯ ತಿಳಿಸಿದಳು. ಅಪ್ಪನಿಗೆ ಮೊದಲೇ ಆತನ ಮೇಲೆ ಸಂಶಯ ಬಂದಿದ್ದರೂ ಈಗ ಖಚಿತವಾದಂತಾಯ್ತು. ಹಂಡೆ ಕದ್ದನಂತರ ಹನುಮ ನಾಲ್ಕಾರು ದಿವಸ ನಾಪತ್ತೆಯಾದ.

ಅವನು ಹಂಡೆ ಮಾರುವ ಮೊದಲೇ ಹಿಡಿದು ಪೊಲೀಸರಿಗೊಪ್ಪಿಸಬೇಕೆಂಬ ಛಲ ಅಪ್ಪನಿಗೆ. ರಾತ್ರಿ ಹಗಲು ಅವನ ಮನೆಯ ಹತ್ತಿರ ಠಳಾಯಿಸುತ್ತಾ ಎಲ್ಲಿ ಹೋಗ್ತಾನೆ, ಏನು ಮಾಡ್ತಾನೆ ಎಂಬುದನ್ನು ತಿಳಿಯಲು ಬಾತ್ಮೀದಾರನೊಬ್ಬನನ್ನು ಬಿಟ್ಟರು.

ಊರಾಚೆ ಗುಡ್ಡದ ಬಳಿ ಇದ್ದ ಪಟೇಲ ಏತದ ಬಾವಿಯಲ್ಲಿ ಹಂಡೆಯನ್ನು ಮುಳುಗಿಸಿರುವ ವಿಷಯವನ್ನು ಬಾತ್ಮೀದಾರ ಪತ್ತೆ ಹಚ್ಚಿದ. ಹನುಮ ಹಂಡೆಯನ್ನು ಮೇಲೆತ್ತಿ ಸಾಗಿಸಲು ಪಟೇಲರ ಬಾವಿಯ ಬಳಿ ಹೋದಾಗಲೆಲ್ಲಾ ಹೊಲದ ಬಳಿ ಯಾರಾದರು ಕೆಲಸಗಾರರು ಇರುತ್ತಿದ್ದುದರಿಂದ ಮೇಲೆತ್ತಿ ಸಾಗಿಸಲಾಗಲಿಲ್ಲ. ಹನುಮ ಕೆಲಸವಿಲ್ಲದೆ ಪಟೇಲರ ಬಾವಿಯ ಬಳಿ ಸುಳಿದಾಡುತ್ತಿದ್ದುದನ್ನು ಕಂಡು ಬಾತ್ಮೀದಾರ ಅಪ್ಪನಿಗೆ ವರದಿ ಒಪ್ಪಿಸಿದ.

ಬಾತ್ಮೀದಾರನೊಡನೆ ಹೋದ ಅಪ್ಪ ಬಾವಿಯನ್ನೊಮ್ಮೆ ಅಜಮಾಯಿಷಿ ಮಾಡಿ ದುಮುಕೇಬಿಟ್ಟರು. ಹುಚ್ಚುಹೊಳೆ ಸುವರ್ಣಾವತಿಯನ್ನೇ ದಾಟಿ ಬಂದಿದ್ದವರಿಗೆ ಬಾವಿ ಯಾವ ಲೇಕ್ಕ? ಹೊಲದಲ್ಲಿ ಕೆಲಸ ಮಾಡುತ್ತಿದ್ದವರನ್ನು ಕರೆದು ಹಂಡೆಯನ್ನು ಮೇಲಕ್ಕೆಳೆಸಿತಂದು, ಬಚ್ಚಲು ಮನೆಯಲ್ಲಿ ಇಟ್ಟಿಗೆ ಕಟ್ಟೆ ಕಟ್ಟಿ ಸಿದ್ದಪಡಿಸಿದರು.

ನಾಪತ್ತೆಯಾದ ಹನುಮ ಊರಿಗೆ ಬಂದಾಗಲೆ ಅವನಿಗೆ ತಿಳಿದದ್ದು, ಸಿಕ್ಕಿದ ತಾಮ್ರದ ಹಂಡೆ ಕೈಬಿಟ್ಟು ಹೋಯ್ತಲ್ಲ ಅನ್ನುವುದು. ಅಪ್ಪನೂ ಅವನೊಡನೆ ಏನು ಮಾತನಾಡದೆ, ತಮಗೆ ಏನೂ ತಿಳಿಯದವರಂತೆ ಸುಮ್ಮನಿದ್ದುಬಿಟ್ಟರು.

ಸ್ವಲ್ಪ ದಿನ ಕಳೆದಿರಬಹುದು. ಪಕ್ಕದ ಮನೆಯ ತೊಟ್ಟಿಯಲ್ಲಿಟ್ಟಿದ್ದ ಎರಡು ತಾಮ್ರದ ಬಿಂದಿಗೆಗಳು ಕಾಣೆಯಾದವು. ಮನೆಯ ಯಜಮಾನರು ಆಳು–ಕಾಳುಗಳನ್ನೆಲ್ಲಾಕರೆಸಿ ವಿಚಾರಿಸಿದರು. ಸಿಗಲಿಲ್ಲ. ಅಪ್ಪನ ಕಿವಿಗೂ ಈ ವಿಷಯ ಬಿತ್ತು. ನಾನು ಹುಡುಕಿ ಕೊಡ್ತೇನೆ ಸುಮ್ಮನಿರಿ ಎಂದು ಹೇಳಿ, ಮನೆಯ ಯಜಮಾನರಿಗೆ ಯಾವ ವಿಷಯವನ್ನು ತಿಳಿಸಿದೆ ಹನುಮನ ಮನೆಯ ಮೇಲೆ ಕಣ್ಣಿಡಲು ಬಾತ್ಮೀದಾರನೊಬ್ಬನಿಗೆ ತಿಳಿಸಿದರು.

ಹನುಮ ತಡರಾತ್ರಿ ಬರುವ. ಉಂಡು ಮಲಗುವ. ಬೆಳಗಿನ ಜಾವಕ್ಕೆ ಎದ್ದು ಹೋಗಿಬಿಡುವ. ಅವನನ್ನು ಮಾಲು ಸಹಿತ ಹಿಡಿಯುವುದು ಕಷ್ಟವೇ ಎನಿಸಿದಾಗ ತಾಲ್ಲೂಕು ಕೇಂದ್ರಕ್ಕೆ ಹೋದ ನಮ್ಮಪ್ಪ ಪೊಲೀಸಿನವನೊಬ್ಬನನ್ನು ಮಫ್ತಿಯಲ್ಲಿ ಬಂದು ಕಾಯುವಂತೆ ಏರ್ಪಡಿಸಿದರು. ಹಸುವಿನ ದಳ್ಳಾಳಿ ಎಂದು ಹೇಳಿಕೊಂಡು ಬಂದ ಮಫ್ತಿ ಪೊಲೀಸಿನವ ಊರವರೆಲ್ಲರ ಸ್ನೇಹ ಸಂಪಾದಿಸುತ್ತಾ ಆಗಾಗ್ಗೆ ಹನುಮನ ಮನೆಗೂ ಹೋಗಿ' ಬೀಡಿ ಹಚ್ಕೊಳ್ಳಕ್ಕೆ ಬೆಂಕಿ ಕೊಡವ್ವ' ಎಂದು ಹನುಮನ ಹೆಂಡತಿ ನಂಜಿಯನ್ನು ಮಾತಾಡಿಸಿ ಅವಳ ಸ್ನೇಹವನ್ನು ಗಿಟ್ಟಿಸಿಕೊಂಡ.

ಚೆಂದುಳ್ಳಿ ಇವನ ಬಲೆಗೆ ಬಿದ್ದಳು. ಕಳ್ಳನನ್ನು ಹಿಡಿಯಲು ಬಂದ ಮಫ್ತಿ ಹನುಮನ ಹೆಂಡತಿಯೊಡನೆ ಕುಶಾಲು ನಡೆಸತೊಡಗಿದ. ಇದು ಹೇಗೊ ಹನುಮನಿಗೆ ತಿಳಿದು 'ಅವನಿಗೊಂದು ಗತಿ ಕಾಣಿಸ್ತೀನಿ ತಾಳು' ಎಂದುಕೊಂಡು ಬಂದ ಹನುಮನೊಡನೆ ತಾನು ಬಂದ ವಿಷಯವನ್ನು ಪಿಸುಗುಟ್ಟಿ "ನನ್ನನ್ನೇ ಎದುರು ಹಾಕಿಕೊಂಡರೆ ಜೈಲು ಸೇರಿಸ್ತೀನಿ ರೆಡಿಯಾಗು" ಎಂದು ಮಫ್ತಿ ಹೆದರಿಸಿದಾಗ ಹನುಮ ಬಾಯಿ ಮುಚ್ಚಿಕೊಳ್ಳಬೇಕಾಯಿತು. ಹೀಗೆ ಬೆದರಿಕೆ ಹುಟ್ಟಿಸಿದ ಮಫ್ತಿಯವನಿಗೆ ನಂಜಿಯೊಡನೆ ಸರಸವಾಡಲು ರಹದಾರಿ ಸಿಕ್ಕಂತಾಯಿತು . ಮಫ್ತಿಯವನೇ ಕಳ್ಳನೊಡನೆ

ಶಾಮೀಲಾಗಿದ್ದು ತಿಳಿದ ನಮ್ಮಪ್ಪ ಬೇರೆ ದಾರಿ ಹುಡುಕತೊಡಗಿದರು. ಕೂಡು ರಸ್ತೆಯಲ್ಲಿದ್ದ ಹನುಮನ ಮನೆಯ ಮೇಲೆ ಕಣ್ಣಿಡಲು ಇಬ್ಬರು ಮೂವರನ್ನು ನೇಮಿಸಿದಾಗ ಒಂದು ದಿನ ತಡರಾತ್ರಿ ಮನೆಗೆ ಮೆಲ್ಲನೆ ಹನುಮ ನುಸುಳಿದಾಗ ಬಾತ್ಮೀದಾರನ ಕಣ್ಣಿಗೆ ಬಿದ್ದು ನಮ್ಮಪ್ಪನಿಗೆ ಸುದ್ದಿ ಮುಟ್ಟಿಸಿದ. ಮೂವರು ಒಟ್ಟಿಗೆ ಹೋಗಿ ಬಾಗಿಲು ಬಡಿದರು .

'ಇವತ್ತು ಬಡ್ಡಿ ಮಗ ಸಿಕ್ಕಿಬಿದ್ದ, ಅದು ಹ್ಯಾಗೆ ತಪ್ಪಿಸ್ಕೊಳ್ತಾನೆ' ಎಂದು ಕೊಂಡರು. ನಂಜಿ ಗಾಬರಿಯಿಂದಿದ್ದವಳಂತೆ ನಟಿಸುತ್ತಾ ಬಾಗಿಲು ತೆಗೆದು, "ಏನ್ಸೋಮಿ ಇಷ್ಟೊತ್ನಾಗ" ಎಂದಳು. "ಹೀಗೆ ಸ್ವಲ್ಪ ಕೆಲ್ಸ ಇತ್ತು ಹನುಮನ ಈಚೆಗೆ ಕಳಿಸು" ಎಂದರು ನಮ್ಮಪ್ಪ "ಅಯ್ ಅವರ ಮುಖ ಕಂಡು ಮೂರ್ ಜಿನ ಆಯ್ತು. ಅದೆಲ್ಲಿ ಹ್ವಾದ್ನೋ, ಎನ್ ಕತೆಯೋ.." ಎಂದು ರಾಗಿ ಎಳೆದಳು. "ನೋಡು ಅವನು ಅರ್ಧ ಗಂಟೆಗೆ ಮುಂಚೆ ಒಳಗೆ ಹೋಗಿದ್ದನ್ನು ನಾನೇ ಕಂಡಿದ್ದೇನೆ. ಕರೆಯುತ್ತೀಯೊ ಇಲ್ಲೊ ಹೇಳು" ಎಂದರು ಕೊಂಚ ಗಡಸು ಧ್ವನಿಯಿಂದ. "ಅಯ್ಯೊ ಸಿವನೆ... ಬೇಕಾದ್ರೆ ನೀವೆ ನೋಡ್ಕಳ್ಳಿ ಒಳಗೆ ಬಂದು" ಎಂದು ಬಾಗಿಲು ತೆರೆದಿಟ್ಟಳು.

ಮೂರು ಜನರು ಒಳಗೆ ಹೋಗಿ ನೋಡಿದರೆ ಹನುಮನ ಪತ್ತೆಯೇಯಿಲ್ಲ. ಅದೇನು ಏಳೆಂಟು ಕೊಠಡಿಯ ಮನೆಯೇ! ಇರೋದೆ ಎರಡು ಅಂಕಣದ ಮನೆ. ಅಲ್ಲೇ ಎಲ್ಲ ಸರ್ವಸ್ವವೂ ಇತ್ತು. ಮೂವರು ಒಳಗೆ ನೋಡಿದರೆ ಅಲ್ಲೆಲ್ಲೂ ಕಾಣದಾದ. ಕಳ್ಳತನದ ವಿದ್ಯೆಯ ಜೊತೆಗೆ ಕಣ್ಕಟ್ಟು ವಿದ್ಯೆಯನ್ನು ಕಲಿತಿದ್ದಾನ ಎಂದುಕೊಂಡ ಬಾತ್ಮೀದಾರರು ಪೆಚ್ಚಾಗಿ ಒಬ್ಬರ ಮುಖವನ್ನೊಬ್ಬರು ನೋಡಿ, ಏನು ಮಾಡುವುದೆಂದು ಅಪ್ಪನ ಮುಖ ನೋಡಿದರು. ಅಪ್ಪನಿಗೆ ಸಂಶಯ ಬಂತು. ಅವಿತಿಟ್ಟುಕೊಳ್ಳುವುದಕ್ಕೆ ಜಾಗವೇ ಇಲ್ಲ. ಹಾಗಾದರೆ ಎಲ್ಲಿ ಮಾಯವಾದ? ಅಪ್ಪನಿಗೆ ಸಂಶಯ ಬಂದು ಗೋಡೆಗೆ ಕರ್ಟನ್ ರೀತಿ ಅರ್ಧ ಸೀರೆಯನ್ನು ಹರಿದು ಕಟ್ಟಿದ್ದ ಬಟ್ಟೆಯನ್ನು ಸರಿಸಿ ನೋಡಿದರೆ ಅಲ್ಲಿ ತುಂಡು ಚಾಪೆಯನ್ನು ಇಳಿಬಿಟ್ಟಿದ್ದು ಕಂಡರು. ಅದನ್ನೇ ಕ್ಷಣಕಾಲ ದಿಟ್ಟಿಸಿದರು. ಚಾಪೆಯನ್ನು ಸರಿಸಿ ನೋಡಿದರೆ ಒಬ್ಬ ಮನುಷ್ಯ ತೂರುವಂತಹ ಕಂಡಿ. ಆಗಲೇ ಮೂವರಿಗೂ ಅರ್ಥವಾದದ್ದು. ಹನುಮ ಆ ಕಂಡಿಯಲ್ಲಿ ತೂರಿ ತಪ್ಪಿಸಿಕೊಂಡು ಹೋಗಿದ್ದಾನೆಂಬುದು.

"ನಿಜ ಹೇಳಿಬಿಡು, ಎಷ್ಟು ದಿವಸದಿಂದ ಈ ರೀತಿ ಮಾಡುತ್ತಿದ್ದಾನೆ. ಯಾರು ಹೇಳಿಕೊಟ್ಟರು ಹೀಗೆ ಮಾಡಲು?" ಎಂದು ಗದರಿಸಿ ಕೇಳಿದಾಗ ನಂಜಿ ಬಾಯಿ ಬಿಟ್ಟಳು. ಇಲ್ಲಿಗೊಬ್ಬ  ಹಸುವಿನ ದಳ್ಳಾಳಿ ಅಂತ ಬರ್ತಿದ್ದನಲ್ಲಾ ಅವನೇ ಈ ಉಪಾಯ ಹೇಳ್ಕೊಟ್ಟ ಎಂದು ನಿಜ ಹೇಳಿ ಬಿಟ್ಟಳು. ಅಪ್ಪನಿಗೆ ಕೋಪ ತರಿಸಿತು. ಕಳ್ಳನನ್ನು ಹಿಡಿಯಲು ಮಫ್ತಿಯಲ್ಲಿ ಪೊಲೀಸಿನವನನ್ನು ಹಾಕಿದರೆ ನಂಜಿಯ ಮೇಲಿನ ಆಸೆಯಿಂದ ಅವನೇ ಕಳ್ಳನೊಡನೆ ಶಾಮೀಲಾದರೆ ಹೇಗೆ? ಬೇಲಿಯೇ ಎದ್ದು ಹೊಲ ಮೇಯ್ದಂತಾಯಿತಲ್ಲ ಎಂದುಕೊಂಡು ಮಾರನೆಯ ದಿನ ತಾಲ್ಲೂಕು ಕೇಂದ್ರಕ್ಕೆ ಹೋಗಿ ಇನ್ಸ್ ಪೆಕ್ಟರನ್ನು ಕಂಡು ವಿಷಯ ತಿಳಿಸಿದರು. ಬೇರೊಬ್ಬ ನಂಬಿಕೆಯ ಪೊಲೀಸಿನವನನ್ನು ಕಳುಹಿಸಿದಾಗ ನಾಲ್ಕನೆಯ ದಿನ ಹನುಮ ಸಿಕ್ಕಿಬಿದ್ದ. ಒಂದು ಬಿಂದಿಗೆ ಮಾರಾಟ ಮಾಡಿದ್ದು ಇನ್ನೊಂದನ್ನು ಅವಿತಿಟ್ಟ ಜಾಗವನ್ನು ತಿಳಿಸಿದ. ಎರಡನ್ನು ಜಪ್ತಿ ಮಾಡಿದ ಇನ್ಸ್ ಪೆಕ್ಟರ್ ಕದ್ದು ಮಾಲು ಕೊಂಡವನಿಗೆ ಜೈಲಿಗೆ ಹಾಕ್ತೀನಿ ಎಂದು ಹೆದರಿಸಿ ಬಿಟ್ಟುಬಿಟ್ಟರು. ಹನುಮನಿಗೆ ಮೂರು ತಿಂಗಳ ಜೈಲು ಶಿಕ್ಷೆ ವಿಧಿಸಿದರು . ■

# ಫಜೀತಿಯಾದ ಆಚೆಮನೆ ಸುಬ್ಬಮ್ಮನ ಹಾಡು!

✍ ಆಶಾ ರಘು

ಹಿರಿಯರ ಬದುಕಿನ ಜಂಜಾಟದ ಅನುಸಾರ ನಾನೂ ಹಲವು ಶಾಲೆಗಳಲ್ಲಿ (ಸಂಪಿಗೆ, ಜಾಲಹಳ್ಳಿ, ಮತ್ತಿಕೆರೆ, ಮತ್ತೆ ಸಂಪಿಗೆ, ಆನಂತರ ಬಾಗಲಗುಂಟೆ) ಪ್ರಾಥಮಿಕ ಶಿಕ್ಷಣವನ್ನು ಪಡೆಯಬೇಕಾಯಿತು. ಹಾಗೆ ಮತ್ತಿಕೆರೆಯ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಮೂರನೆ ತರಗತಿಯಲ್ಲಿ ಓದುತ್ತಿರುವಾಗ ನಡೆದ ಒಂದು ಸಾಂಸ್ಕೃತಿಕ ಕಾರ್ಯಕ್ರಮದ ನೆನಪು ನನಗಿನ್ನೂ ಹಸಿರಾಗಿದೆ.

'ಆಚೆಮನೆಯ ಸುಬ್ಬಮ್ಮನಿಗೆ ಏಕಾದಶಿ ಉಪವಾಸ.. ಎಲ್ಲೋ ಸ್ವಲ್ಪ ತಿಂತಾರಂತೆ ಉಪ್ಪಿಟ್ಟು ಅವಲಕ್ಕಿ ಪಾಯ್ಸ' ಎಂಬ ಹಾಡು ಆ ದಿನಗಳಲ್ಲಿ ನನ್ನ ಹಾಡೇ ಆಗಿತ್ತು. ನಮ್ಮ ತಾಯಿಯ ಅಜ್ಜಿ, ಎಂದರೆ ನನ್ನ ಮುತ್ತಜ್ಜಿ ರಂಗನಾಯಕಮ್ಮ (ಬಂಗಾರು ಪಾಟಿ) ಯಾವಾಗ ಅವರ ಮನೆಗೆ ಹೋದರೂ, 'ಏ ಆಶಿ.. ಆಚೆಮನೆ ಸುಬ್ಬಮ್ಮ ಪಾಡು' (ತಮಿಳಿನಲ್ಲಿ ಪಾಡು ಎಂದರೆ ಹಾಡು ಎಂದು.) ಎನ್ನುತ್ತಿದ್ದರು. ನಾನು ಹಾಡುವುದಷ್ಟೇ ಅಲ್ಲ, ಹಾಡುತ್ತಾ ಅಭಿನಯಿಸುತ್ತಾ ನರ್ತಿಸುತ್ತಿದ್ದೆ.

ಯಾರೇ 'ಹಾಡು' ಎಂದು ಕೇಳಿದರೂ ಮೊದಲಿಗೆ ಇದೇ ಹಾಡನ್ನೇ ಹಾಡುತ್ತಿದ್ದೆನಾಗಿ, ಅದನ್ನು ಮೆಚ್ಚಿದ ಟೀಚರ್, 'ನಮ್ಮ ಶಾಲೆಯ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ನೀನು, ಒಂದನೇ ತರಗತಿಯಲ್ಲಿ ಓದುತ್ತಿರೋ ನಿನ್ನ ತಂಗಿ ರಾಣಿ ಇದೇ ಹಾಡನ್ನು ಹಾಡಿರಿ' ಎಂದರು.

ನನಗೆ ನರ್ತಿಸಲು ಕಾರ್ಯಕ್ರಮಕ್ಕೆ ಬೇಕಾದ ಲಂಗ, ರವಿಕೆ, ಬಳೆ, ಸರ, ಬೈತಲೆಬೊಟ್ಟು, ಓಲೆ, ಜುಮಕಿ, ಮಾಟಿ, ಗೆಜ್ಜೆ ಇತ್ಯಾದಿಗಳನ್ನೆಲ್ಲಾ ಅಪ್ಪ ನಮ್ಮ ಸಂತಾನಂ ದೊಡ್ಡಪ್ಪನ ಮಗಳು ಅಮುದಳಿಂದ ಕೇಳಿ ಪಡೆದುಕೊಂಡು ಬಂದರು. ರಾಣಿಗೆ ಅಷ್ಟು ವಿವರವಾಗಿ ಅಲ್ಲದೆ, ಸಾಂಕೇತಿಕವಾದ ಅಲಂಕಾರಕ್ಕೆ ಎಷ್ಟು ಬೇಕೋ ಅಷ್ಟನ್ನು ಮಾತ್ರ ಕೊಂಡು ತಂದರು. ಕಾರ್ಯಕ್ರಮಕ್ಕೆ ಹಿಂದಿನ ದಿನವೇ ಎಲ್ಲವನ್ನೂ ತೊಡಿಸಿ, ವಠಾರದ ನೆರೆಹೊರೆಯವರಿಗೆ ತೋರಿಸಿಕೊಂಡು ಬರಲು ಕಳಿಸಿದರು. ಆ ಮರೆವಣಿಗೆ ಆದ ಮೇಲೆ, ಮಾರನೆಯ ದಿನದ ಕಾರ್ಯಕ್ರಮಕ್ಕೆ ಕಾತುರದಿಂದ ನಾನೂ ನನ್ನ ತಂಗಿಯೂ ಕಾದೆವು.

ಅಂತೂ ಮಾರನೆಯ ದಿನ ಬಂತು. ಶಾಲೆಯ ಆವರಣದಲ್ಲಿ ಸುತ್ತಲೂ ಪೋಷಕರು, ಇತರ ಮಕ್ಕಳು, ಶಿಕ್ಷಕರು ಎಲ್ಲರೂ ಇದ್ದರು. ನಡುವೆ ಎರಡು ಮೈಕ್ ಗಳನ್ನು ಇಡಲಾಗಿತ್ತು. ಅಂದರೆ ವೃತ್ತಾಕಾರವಾಗಿ ಏರ್ಪಟ್ಟ ವೇದಿಕೆ. ಅಲ್ಲಿ ಅಲಂಕರಿಸಿಕೊಂಡ ನಾನೂ, ರಾಣಿಯೂ ಹೋಗಿ ನಿಂತೆವು. ಮೈಕಿನ ಮುಂದೆ ಹಾಡಿದೆವು.. ಹಾಡಿದೆವು.. ಹಾಡಿದೆವು.. ಯಾಕೆ ಕೇಳ್ತೀರಾ ಅದರ ಚೆಂದವಾ..? ನಾನು ಕೀರಲು ದನಿಯಲ್ಲಿ, ಅವಳು ಕರ್ಕಶ ದನಿಯಲ್ಲಿ.. ಎತ್ತು ಏರಿಗೆ.. ಕೋಣ ನೀರಿಗೆ.. 'ಆಚೇಮನೆಯ ಸುಬ್ಬಮ್ಮನಿಗೆ..' ಎಂದು ನಾನು ಹಾಡುತ್ತಿದ್ದರೆ, 'ಅಲ್ಲ ಕಣೆ.. ಇಡ್ಡಲಿ' ಅಂತಾಳೆ ಅವಳು. ಅವಳು 'ಆಗಾಗ ಒಂದೊಂದು ಕಿತ್ತಳೆ' ಎಂದರೆ, 'ಅಲ್ಲ ಕಣೆ.. ಕೋಡುಬಳೆ' ಅಂತ ನಾನು! ಅಂತೂ ಅಪಸ್ವರದ ಆಲಾಪದಲ್ಲಿಯೇ ಇಡ್ಲಿ, ಚಟ್ನಿ, ಸೀಬೇಹಣ್ಣು, ಹಾಲು, ನಿಪ್ಪಟ್ಟು, ಹಲ್ವ.. ಇನ್ನೂ ಏನೇನೋ ಬಂದು ಹೋದವು! ಸುತ್ತ ನೆರೆದ ಜನವೆಲ್ಲಾ ಗೊಳ್ ಎಂದು ನಗುತ್ತಿದ್ದಾರೆ..! ನಮ್ಮ ಹಾಡು

ನೃತ್ಯಗಳಿಗೆ ಜನ ಸ್ಪಂದಿಸುವುದನ್ನು ನೋಡಿ ಅಪ್ಪಅಮ್ಮ ಕೂಡಾ ಸಂತೋಷಪಡುತ್ತಿದ್ದಾರೆ..! ನನ್ನ ಹಾಡನ್ನು ಮೆಚ್ಚಿ ಅವಕಾಶ ಕೊಟ್ಟ ಟೀಚರಿಗೆ ಕಣ್ಣು ಕೆಂಪಗಾಗುತ್ತಿದೆ. ಅವರು, ಇನ್ನೊಬ್ಬ ಟೀಚರ್ ಜೊತೆಗೆ ಕಣ್ಣುಸನ್ನೆ ಮಾಡಿಕೊಂಡು ಇಬ್ಬರೂ ಸೇರಿ ನಮ್ಮನ್ನು ಅಲ್ಲಿಂದ ಹೊರಗೆ ಕರೆತರಲು ಹೆಣಗುತ್ತಿದ್ದಾರೆ. 'ಸಾಕು ಬನ್ನಿ, ಆಯ್ತು ಬನ್ನಿ' ಎಂದು ಕೈ ಹಿಡಿದು ಎಳೆಯುತ್ತಿದ್ದಾರೆ. ನಾನು 'ಇನ್ನೊಂದು ಹಾಡು ಹಾಡ್ತೀವಿ ಟೀಚರ್' ಎಂದು ಮೈಕಿನಲ್ಲಿಯೇ ಹೇಳಿದೆ. ಪೋಷಕರ ಮುಂದೆ ಮಕ್ಕಳನ್ನು ಬೈಯಬಾರದೆಂದು ತಡೆದುಕೊಂಡಿದ್ದ ಟೀಚರ್, 'ಓ.. ಹಾಡಿ' ಎಂದು ಅನುಮತಿ ಕೊಟ್ಟರು. 'ಓಓಓ..' ಎಂದು ಆರಂಭಿಸಿದೆವು. ಅದು ಮುಗಿಯುತ್ತಾ ಬಂತೆಂದು ಟೀಚರ್ ಕರೆಯಲು ಬಂದರೆ, 'ಟೀಚರ್, ಇನ್ನೊಂದು..' ಎಂದೆ. ಟೀಚರ್ ತಾಳ್ಮೆ ಕಳೆದುಕೊಂಡು, 'ಈಗ ಬೇಡ, ಇನ್ನೊಂದು ಸಲ ಹಾಡುವಿರಂತೆ' ಎಂದು ದರದರನೆ ಎಳೆದುಬಿಟ್ಟರು. ಆಮೇಲೆ ಮನೆಗೆ ಬರುತ್ತಾ ಅಪ್ಪ ನಮ್ಮಿಬ್ಬರಿಗೂ ಮಸಾಲೆದೋಸೆ ಕೊಡಿಸಿದರು.. ಚೆನ್ನಾಗಿ ಹಾಡಿದೆವು ಎಂದು!

■

**ಸುದ್ದಿ**

## ಟೊಮ್ಯಾಟೊ ಕಾಯಲು ಸೆಕ್ಯೂರಿಟಿಯವರನ್ನು ನೇಮಿಸಿದ ವ್ಯಾಪಾರಿ



# "ಯದ್ಭಾವಂ ತದ್ಭವತಿ"

✍ ನಾಗರತ್ನ ರಾಮಮೂರ್ತಿ

ಮನೆನಲ್ಲಿ ಅವತ್ತು ಒಂದು ಸಣ್ಣ function ಇತ್ತು. ಮಕ್ಳು, ಮೊಮ್ಮಕ್ಳು, ಕೆಲವು ನೆಂಟರಿಷ್ಟರು ಎಲ್ಲಾ ಸೇರಿದ್ರು. ರಾತ್ರೆ ಊಟದ ಸಡಗರ ಮುಗಿದಮೇಲೆ ಮಾವಿನ ಹಣ್ಣಿನ ಸಡಗರ. ಮಾವಿನ ಹಣ್ಣು ತಿಂತಾ, ಒಬ್ರು ಕಸಿ ಮಾವಿನ ಹಣ್ಣು ಚೆನ್ನ ಅಂದ್ರೆ ಇನ್ನೊಬ್ರು ನೀಲಮ್ ಅಂದ್ರು ಮತ್ತೊಬ್ರು ಮಲಗೋಬಾ ಅಂತಿದ್ರು, ಎಲ್ಲಾ ಮಾವಿನ ಹಣ್ಣುಗಳ ಹಾಗು ಹಲಸಿನ ಹಣ್ಣಿನ ಬಗ್ಗೆ ಮಾತೋ ಮಾತು.

ಅಷ್ಟರಲ್ಲಿ ಒಬ್ಬ ಮೊಮ್ಮಗ ವಾಟೆ ಚೀಪ್ತಾ ಬಂದು, ನಿಮ್ಗೆ ಯಾವ್ದಿಷ್ಟ ತಾತ ಅಂತ ಕೇಳ್ದ. ನಂಗೆ ಎಲ್ಲಾ ಇಷ್ಟ ಕಣೋ, ಕೈ ತೊಳ್ಕೋ ಹೋಗು, ಬಟ್ಟೆ ಕರೆ ಆಗುತ್ತೆ ಅಂತ ಹೇಳಿ ಕಳಿಸ್ದೆ.

ಮಾತು ಎಲ್ಲೆಲ್ಲಿಗೋ ಹೋಗ್ತಿತ್ತು. ನನ್ನ ಮನಸ್ಸು ಇನ್ನೇನೋ ಯೋಚಿಸ್ತಿತ್ತು. ಮಾವಿನ ಹಣ್ಣೋ, ಹಲ್ಸಿನ ಹಣ್ಣೋ ಎಲ್ಲದರಲ್ಲೂ ವಿವಿಧ, ವೈವಿಧ್ಯ ಅಲ್ವಾ, ಒಂದೊಂದು ಒನ್ನೊಂದು ಥರ ರುಚಿಯೇನೋ ಹೌದು. ಆದ್ರೆ ಒಂದೊಂದು ಬಗೆ ಒಬ್ಬೊಬ್ಬರಿಗೆ ಇಷ್ಟವಾಗುತ್ತೆ. ಆ ರುಚಿ ಅನ್ನೋದು ಮಾವಿನ ಹಣ್ಣಿಂದೋ, ಅವರ ಭಾವನೇದೋ? ಅನ್ಕೋತಿದ್ದೆ. ನನಗಾದ್ರೋ ಎಲ್ಲಾ ಇಷ್ಟ, ರುಚಿ ಸ್ವಲ್ಪ ಬೇರೆ ಇರಬಹುದು ಅಷ್ಟೇ ಅಲ್ವೇ? ಅನ್ನಿಸ್ತಿತ್ತು.

ಹಾಗೆಯೇ ಮರುಳ ಮುನಿಯನ (DVG) ಕಗ್ಗವೊಂದು ಜ್ಞಾಪಕಕ್ಕೆ ಬಂತು–

ಮೆಣಸು ಹುಣಿಸೆಗಳ ಸವಿಗಳು ಬೇರೆಯಿಹುದಿರಲಿ ।
ಹುಣಿಸೆಯಿಂ ನಿಂಬೆ ಮಾವುಗಳ ಹುಳಿ ಬೇರೆ ॥
ಮನುಜನುಳಿದ ಪ್ರಾಣಿಯಿಂ ಬೇರೆ ತಾಂ ಬೇರೆ ।
ಗುಣದೊಳೋರೊರ್ವನುಂ – ಮರುಳ ಮುನಿಯ ॥

ಡಿ.ವಿ.ಜಿ. ಹೇಳೋದು – ಮೆಣಸು, ಹುಣಿಸೆಹಣ್ಣು ಇತ್ಯಾದಿಗಳ ರುಚಿ ಬೇರೆ ಬೇರೆಯಾಗಿರುತ್ತೆ. ಅದು ಹಾಗೇ ಇರಲಿ ಮತ್ತು ಅವು ಹಾಗಿದ್ರೇ ಚೆನ್ನವೂ ಹೌದು ಅಂತಾರೆ. ಆದರೆ ಹುಳಿಯು ಒಂದೇ ಆದ್ರೂ ಹುಣಿಸೆಹಣ್ಣು, ನಿಂಬೆಹಣ್ಣು ಮತ್ತು ಮಾವಿನಕಾಯಿಗಳ ಹುಳಿಯ ರುಚಿಗಳು ಬೇರೆ ಬೇರೆಯಾಗಿರುತ್ತೆ.

ಹಾಗೆಯೇ ಈ ಮನುಷ್ಯನೂ ಸಹ ಪ್ರಪಂಚದಲ್ಲಿ ಒಂದು ಜೀವಿಯಾದರೂ ಇವನು ಇತರ ಪ್ರಾಣಿಗಳಿಂದ ಬೇರೆಯಾಗಿ ಕಾಣಿಸಿಕೊಳ್ತಾನೆ. ಅದೂ ಅಲ್ದೇ ಬೇರೆ ಬೇರೆ ಹುಳಿಗಳ ರುಚಿಯಂತೆ ಒಬ್ಬೊಬ್ಬ ಮನುಷ್ಯನೂ ಬೇರೆ ಬೇರೆ ಗುಣ, ಸ್ವಭಾವಗಳನ್ನು ಹೊಂದಿರ್ತಾನೆ. ಪೂರಕವಾಗಿ, ಆಗಿಲು ಯವರ ಈ ಕಗ್ಗವೂ ಮನದಲ್ಲಿ ಬಂತು.

ಗಗನನೀಲಿಮೆಯೆನ್ನ ಕಣ್ಗೆ ಸೊಗವೀವಂತೆ ।
ಮುಗಿವ ತರಣಿಯ ರಕ್ತ ಹಿತವೆನಿಸದೆ?ಕೋ ॥
ಸೊಗದ ಮೂಲವದೆಲ್ಲಿ ನೀಲದೊಳೊ ಕೆಂಪಿನೊಳೊ।
ಬಗೆವೆನ್ನ ಮನಸಿನೊಳೊ? ಮಂಕುತಿಮ್ಮ ॥

ಈ ಕಗ್ಗ “ಯದ್ಭಾವಂ ತದ್ಭವತಿ” ಅಂತಾರಲ್ಲ ಹಾಗೆ, ಅರ್ಥೈಸುತ್ತಾ ಹೋಗುತ್ತೆ ಅನ್ನಿಸ್ತು.

ಆಕಾಶದ ತಿಳಿನೀಲಿ ಬಣ್ಣ ಮನಸ್ಸಿಗೆ ಹಿತವನ್ನು ಕೊಡುತ್ತೆ. ಆದ್ರೆ, ಮುಳುಗುವ ಸೂರ್ಯನ ರಕ್ತವರ್ಣ ನನಗೆ ಹಿತವೆನಿಸೋಲ್ಲ (. .ಹಿತವೆನಿಸದೆ?ಕೋ) ಅಂತ ಹೇಳ್ತಾ, ಆ ಹಿತದ ಮೂಲ ಆಕಾಶದ ನೀಲಿ ಬಣ್ಣದಲ್ಲಿದ್ಯೋ ಅಥವಾ ಮುಳುಗುವ ಸೂರ್ಯನ ಕೆಂಪು ಬಣ್ಣದಲ್ಲಿದ್ಯೋ ಅಥವಾ ಎರಡೂ ಅಲ್ದೇ, ಹಿತವೆಂದು ತಿಳಿಯುವ ನನ್ನ ಮನಸ್ಸಿನಲ್ಲಿ ಇದೆಯೋ ಅಂತ ಸಹಜವಾಗಿ ಡಿ.ವಿ.ಜಿ. ಯವರು ಸ್ವಗತವಾಗಿ ಕೇಳ್ತಾರೆ.

ನೀಲಿ ಬಣ್ಣ ಪ್ರಶಾಂತತೆಯ ಪ್ರತೀಕ ಅಂತಾರೆ. ತಿಳಿ ನೀಲಿ ಬಣ್ಣ ಮನಸ್ಸಿಗೆ ಸಹಜವಾಗಿಯೇ ಮುದವನ್ನು ಕೊಡುತ್ತೆ. ಸೂರ್ಯಾಸ್ತಮಾನದ ಕೆಂಬಣ್ಣ ಕೆಲವರಿಗೆ ಚೆನ್ನ ಅನಿಸಲೂ ಬಹುದು. ಆದ್ರೆ, ಡಿ.ವಿ.ಜಿ. ಯವರು, ಮುಳುಗುವ ಸೂರ್ಯನ ರಕ್ತವರ್ಣ ಅಂತ ಹೇಳ್ತಾ ನನಗೆ ಮನಸ್ಸಿಗೆ ಹಿತವೆನಿಸುವುದಿಲ್ಲ ಅಂತ ಹೇಳ್ಕೊಂಡಿದ್ದಾರೆ.

ಹೌದು, "ಊಟ ತನ್ನಿಚ್ಛೆ, ನೋಟ ಪರರಿಚ್ಛೆ" ಅಂತ ನಮ್ಮಮ್ಮ ಹೇಳ್ತಿದ್ದದ್ದು ಜ್ಞಾಪಕಕ್ಕೆ ಬಂತು. “ಚೆಂದ ನೋಡುವವನ ಕಣ್ಣಲ್ಲಿ” ಅಂತಾರಲ್ಲ ಹಾಗೆ. ಒಬ್ಬರಿಗೆ ಚೆನ್ನಾಗಿ ಕಂಡದ್ದು ಮತ್ತೊಬ್ಬರಿಗೆ ಚೆನ್ನಾಗಿಲ್ಲದೆ ಇರಬಹುದು, ಲೋಕೋ ಭಿನ್ನ ರುಚಿಃ ಅಲ್ವಾ, ಯದ್ಭಾವಂ ತದ್ಭವತಿ.

■



# ಠುಸ್ಸಾದ ಖುಷಿ ಬೆಲೂನ್

✍ಅರವಿಂದ. ಜಿ. ಜೋಷಿ

ಅಂದು ಎಂದಿನಂತೆ ಬೆಳಿಗ್ಗೆ ಎಲ್ಲರಿಗೂ ಕಾಫಿ ಕೊಡುತ್ತ ಪಮ್ಮಿ, ಪತಿಯ ಪಕ್ಕ ಕುರ್ಚಿ ಮೇಲೆ ಕುಳಿತು "ರೀ..... ಬೇಗ ಸ್ನಾನ ಮುಗಿಸಿ, ತಿಂಡಿ ತಿಂದು ಸಿಟಿ ಕಡೆ ಹೋಗಿ ಹೂವು, ಹಣ್ಣು, ಸ್ವೀಟ್ ಪ್ಯಾಕೇಟು, ಒಂದು ಒಳ್ಳೆ ಸೀರೆ ತಂದ್ಕೊಡಿ" ಎನ್ನುತ್ತ ತನ್ನ ಎದುರು ಕುಳಿತ ಅತ್ತೆಗೆ "ಅತ್ತೇ.. ಇಂದು ಮಾವಿನ ಕಾಯಿ ಚಿತ್ರಾನ್ನ, ಬೇಳೆ ಒಬ್ಬಟ್ಟು ಮಾಡಿ, ನಾನು ಮಿಕ್ಕ ಅಡುಗೆ ಮಾಡ್ತೆನೆ" ಎಂದಳು. ಇವಳ ಮಾತು ಕೇಳಿಸಿಕೊಂಡ ತಾಯಿ, ಮಗ ಇಬ್ಬರೂ ಒಟ್ಟೊಟ್ಟಿಗೆ "ಇದೇನೇ ಪಮ್ಮಿ.. ಇವತ್ಯಾರ್ದೂ ಹುಟ್ಟಿದ ಹಬ್ಬ ಇಲ್ಲ, ಯಾವ ಹಬ್ಬಾನೂ ಇಲ್ಲ ಮತ್ತೆಂಥದ್ದು..." ಎಂದು ಅನುಮಾನಿಸುತ್ತ ಪ್ರಶ್ನಿಸಿದಾಗ" ಅದೆಲ್ಲಾ ನನಗೂ ಗೊತ್ತು, ಆದ್ರೆ ನಮ್ಮ ನಿಂಗಿ (ಮನೆ ಕೆಲಸದವಳು) ನನಗೆ ಕಾಲ್ ಮಾಡಿ ನಾಳೆಯಿಂದ ರೆಗ್ಯೂಲರಾಗಿ ಕೆಲ್ಸಕ್ಕೆ ಬರ್ತೀನಿ ಅಂತ ಹೇಳಿದ್ದಾಳೆ. ಅದಕ್ಕೆ ಅವಳಿಗೆ ಮರು ವೆಲ್ಕಂ ಮಾಡುವ ಪ್ರೋಗ್ರಾಂ ಇಟ್ಕೊಂಡಿದಿನಿ" ಎಂದು ಸಮಜಾಯಿಷಿ ನೀಡಿದ್ದೇ ತಡ, ಎಲ್ಲರ ಮುಖಾರವಿಂದ ಮೊರದಗಲದಷ್ಟು ಅರಳಿತು.ಪಮ್ಮಿಯ ಪತಿ ಪರಮೇಶಿ ಯಂತೂ ಯಾರಿಗೂ ಕಾಣದ ರೀತಿ ತನ್ನ ಎರಡೂ ಹಸ್ತಗಳನ್ನು ನೋಡುತ್ತ ಎರಡು ತಿಂಗಳಿಂದಲೂ ಕೆಲಸ ಮಾಡಿದ ಕೈ ಗಳಿಗೆ ಮುಕ್ತಿ ಸಿಕ್ತಲ್ಲ ಸಾಕು, ಎಂದು ಮನದೊಳಗೇ ಖುಷಿ ಪಡುತ್ತಿದ್ದರೆ, ಅವನ ಮಗರಾಯ ತನ್ನ ಸೊಂಟ ಹಿಡಿದು ಕೊಂಡು ನಾಳೆಯಿಂದ ಗುಡಿಸೋದು,ಒರಸೋದು ತಪ್ಪು, ಎಂದು ಗೊಣಗಿಕೊಳ್ಳುತ್ತಿದ್ದ. ಪಮ್ಮಿಯಂತೂ ಮನದಲ್ಲಿ ಅಬ್ಬಾ.. ನಾಳೆಯಿಂದ ಬೇಗ ಎದ್ದು ಬಾಗಿಲಿಗೆ ನೀರು ಹಾಕಿ ರಂಗೋಲಿ ಇಡುವುದು, ರಾಶಿ ರಾಶಿ ಬಟ್ಟೆ ಒಗೆಯುವ ಕೆಲಸ ನಿಂತು ಹೋಯ್ತು ಎಂದು ಸಮಾಧಾನದ ನಿಟ್ಟುಸಿರು ಬಿಡುತ್ತಿದ್ದಳು.

ಮೊದಲೇ ತಿಳಿಸಿದಂತೆ ನಿಂಗಿ ತನ್ನ ಎರಡು ವರ್ಷದ ಮಗುವಿನೊಂದಿಗೆ ಬೆಳಗಿನ ಹತ್ತೂವರೆಗೆ ಪಮ್ಮಿ ಮನೆಗೆ ಬಂದಿಳಿದಿದ್ದಳು. ಬರಾಬ್ಬರಿ ಎಪ್ಪತ್ತು ದಿನಗಳ ಬಳಿಕ ಅವಳ ಆಗಮನವನ್ನು ಮನೆಮಂದಿಯೆಲ್ಲ ನಗು ಮೊಗದಿಂದ ಸ್ವಾಗತಿಸಿದರು. ಊಟದ ಸಮಯವಾದಾಗ ಎಲ್ಲ ಒಟ್ಟಿಗೆ ಕುಳಿತು ಆ ದಿನ ತಯಾರಿಸಿದ ವಿಶೇಷ ಅಡುಗೆ ಸವಿದಿದ್ದರು.

ಊಟದ ಕಾರ್ಯಕ್ರಮದ ನಂತರ ಒಂದು ದೊಡ್ಡ ತಟ್ಟೆಯಲ್ಲಿ ಹೂವು, ಹಣ್ಣು, ತೆಂಗಿನ ಕಾಯಿ, ಸಿರೆ ಪ್ಯಾಕೇಟು, ಸ್ವಿಟ್ ಪ್ಯಾಕೇಟು, ಎಲೆ ಅಡಿಕೆ ಮೇಲೆ ಎರಡು ಸಾವಿರ ರೂಪಾಯಿ ಒಂದು ನೋಟು ಇಟ್ಟು ಅದನ್ನು ನಿಂಗಿಯ ಕೈ ಗಿತ್ತಳು ಪಮ್ಮಿ. ಅವೆಲ್ಲವನ್ನು ಸ್ವಿಕರಿಸಿದ ನಿಂಗಿ "ಅದ್ಯಾಕ್ರವ್ವಾ ಈ ಪಾಟಿ ಮಾಡಾಕ್ ಹೋದ್ರೀ" ಎಂದು ಹೇಳಿದಾಗ "ಏಯ್.. ಏನಿಲ್ಲ ತಗೋ ಸುಮ್ನೆ" ಎನ್ನುತ್ತ, ಪತಿಗೆ ಹೇಳಿ ಆಟೋ ತರಿಸಿ ನಿಂಗಿಯನ್ನು ಬೀಳ್ಕೊಟ್ಟು ಖುಷಿ ಖುಷಿಯಿಂದ ಒಳಗೆ ಕಾಲಿಟ್ಟಳು. ಆ ಒಂದು ಘಳಿಗೆ ಯಿಂದಲೇ ಆರಂಭವಾಯ್ತು ನೋಡಿ ಎಲ್ಲರ ಮನದಲ್ಲೂ ನಾಳೆಯಿಂದ "ಫ್ರೀ.ಫ್ರೀ.." ಎನ್ನುವ ಮಾತು ಅರಳತೊಡಗಿತು. ಆ ರಾತ್ರಿ ಊಟದ ನಂತರ ಅಡುಗೆ ಮನೆಯ ಬೇಸಿನ್ ಒಳಗೆ ಬಿದ್ದ ಒಂದು ಗುಡ್ಡೆ ಪಾತ್ರೆಗಳನ್ನೆಲ್ಲ ಇಷ್ಟು ದಿನ ರೆಸ್ಟ್ ನಲ್ಲಿದ್ದ ದೊಡ್ಡ ಟಬ್‌ಗೆ ಶಿಫ್ಟ್ ಮಾಡಿ ಆಚೆ ಇಟ್ಟು ನೆಮ್ಮದಿಯಿಂದ ನಿದ್ರೆಗೆ ಜಾರಿದಳು ಪಮ್ಮಿ.

ಮರುದಿನ ಬೆಳಗ್ಗೆ ಘಂಟೆ ಆರಾಯ್ತು, ಏಳು ಆಗುತ್ತ ಬಂದರೂ ನಿಂಗಿಯ ಆಗಮನದ ಸುಳಿವೇ ಇಲ್ಲ.ಪಮ್ಮಿ ಎದೆಯಲ್ಲಿ ಸಣ್ಣದಾಗಿ ದಿಗಿಲು ಆರಂಭವಾಯ್ತು ಹೇಳಿಕೊಳ್ಳಲಿಲ್ಲ. ನಿಂಗಿಯ ಸೆಲ್ ಗೆ ಕಾಲ್ ಮಾಡಿದಳು ಆ ಬದಿಯಿಂದ "ಸ್ವಿಚ್ಡ್ ಆಫ್" ಎಂದು ಉತ್ತರ ಬಂದಿತು.ಪಮ್ಮಿ ಬಿಡಲಿಲ್ಲ ಮತ್ತೆ ಮತ್ತೆ ಫೋನಾಯಿಸಿದಳು ಅದೇ ಅದೇ ಉತ್ತರ ಬಂದಿತು. ಘಂಟೆ ಎಂಟಾಗುತ್ತ ಬಂದಾಗ ಮನದ ಆತಂಕ ತಾಳದೇ ಪತಿಯ ಬಳಿ ಬಂದು ವಿಷಯ ತಿಳಿಸಿ ಆತನ ಪ್ರತಿಕ್ರಿಯೆಗೆ ಆಸ್ಪದ ನೀಡದೆ "ಮೊದ್ಲು ಅವಳ ಮನೆಗೆ ಹೋಗಿ ನೋಡಿ ಬನ್ನಿ" ಎಂದಷ್ಟೇ ಹೇಳಿದಾಗ, ಅವಳಷ್ಟೇ ಚಿಂತನೆಗೊಳಗಾದವ ಬೈಕ್ ಏರಿ ಸೀದಾ ನಿಂಗಿಯ ಮನೆಯತ್ತ ಬಂದ. ಅಲ್ಲಿ ನಿಂಗಿಯ ಮನೆ ಬಾಗಿಲಿಗೆ ಜಡಿದ ಬೀಗ ನೋಡಿದವನ ಮನ ಇನ್ನಷ್ಟು ರೋಸಿಹೋಯ್ತು. ಹರಸಾಹಸ ಪಟ್ಟು ನಿಂಗಿಯ ಪಕ್ಕದ ಮನೆಯಲ್ಲಿ ವಿಚಾರಿಸಿದಾಗ ರಾತ್ರಿ ಒಂದು ಹೊತ್ನಲ್ಲಿ ತಾಯಿ ಮಗು ಇಬ್ಬರಿಗೂ ವಿಪರೀತ ಜ್ವರದ ಬಾಧೆಯಿಂದ ನರಳುತ್ತಿದ್ದಾಗ ಅವರುಗಳೇ ಅಂಬ್ಯುಲೆನ್ಸ್ ತರಿಸಿ ಆಸ್ಪತ್ರೆಗೆ ಸೇರಿಸಿದ್ದಾರೆಂಬ ವಿಷಯ ಕಿವಿಗೆ ಬೀಳುತ್ತಿದ್ದಂತೆ ಬೈಕ್ ಏರಿ ಮನೆಯತ್ತ ಧಾವಿಸಿ ಬಂದು ಮಡದಿಗೆ ವರದಿ ಒಪ್ಪಿಸಿದಾಗ ನಿನ್ನೆಯಿಂದ ತಾವು  ಮನದೊಳಗೆ ಊದಿಸಿಕೊಂಡ ಖುಷಿ ಬೆಲೂನು ಈ ರೀತಿ ಠುಸ್ಸಾಯಿತಲ್ಲ ಎಂದು ಸಾಮೂಹಿಕವಾಗಿ ಪೇಚಾಡತೊಡಗಿದರು. ■



# "ಹೋಯ್, ರೀ.....!"

✍ ಡಾ. ಗಣೇಶ್. ಎಸ್. ಹೆಗಡೆ, ಶಿರಸಿ

ಆಲೋಚನೆಯ ಆನಂದದಲ್ಲಿ ಬೆಚ್ಚಗೆ ವಿಹರಿಸುತ್ತಿದ್ದೆ. ಚಿಂತನೆ ಗಹನವಾಗಿ ಸಾಗಿತ್ತು, ವಿಚಾರಗಳು ಸರಪಟಾಕಿಯಂತೆ ಒಂದರಮೇಲೊಂದರಂತೆ ಮನದಲ್ಲಿ ಸ್ಫುಟವಾಗಿ ಸಿಡಿಯುತ್ತಿದ್ದವು. ಮುಂದೆ ಮಾಡಬಹುದಾದ ಕಾರ್ಯಗಳು, ಸೃಜನಶೀಲ ಅಭಿವ್ಯಕ್ತಿಯ ಅಪಾರ ಸಾಧ್ಯತೆಗಳು ಹಣ್ಣಿನ ಸೊಳೆಬಿಡಿಸಿದ ಹಾಗೆ ಮನದಲ್ಲಿ ತೆರೆದುಕೊಳ್ಳಹತ್ತಿದ್ದವು. ಆಹ್ಲಾದಕರ ವಾತಾವರಣ– ಏಕಾಂತದಲ್ಲಿ ಮೈಮರೆಸಿ ಜಗತ್ತನ್ನು ಮೂಕಗೊಳಿಸಿತ್ತು, ಸಮಯವೂ ಸ್ತಬ್ಧವಾದಂತಿತ್ತು. ಅಂತರಿಂದ್ರಿಯವಾದ ಮನದ ಕ್ರಿಯಾಶೀಲತೆ ಗರಿಗೆದರಿತ್ತು. ಉಳಿದ ಸಮಯದಲ್ಲೆಂದೂ ತಲೆಗೆ ಬಾರದ ಅಪರೂಪದ ಆಲೋಚನೆಗಳವು. ಇದಿಷ್ಟೇ ಇದರಲ್ಲಿ ಇನ್ನೇನೂ ಮಾಡಲು ಸಾಧ್ಯವಾಗದೆಂದು ಕೈಚೆಲ್ಲಿದ ಸಂಗತಿಗಳಲ್ಲೂ–ಅಪಾರ ಸಾಧ್ಯತೆಗಳು, ನೊರೆ ಹಾಲಿನಂತೆ ಬೆಳ್ಳಗೆ ಉಕ್ಕತೊಡಗಿದವು! ಆಹಾ ಹೀಗೂ ಮಾಡಬಹುದಲ್ವೇ?!– ಅಂದುಕೊಂಡೆ.

ನೀರಸ ಪಾಠವನ್ನು ರಸವತ್ತಾಗಿಸುವ ಕಡೆಯೂ ಚಿತ್ತ ಹೊರಳಿತು. ಪಾಠ ಕೇಳದವರಿಗೇನು ಮಾಡುವುದು? ಅವರನ್ನೂ ದಾರಿಗೆ ತರಬಹುದಾದ ಸಾಧ್ಯತೆಗಳ ಕುರಿತ ನೂತನ ವಿಚಾರಗಳು. ಉತ್ಸಾಹಿ ವಿದ್ಯಾರ್ಥಿಗುಂಪಿಗೆ ಚಿಕ್ಕ ಚಿಕ್ಕ ಸಂಶೋಧನಾ ಪ್ರೇರಿತ ಕಾರ್ಯಯೋಜನೆಗಳನ್ನು ಕೊಡಬೇಕಿತ್ತು. ಆ ಕುರಿತೂ ಹೊಸ ಹೊಸ ಯೋಜನೆಗಳ ಹೊಳಹು ಮೂಡಿತು. ಯಾವ ಸಮಸ್ಯೆಯನ್ನು ಊಡಿದರೂ ಅದಕ್ಕೊಂದು ಧನಾತ್ಮಕ ಪರಿಹಾರ, ಅರೆ, ಇದೆಂಥಹ ಅದ್ಭುತ ಸಮಯ?– ಬೆಳಗು; ಸಂಜೆಗತ್ತಲಾದೊಡೆ ಮನದ ಬಾಗಿಲೂ ಹಾಕಿದಂತಾಗಿ ವಿಚಾರಗಳಿಗೂ ಸಾವಾಗುವ ಹಾಗೆ ಆಗುತ್ತದಲ್ಲಾ?! ಅದೇ, ಬೆಳಗು(ಕು)– ತೆರೆದ ಮನೆಯ ಬಾಗಿಲು ಪ್ರವೇಶಿಸುವಂತೆ ಮನದಿ ಉತ್ಸಾಹದ ಚಿಲುಮೆಯನ್ನೇ ಚಿಮ್ಮಿಸಿಬಿಡುತ್ತದೆ, ಅನ್ನಿಸಿತು. ಮಂದಹಾಸದೊಂದಿಗೆ ಆನಂದದಿ ನೂತನ ವಿಚಾರಧಾರೆಯಲ್ಲಿ ಮಿಂದೇಳುತ್ತಿದ್ದೆ!

ಆಗ ದೂರದಲ್ಲಿ ಯಾರೋ ಕ್ಷೀಣಧ್ವನಿಯಲ್ಲಿ ಹೋಯ್... ರೀ..., ಹೋಯ್...... ಹಲೋ...., ಅಂದಹಾಗಿತ್ತು. ಎದುರಿನ ಮನೆಯವರು ಬೀದಿಯಲ್ಲಿ ಮಾತನಾಡುತ್ತಿರ–ಬಹುದೆಂದು ಯೋಚಿಸಿ, ಮತ್ತೆ ಅಲೋಚನಾಮಗ್ನನಾದೆ. ಕಾಲೇಜಿನ ನ್ಯಾಕ್ ಮರುಮಾಪನದ ದಿನಗಳು ಹತ್ತಿರವಾಗುತ್ತಿದೆಯಷ್ಟೆ, ಆ ಕುರಿತು ಚಿಂತನಾಲಹರಿ ಸಾಗಿತು. ಮತ್ತೆ ಹೊಸ ಹೊಸ ಯೋಚನೆಗಳು ಮುನ್ನೆಲೆಗೆ ಬಂದವು; ನಗರಸಭೆಯವರೊಂದಿಗೆ ಕೈಜೋಡಿಸಿ– ಇ–ತ್ಯಾಜ್ಯ ಸಂಗ್ರಹದ ಕುರಿತು ಸಪ್ತಾಹ, ನಗರದ ರಸ್ತೆ ಮಧ್ಯದ ಜಾಗಗಳಲ್ಲಿ ಅಲಂಕಾರಿಕ ಸಸ್ಯಗಳನ್ನು ನೆಡುವುದು, ಹಾಗೆಯೆ ಮಳೆ ಕಡಿಮೆಯಾದ್ದರಿಂದ 'ನೀರಿನ ಮಿತವ್ಯಯ'ದ ಕುರಿತು ಜಾಗೃತಿ ಕಾರ್ಯಕ್ರಮ, ಹೀಗೆ ಯೋಜನೆಗಳ ಪ್ರವಾಹವೇ ಹರಿಯಿತು. ಆದರೆ ಅಷ್ಟರಲ್ಲಿ 'ಹೋಯ್, ರೀ...ರೀ...' ಎಂಬ ಧ್ವನಿ ಕೊಂಚ ಜೋರಾಗಿ ಕೇಳಿದಂತಾಯ್ತು, ಇದೆಲ್ಲೋ ಪರಿಚಿತ ಧ್ವನಿ ಇದ್ದಹಾಗಿದೆಯಲ್ಲ ಎಂದುಕೊಂಡೆ, ಆದರೂ ಹಾಗೆಯೇ ಮುಂದುವರಿದೆ.

ಧಡ್, ಧಡ್, ಧಡ್.... ಬಾಗಿಲನ್ನು ಯಾರೋ ಒಂದೇ ಸಮನೆ ಬಡಿಯುತ್ತಿದ್ದರು. ಅಲೋಚನಾಭಂಗವಾಗಿ ಎಚ್ಚರಗೊಂಡು ವಾಸ್ತವಕ್ಕೆ ಮರಳಿದೆ. "ಹೋಯ್, ರೀ.....ಹಲೋ.... ಕಿವಿ ಕೇಳ್ತಾ ಇದ್ದಾ? 8.30 ಆತು, ಎಂತಾ ಇವತ್ತಿಗೆ ಸ್ನಾನ

ಮುಗಿಸೋ ಯೋಚನೆ ಇಲ್ಯಾ ಹ್ಯಾಂಗೆ?, ಎಂಗೆ ಲೇಟಾಗ್ತಾ ಇದ್ದು!"

ವಾಸ್ತವಕ್ಕೆ ಮರಳಿದೆ. ಅಷ್ಟರಲ್ಲಿ ಸುಮಾರು 2–3 ಬಕೇಟು ನೊರೆನೀರು ಹರಿದಿರಬೇಕು, ಇದೇ ಮೊದಲಬಾರಿಗೆ ಸ್ನಾನಮಾಡುತ್ತಿರುವೆನೋ ಎಂಬಂತೆ ಮಾಡುತ್ತಿದ್ದೆ. ದಿನವೂ ಹಾಗೆಯೇ ಎನ್ನಿ! ಬೆಚ್ಚನೆಯ ನೀರು ತಲೆಯಮೇಲೆ ಒಮ್ಮೆ ಬಿದ್ದರೆ, ಅದು ಬೀಳುತ್ತಲೇ ಇರುವಂತಾಗಿ– ಒದಗಿದ ಆರಾಮವು ಆಲೋಚನಾ–ಮಗ್ನನಾಗಲು ಪ್ರೇರೇಪಿಸಿಬಿಡುತ್ತದೆ. ವಿಯೇಟ್ನಾಂನ 'ತಿಚ್ ನ್ಹಾತ್ ಹಾನ್' ರವರು ತಮ್ಮ – 'ಮಗ್ನತೆಯ ಪವಾಡ (Miracle of Mindfulne)' ಪುಸ್ತಕದಲ್ಲಿ; ಮಾಡುವ ಯಾವುದೇ ಚಿಕ್ಕ ಕೆಲಸವನ್ನೂ ಮನಃಪೂರ್ವಕವಾಗಿ ಮಾಡಬೇಕೆನ್ನುತ್ತಾರೆ. ಸ್ನಾನ ಮಾಡುವುದನ್ನೂ ಮಗ್ನತೆಯಿಂದ ಮಾಡಬೇಕೆಂದು ಅವರು ಹೇಳಿದರೆ– ನಾನೋ, ಸ್ನಾನಮಾಡುತ್ತ ಕಲ್ಪನಾಮಗ್ನನಾಗಿದ್ದೆ. ನನ್ನದು ಮೈಂಡ್‌ಫೂಲ್‌ನೆಸ್ (Mindfoolness) 'ಅನ್ಯಮನಸ್ಕತೆಯ ಪರಿಪಾಟಲು' ಎಂದರೂ ಆದೀತು! ಬೇಂದ್ರೆ ಅಜ್ಜರ 'ಕುಣಿಯೋಣು ಬಾರಾ....' ಕವಿತೆ ಹೇಳುವ ಹಾಗೆ– 'ತಾಳ್ಯಾಕ ತಂತ್ಯಾಕ, ರಾಗಾದ ಚಿಂತ್ಯಾಕ, ಕುಣಿಯೋಣು ಬಾರಾ ಕುಣಿಯೋಣು ಬಾ... ಇದ್ದದ್ದು ಮರೆಯೋಣು, ಇಲ್ಲದ್ದು ತೆರೆಯೋಣು, ಹಾಲ್ಜೇನು ಸುರಿಯೋಣು, ಕುಣಿಯೋಣು ಬಾರಾ, ಕುಣಿಯೋಣು ಬಾ...'– ಅಂತೆಯೇ ಬಿಸಿನೀರ ಹೊದಿಕೆಯಲ್ಲಿ ಬೆಚ್ಚಗೆ ಮನದ ಒ(ಕೊ)ಳಕ್ಕಿಳಿದು ಕುಣಿಯುತ್ತಿದ್ದೆ.

ರಾಗ–ತಾಳದ ಹಂಗಿಲ್ಲದ ಎನ್ನ ಮನದ ಕುಣಿತಕ್ಕೆ ಮಡದಿಯ 'ಹೋಯ್, ರೀ...' ಪದವು ಬಡಿದು ವಾಸ್ತವಕ್ಕೆ ಮರಳಿಸಿತ್ತು. ನಮ್ಮೂರಿನವರ ಕೋಲಾಟದ ಕುಣಿತದಲ್ಲೂ ಹೀಗೇ ಆಗತ್ತೆ. ಹಾಡಿನ ಸೊಲ್ಲಿಗೆ ತಕ್ಕುದಾಗಿ ಹೆಜ್ಜೆ ಹಾಕಿ ಕೋಲನ್ನು ಒಂದು ಲಯದಲ್ಲಿ ಬಡಿಯುತ್ತಾ ಸಾಗುತ್ತಿರುವ ಸಂಗಡಿಗರಿಗೆ, ತಂಡದ ಮುಖ್ಯಸ್ಥ– "ಹೋಯ್...." ಎಂಬ ಸೂಚನೆ ಕೊಡುತ್ತಿದ್ದಂತೆ ಎಲ್ಲರೂ ಹಾಡು, ಕೋಲಿನ ಬಡಿತ, ಹಾಗೂ ಕುಣಿತದ ವೇಗ ಬದಲಿಸುತ್ತಾರೆ. ಎಲ್ಲವೂ ಮತ್ತಷ್ಟು ವೇಗ ಪಡೆದುಕೊಂಡು ರೋಚಕಹಂತ ತಲುಪುತ್ತದೆ.

ಅಂತೆಯೇ ದಿನವೂ ನನ್ನ ಮಜ್ಜನದ ಸುಂದರ ಕಲ್ಪನಾಲೋಕದ ಅಂತ್ಯವಾಗಿ, ವಾಸ್ತವದ ದೈನಂದಿನ (ತಾರಕ!)ಕುಣಿತಕ್ಕೆ ಮ(ತೆ)ರಳಲು ಕಾರಣ– 'ಹೋಯ್, ರೀ...' ■



# ‘ಇರುವ ಭಾಗ್ಯವ ನೆನೆದು....’

**ಗಣೇಶ ಹೆಗ್ಗಡೆ**

ಈ ವರ್ಷ ಮೇ ತಿಂಗಳ ಅಂತ್ಯದವರೆವಿಗೂ ನಮ್ಮ ಅಂದರೆ ಪದ್ದಿ ಮತ್ತು ನನ್ನ ಸಂಸಾರ ರಥ ಯಾವುದೇ ಅಡಚಣೆಗಳಿಲ್ಲದೆ, ಹಳಿ ತಪ್ಪದೆ ಸುಗುಮವಾಗಿ ಸಾಗಿತ್ತು. ನೆರೆ–ಹೊರೆಯವರ ಈರ್ಷೆ ಕಣ್ಣುಗಳಿಂದ ತಪ್ಪಿಸಿಕೊಂಡು ಓಡಾಡುವುದೆ ನಮಗೆ ದೊಡ್ಡ ಸವಾಲಾಗಿ ಪರಿಣಮಿಸಿತ್ತು. ಆದರೆ ಮುಂದಾದ್ದೆ ಒಂದು ಮಹಾ ಯಡವಟ್ಟು ಸ್ವಾಮಿ, ಈಗ ಅದನ್ನೇ ನಾನು ವಿವರಿಸ ಹೊರಟಿರುವುದು.

ನಾಲ್ಕು ದಶಕಗಳ ಹಿಂದೆ ನನ್ನ ಕೈ ಹಿಡಿದಿದ್ದ ಪದ್ದಿ, ಈ ಸರ್ತಿಯ ಚುನಾವಣಾ ಫಲಿತಾಂಶದ ಬಳಿಕ, ಕೈ ಕೊಸರಿಕೊಂಡು ನನ್ನಿಂದ ದೂರ ಸರಿದಿರುವುದು ಅವಳ ಇತ್ತೀಚಿನ ವರ್ತನೆಗಳಿಂದ ಅಭಿವ್ಯಕ್ತವಾಗಿತ್ತು. ನೆರೆ ಬೀದಿಯ ಒಂದು ಸ್ತ್ರೀ ಶಕ್ತಿ ಸಂಘದ ಸದಸ್ಯತ್ವವನ್ನು ಇತ್ತೀಚೆಗೆ ಪಡೆದ ಪದ್ದಿ, ಬಿಡುವಿನ ವೇಳೆ. ಭಾಗ್ಯವಂತರು....ನಾವೇ ಭಾಗ್ಯವಂತರು, ಭಾಗ್ಯದ ಲಕ್ಷ್ಮಿ ಬಾರಮ್ಮ, ಇದು ಗ್ಯಾರಂಟಿ...” ಇವೇ ಮುಂತಾದ ಹಾಡುಗಳನ್ನು ಗುನುಗಿಕೊಳ್ಳುತ್ತಿರುವುದು ಆತಂಕ ತರಿಸುವ ವಿಷಯವಾಗಿತ್ತು. ಇಂಥ ಸಮಯದಲ್ಲಿ ಒಂದು ದಿನ ಪದ್ದಿ ನನ್ನತ್ತ ಹೊರಳಿ,

“ರ್ರೀ..ಇದುವರೆವಿಗೂ ನಾನು ನಿಮ್ಮನ್ನು ವಡವೆ, ಸೀರೆ ಯಾವುದನ್ನೂ ಕೊಡಿಸಿ ಎಂದು ಕೇಳಿದವಳಲ್ಲ, ಬರುವ ಆಷಾಢ ಶುಕ್ರವಾರದಂದು ನಾನು ಮತ್ತು ನನ್ನ ಸಂಘದವರು ಸರ್ಕಾರದ ಫ್ರೀ ಬಸ್ನಲ್ಲಿ ಧರ್ಮಸ್ಥಳಕ್ಕೆ ಹೊರಟಿದ್ದೇವೆ, ತುಂಬಾ ನೂಕು ನುಗ್ಗಲು, ಗಲಾಟೆಯಿದೆಯಂತೆ. ನಮಗೆಲ್ಲಾ ಸೀಟಿನ ವ್ಯವಸ್ಥೆಯಾಗ್ಬೇಕು. ರಿಸರ್ವೇಷನ್ ಇಲ್ಲವಂತೆ, ಹ್ಯಾ ಗು... ಕೆಎಸ್ಸಾರ್ಟಿಸಿ ಕಂಡಕ್ಟರ್ ಕರಿಯಣ್ಣ ನಿಮ್ಮ ಗಳಸ್ಯ ಕಂಠಸ್ಯ. ಈ ಊರಿನ ಡಿಪೋದಲ್ಲೇ ಕೆಲ್ಸ ಮಾಡ್ತಿರೋದು... ಇಂದೇ ನೀವು ಅವನನ್ನು ಭೇಟಿಯಾಗಿ ಬರ್ಬೇಕು ಎಂದು ಆಜ್ಞಾಪಿಸಿದಳು.

‘ಬ್ಯಾಡಾ ಪದ್ದಿ...ನಿನ್ನದು ತುಂಬಾ ಡೇಂಜರಸ್ ಪ್ರಪೋಸಲ್ಲು. ಸೆಕೆಂಡು ಒಪೀನಿಯನ್ ತಗೊ. ಬದಲಿಗೆ ನಾನು ಎರಡೆಳೆ ಅವಲಕ್ಕಿ ಸರ, ಮೈಸೂರು ಸಿಲ್ಕ್ ಸೀರೆ ಕೊಡಿಸ್ತೀನಿ ಎಂದಾಮಿಷವೊಡ್ಡಿದರೂ ಯಾವುದಕ್ಕೂ ಜಗ್ಗದ ಪದ್ದಿ,

‘ನನ್ಗೆ ಅವಲಕ್ಕಿ ಸರಾನು ಬ್ಯಾಡ...ಶ್ಯಾವಿಗೆ ಸರಾನೂ ಬ್ಯಾಡ... ನಿಮ್ಮಿಂದ ಈ ಕೆಲ್ಸ ಆಗ್ಲೇಬೇಕು. ಇದು ನನ್ನ ಪ್ರೆಸ್ಟೀಜಿನ ಪ್ರಶ್ನೆ’ ಎಂದು ಹಠಕ್ಕೆ ಬಿದ್ದಳು.

ನಿರ್ವಾಹವಿಲ್ಲದೆ ನಾನು, ಅಡಿಯೇನ್ ದಾಸೇನ್ ಎಂದು ನನ್ನ ಕೆನ್ನೆಯನ್ನ ನಾನೆ ತಟ್ಟಿಕೊಳ್ಳುತ್ತಾ ಸಹಪಾಠಿ ಕಂಡಕ್ಟರ್ ಕರಿಯಣ್ಣನ ಭೇಟಿಗೆ ಸಜ್ಜಾಗಿ ಹೊರಟೆ.

* * *

ನನ್ನ ಅದೃಷ್ಟವೊ ಏನೊ, ನಾನು ಹೋಗುವ ವೇಳೆಗೆ ರಾತ್ರಿ ಪಾಳಿ ಮುಗಿಸಿ ವೀಕ್ಲಿ ಆಫ್ ಮೂಡಿನಲ್ಲಿದ್ದ ಕರಿಯಣ್ಣ ಮನೆಯ ಹೊರ ಜಗುಲಿಯಲ್ಲಿ ಕುಳಿತು ಯಾವುದೊ ಹಳೆಯ ಹಾಡನ್ನು ಗುನುಗಿಕೊಳ್ಳುತ್ತಿದ್ದ. ಬಾಲ್ಯದಿಂದಲೂ ಅವನು ಮತ್ತು ನಾನು ಸಂಗೀತಾಸಕ್ತರು. ರಾಗ–ಜ್ಞಾನವುಳ್ಳವರು.

“ಕರಿಯಣ್ಣ, ಇದು ಯಮನ್ ಕಲ್ಯಾಣಿ ಅಲ್ವೆ, ಎಂದೂ ಈ ರಾಗವನ್ನು ನೀನು ನೆನಪಿಸಿಕೊಂಡಿದ್ದೇ ಇಲ್ಲ ಅಂದೆ”.

'ಏನ್ಮಾಡ್ಲಿ ಗುರು, ಹೊಸ ಸರ್ಕಾರ ಬಂದ್ಮೇಲೆ ನಮ್ಗೆ ಗ್ರಹಚಾರ ವಕ್ಕರಿಸೈತೆ. ನಮ್ದು ನಾಯಿ ಪಾಡಾಗಿ ಹೋಗಿದೆ. ಇಷ್ಟು ದಿವ್ಸ ಮೋಹನ, ತೋಡಿ, ಕಾಂಬೋಜಿಯಲ್ಲಿದ್ದ ನಾವು ಈಗ, ಕದನ ಕುತೂಹಲ, ಯಮನ್ ಕಲ್ಯಾಣಕ್ಕೆ ಬಂದು ತಲುಪಿದ್ದೀವಿ. ಅಂದ್ಹಾಗೆ, ನೀನು ಈ ಹೊತ್ನಲ್ಲಿ ಬಂದಿರೋದು ಪರಮಾಶ್ಚರ್ಯ. ಸುಮ್ ಸುಮ್ನೆ ಬರೊ ಆಸಾಮಿಯಲ್ಲ, ಇನ್ನೊಂದ್ವಾರದಲ್ಲಿ ನಾನೇ ನಿನ್ತಾವ ಬರೋನಿದ್ದೆ"

'ಯಾಕೆ?'

'ಬಸ್ ಕಲೆಕ್ಷನ್ನೇ ಡಲ್ಲಾಗಿ ಹೋಗಿ, ನಮ್ಮ ಇಲಾಖೆ ಬರಿಗೈ ಮಾಡ್ಕೊಂಡು ಕುಂತದೆ. ಎರ್ಡು ತಿಂಗಳಿನಿಂದ ಸಂಬ್ಳ ಕೊಟ್ಟಿಲ್ಲ'

'ವರಿ ಮಾಡ್ಕೊ ಬ್ಯಾಡ ಕರಿಯಣ್ಣ, ನಾನಿದ್ದೀನಿ, ಅಂದ್ಹಾಗೆ ಈಗ ನಿಂದು ಯಾವ ರೂಟು?'

' ಈ ದುರ್ವ್ಯವಸ್ಥೆ ಹೀಗೇ ಮುಂದುವರೆದ್ರೆ, ನನ್ನ ರೂಟ್....' ಎಂದು ಸೀಲಿಂಗ್ ಫ್ಯಾನಿನ ಪಕ್ಕದ ಕಬ್ಬಿಣದ ಕೊಕ್ಕೆಯತ್ತ ಬೆರಳು ತೋರಿದ ಕರಿಯಣ್ಣ.

'ಛೇ ಛೆ ಬಿಡ್ತು ಅನ್ನು ಕರಿಯಣ್ಣ, ಈ ಹೊತ್ನಲ್ಲಿ ಸಾಯುವ ದುರ್ಯೋಚನೆ ಯಾಕೆ? ಆಗಿಂದಾಗ್ಗೆ ನಿಮ್ಮನ್ನ ಹೊಸ ರೂಟುಗಳಿಗೆ ಬದಲಾಯಿಸ್ತಿರುತ್ತಾರಲ್ಲ ಆ ಅರ್ಥದಲ್ಲಿ ಕೇಳಿದೆ.'

"ಒಂದ್ವಾರದಿಂದ ಧರ್ಮಸ್ಥಳದ ರೂಟು ಹಾಕವ್ರೆ. ಅದೇ ಜೀವಕ್ಕೆ ಕುತ್ತು ತಂದಿರೋದು. ಫ್ರೀ ಬಸ್ ಅಂದ್ಕೊಡಲೇ ಶ್ರೀ ಕ್ಷೇತ್ರ ಮಂಜುನಾಥನ ದರ್ಶನಕ್ಕೆ ಮುಗಿ ಬಿದ್ದವ್ರೆ ಲೇಡೀಸು. ಅವ್ರನ್ನ ಕಂಟ್ರೋಲ್ ಮಾಡೋದೆ ನನ್ಗೆ ಸಾಕಾಗಿ ಹೋಗದೆ. ಬ್ಯಾಡಿ...ನೂಕು ನುಗ್ಗಲು ಮಾಡಬ್ಯಾಡಿ...ಹೀಗೆ ಮಾಡ್ತಿದ್ರೆ, ಹಾರ್ಟ್ ಅಟ್ಯಾಕ್ ಆಗಿ ಜಯದೇವ ಆಸ್ಪತ್ರೆ ಮಂಜುನಾಥ ದರ್ಶನಕ್ಕೆ ಹೊಂಟೋಯ್ತೀರಿ' ಅಂತ ಹೆದರಿಸಿದ್ರೂ ಕಂಟ್ರೋಲ್ಗೇ ಸಿಗ್ತಾಯಿಲ್ಲ. ಈ ಗಲಾಟೇಲಿ ನನ್ನ ಕಣ್ಣೇ ಮಂಜು ಮಂಜಾದಂತಾಗಿ, ಬೆರಳಿಕೆಯ ಗಂಡಸ್ರಿಗೂ ಬಸ್ನಲ್ಲಿ 'ಜೀರೋ' ಟಿಕೆಟ್ಟು ಹರಿದು ಸ್ಟ್ಯಾಂಡಿನಲ್ಲಿ ಕಂಟ್ರೋಲರ್ ತಾವ ಕಂಡಾಪಟ್ಟೆ ಬೈಸಿಕೊಂಡಿವ್ನಿ..ನನ್ಕಥೆಇರಲಿ, ನೀನ್ಯಾಕ್ಬಂದದ್ದು ಅಂತಾ ಮೊದ್ಲು ಹೇಳು.."

ಮಡದಿ ಪದ್ದಿಯ ಅಭಿಲಾಷೆಯನ್ನು ಸವಿವರವಾಗಿ ಕೇಳಿ ವ್ಯಗ್ರಗೊಂಡ ಕರಿಯಣ್ಣ ನನಗೇ ಕ್ಲಾಸು ತೆಗೆದುಕೊಂಡ.

"ಬುದ್ಧಿ ಐತೇನ್ಲಾ ನಿನ್ಗೆ? ಪೇಪರ್ರು, ಟಿ.ವಿ., ಮೊಬೈಲ್ ನೋಡ್ತಾನೆ ಇಲ್ವ..? ಮೊನ್ನೆ ನನ್ನ ಟ್ರಿಪ್ಪಿನಲ್ಲಿ ಬಾಗಿಲನ್ನೇ ಕಿತ್ತೆಸೆದವ್ರೆ. ಎಲ್ರೂ ಕಿಟಕಿಯನ್ನೇ ಬಾಗಿಲು ಮಾಡ್ಕೊಂಡು ಹತ್ತಾವ್ರೆ... ಮಳವಳ್ಳಿ ಕಡೆ ಒಂದು ಹೆಂಗಸಿಗೆ ಕೈಯೆ ಕಟ್ಟಾಗಿ ಹೋಗದೆ...ನನ್ನ ಟ್ರಿಪ್ಪಿನಲ್ಲಿ ಕಲೆಕ್ಷನ್ ಬ್ಯಾಗಿನ ಹ್ಯಾಂಡಲ್ಲೇ ಕಟ್ಟಾಗಿ ಹೋಗಿ, ಹ್ಯಾಂಡಲ್ಲು ನನ್ತಾವ ಉಳಿದು ಮೇನ್ ಬ್ಯಾಗು ಅದ್ಯಾರ್ ಕೈಗೋ ಹೊಂಟೋಗದೆ. ಇಷ್ಟೆಲ್ಲಾ ಪ್ರಾಬ್ಲಂಸ್ ಇರುವಾಗ ನಿನ್ನ ಹೆಂಡ್ರುದ್ದೇನು ತಗಾದೆ? ಇನ್ನಷ್ಟು ದಿನ ಬದುಕಿ ಬಾಳಬೇಕಾದ ಜೀವ ಅದು.."

"ಅಂದ್ಹಾಗೆ, ಈ ಗಲಾಟೇಲಿ ನೀನು ಹ್ಯಾಗೆ ಬಸ್ಸು ಹತ್ತುತ್ತಿದಿ?

"ಇದ್ಯೆಲ್ಲಪ್ಪಾ, ಡ್ರೈವರ್ ಸೀಟಿನ ಬಾಗಿಲು"

'ಆದ್ರೆ ಮಹಿಳಾ ಭಕ್ತರು ಆ ಬಾಗಿಲಿನಿಂದಲೂ ಹತ್ತೋಕೆ ಷುರು ಮಾಡಿದ್ರೆ?'

'ಹಾಗೂ ಆಯ್ತು ಅನ್ನು, ಆದ್ರೆ ನಮ್ಮ ಡ್ರೈವರ್ ಕೆಂಪಣ್ಣ ಬಲು ಜಾಣ. ಆ ಬಾಗಿಲಿಗೆ ಲಾಕ್ ಸಿಸ್ಟಮ್ ಮಾಡಿಸಿ, ನನ್ಗೊಂದು ಬೀಗದ ಎಸಳು ಕೊಟ್ಟವ್ನೆ.'

'ಈಗ ನಾನೇನ್ಮಾಡಲಿ ಅಂತ ಹೇಳ್ತಿ ಕರಿಯಣ್ಣ, ಪದ್ದೀದು ಒಂದೇ ಕೆಟ್ಟ ಹಠ'

'ಹಂಗಾದ್ರೆ ಒಂದ್ಕೆಲ್ಸ ಮಾಡ್ಲಿ..ಬಸ್ಸು ಬೆಳಿಗ್ಗೆ ಆರೂ ಮುವತ್ತಕ್ಕೆ ಸ್ಟ್ಯಾಂಡು ಬಿಡೋದು. ಒನ್ ಹವರ್ ಮುಂಚೆ, ನಿನ್ನ ಹೆಂಡ್ರು ಮತ್ತು ಅವರ ಸಂಘದೋರು ಜೀವ ಕೈಯಲ್ಲಿ ಹಿಡ್ಕೊಂಡು ಬಾಗಿಲ್ತಾವ ಬಂದು ನಿಲ್ಲಲಿ. ಆಟೋಮ್ಯಾಟಿಕ್ಕಾಗಿ ಜನ ಜಂಗುಳಿ ಅವರ್ನ ಬಸ್ ಹತ್ತಿಸ್ಬುಡ್ತದೆ. ಬಾಂಬೆ ಲೋಕಲ್ ಟ್ರೈನು ಇದ್ದ ಹಾಗೆ. ಆದರೆ, ಆದರೆ ಇದರಲ್ಲಿ ಒಂದು ರಿಸ್ಕೂ ಇದೆ. ನಿನ್ನ ಹೆಂಡ್ರು ಆ ಕಡೆ ಕಿಟಕಿಯಿಂದ ಹೊರಬರುವ ಛಾನ್ಸೂ ಇದೆ. ಯಾವುದಕ್ಕೂ ಸೇಫ್ಟಿಗೆ ನೀನು ಆ ಕಡೆ ನಿಂತಿರು," ಮಾತು ನಿಲ್ಲಿಸಿ ನನ್ನತ್ತ ಕನಿಕರ ದೃಷ್ಟಿ ಹರಿಸಿದ ಕರಿಯಣ್ಣ. ಇಳಿಯುತ್ತಿದ್ದ ಬೆವರನ್ನು ವರೆಸಿಕೊಂಡ ನಾನು, 'ಇದಕ್ಕೇನು ಪರಿಹಾರ ಇಲ್ವೆ ಕರಿಯಣ್ಣ ಎಂದು ಉಗುಳು ನುಂಗುತ್ತಾ ಕೇಳಿದೆ,"

'ಇದೆ, ನನ್ನ ನೌಕರರ ಸಂಘ ಒಂದು ತೀರ್ಮಾನಕ್ಕೆ ಬಂದು ಠರಾವನ್ನು ಇಲಾಖಾ ಉನ್ನತಾಧಿಕಾರಿಗಳಿಗೆ ರವಾನಿಸಿದೆ. ಸಾರಿಗೆ ಮಂತ್ರಿಗಳು ಇನ್ನೂ ಡಿಸಿಷನ್ನನ್ನು ತೆಗೆದುಕೊಂಡಿಲ್ಲ"

'ಏನು ಠರಾವು'?

ಉಚಿತ ಪ್ರಯಾಣದ ಬಸ್ಸಿನ ಎಲ್ಲಾ ಸೀಟುಗಳನ್ನು (ಡ್ರೈವರ್ದು ಹೊರತುಪಡಿಸಿ) ತೆಗೆಸಿ, ಸ್ಟ್ಯಾಂಡಿಂಗ್ ಅಕಾಮಡೇಶನ್ ಮಾಡೋದು, ಸೀಟಿದ್ದರೆ ತಾನೆ ಬಸ್ನಲ್ಲಿ ರಷ್ಟು, ಹೊಡೆದಾಟ, ಬಡಿದಾಟ ಎಲ್ಲ'

'ಔಟ್‌ಸ್ಟ್ಯಾಂಡಿಂಗ್ ಐಡಿಯ ಕರಿಯಣ್ಣ ಅಂದ್ಹಾಗೆ ನಿನ್ಗತಿ ಏನೂಂತೀನಿ'

ಈ ಬಗ್ಗೆ ಇದುವರೆವಿಗೂ ತಲೆಕೆಡಿಸಿಕೊಂಡಿರದಿದ್ದ ಕರಿಯಣ್ಣ, ನೀರೊಳಗಿದ್ದೂ ಬೆಮರ್ದಂ ಅನ್ನುವಂತಾದೆ. ಅವನಿಗೆ ಧೈರ್ಯ ಹೇಳುವ ಇರಾದೆಯಿಂದ "ಡೋಂಟ್‌ವರಿ ಕರಿಯಣ್ಣ, ಈ ವಿಚಾರದಲ್ಲಿ ನನ್ದೂ ಒಂದು ಸಜೆಷನ್ ಇದೆ. ನಿಮ್ಮ ಸರ್ಕಾರಿ ಬಸ್ನಲ್ಲಿ, ಡ್ರೈವರ್ ಸೀಟಿನ ಹಿಂಭಾಗ, ಒಂದು ಸಮಯೋಚಿತ, ಮುಂದಾಲೋಚನೆಯ ಕವಿ ಚಿಂತನೆಯ ಫಲಕ ತೂಗು ಹಾಕಲ್ಪಟ್ಟಿದೆ.

'ಇರುವ ಭಾಗ್ಯವ ನೆನೆದು, ಬಾರದೆಂಬುದನು ಬಿಡು, ಹರುಷಕ್ಕಿದೇ ದಾರಿ' ಅಂತ.

ಆ ಫಲಕವನ್ನು ಆ ಜಾಗದಿಂದ ಕಿತ್ತು ಬಸ್ಸಿನ ಮುಂಬಾಗಿಲಿನ ಎಂಟ್ರೀ ಬಳಿ ಹಾಕಿದರೆ ಹ್ಯಾಗೆ' ನನ್ನ ಮಾತು ಕೇಳಿ ಮರು ಜೀವ ಪಡೆದ ಕರಿಯಣ್ಣ ಕೃತಜ್ಞತಾ ಭಾವದಿಂದ ತನ್ನೆರಡು ಕೈನ್ನೂ ಮೇಲಕ್ಕೆ ಎತ್ತಿ ಕೈ ಮುಗಿದ. ಈ ಸಮರ್ಪಣಾ ಭಾವ ನನಗೋ ಅಥವಾ ಆ ಶ್ರೇಷ್ಠ ಕವಿ ಚಿಂತನೆಗೊ ತಿಳಿಯದಾಯಿತು. !

■

## ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

ದಂನಆ

- ✓ ವಿಕಾಸವಾದ ನಿಜ ಎನ್ನುವದಾದರೆ ತಾಯಂದಿರಿಗೇಕೆ ಇನ್ನೂ ಎರಡೇ ಕೈಗಳಿವೆ.
- ✓ ಹಿರಿಯರ ಉಪದೇಶಗಳನ್ನು ಆಲಿಸಿ. ಅವರು ಮಾಡಿದ್ದೆಲ್ಲ ಸರಿ ಎಂಬ ಕಾರಣಕ್ಕಲ್ಲ. ಹೆಚ್ಚು ತಪ್ಪುಗಳನ್ನು ಮಾಡಿ ಅನುಭವ ಪಡೆದಿರುವ ಕಾರಣಕ್ಕಾಗಿ.
- ✓ ಪ್ರಾಮಾಣಿಕ ಸಂಬಂಧಗಳು ನೀರಿನಂತೆ – ಬಣ್ಣವಿಲ್ಲ, ವಾಸನೆ ಇಲ್ಲ, ರುಚಿ ಇಲ್ಲ ಆದರೆ ಬದುಕಿಗೆ ಬಹು ಮುಖ್ಯ.
- ✓ ಹಿಸ್ಟರಿ ಈಸ್ ನಾಟ್ ದಿ ಪಾಸ್ಟ್. ಇಟ್ ಈಸ್ ದಿ ಮೆಥಡ್ ವಿ ಹ್ಯಾವ್ ಇವಾಲ್ವ್ಡ್ ಆಫ್ ಆರ್ಗನೈಸಿಂಗ್ ಅವರ್ ಇಗ್ನೊರನ್ಸ್ ಆಫ್ ದಿ ಪಾಸ್ಟ್.
- ✓ ಎಲ್ಲಿ ಅಪೇಕ್ಷೆ ಇರುತ್ತದೋ ಅಲ್ಲಿ ಮಾರ್ಗ ಇರುತ್ತದೆ.
- ✓ ಶರೀರ ಒಳಗೆ ಆರೋಗ್ಯವಾಗಿದ್ದರೆ ಹೊರಗೆ ಹೊಳೆಯುತ್ತಿರುತ್ತದೆ.
- ✓ ಆ್ಯಂಗರ್ ಈಸ್ ಎ ಸೈನ್ ಆಫ್ ವೀಕ್‌ನೆಸ್ ಅಂಡ್ ಟಾಲರೆನ್ಸ್ ಈಸ್ ಎ ಸೈನ್ ಆಫ್ ಸ್ಟ್ರೆಂಗ್ತ್.
- ✓ ಶಾಂತಿಯನ್ನು ಕದಡುವ ವಸ್ತುಗಳು ಯಾವಾಗಲೂ ದುಬಾರಿ.
- ✓ ನನ್ನ ತಪ್ಪುಗಳನ್ನು ನನಗೆ ತಿಳಿಸಿ ಇತರರಿಗಲ್ಲ ಏಕೆಂದರೆ ಆ ತಪ್ಪುಗಳನ್ನು ನಾನು ತಿದ್ದಿಕೊಳ್ಳಬೇಕು, ಆ ಇತರರಲ್ಲ.
- ✓ ದೊಡ್ಡ ಗುಂಪಿನ ಅನುಯಾಯಿಯಾಗಿರುವದಕ್ಕಿಂತ ಸಣ್ಣ ಗುಂಪಿನ ನಾಯಕನಾಗಿರುವುದು ಉತ್ತಮ.
- ✓ ಇನ್ ಡೆಮಾಕ್ರಸಿ ಯು ನೀಡ್ ನಾಟ್ ರಿಯಲಿ ನೀಡ್ ಟು ಅಗ್ರೀ ಆಲ್ ದಿ ಟೈಂ ಎಕ್ಸೆಪ್ಟ್ ಆನ್ ದಿ ಗ್ರೌಂಡ್ ರೂಲ್ ಆಫ್ ಹೌ ವಿ ಆಲ್ ಡಿಸ್‌ಅಗ್ರೀ.
- ✓ ಒಬ್ಬರು ಹೇಳುವುದನ್ನು ನಿಜವಾಗಿಯೂ ಕೇಳಿಸಿಕೊಳ್ಳುವುದೇ ಅವರಿಗೆ ನಾವು ಕೊಡುವ ಗೌರವ.
- ✓ ದೇರ್ ಈಸ್ ನೊ ಬಿಕಾಸ್ ಟು ಮರ್ಡರ್.
- ✓ ಈ ಜಗತ್ತಿನಲ್ಲಿ ಅಷ್ಟೊಂದು ಅದ್ಭುತಗಳಿದ್ದರೂ ಕೆಲವು ಮಂದಿ ಬೇಸರ ಎಂಬುದನ್ನು ಕಂಡುಹಿಡಿದಿದ್ದಾರಲ್ಲ!
- ✓ ಐ ವುಡ್ ರ್‍ಯಾದರ್ ಹ್ಯಾವ್ ಎ ಮೈಂಡ್ ಓಪನ್ಡ್ ಬೈ ವಂಡರ್ ದ್ಯಾನ್ ಒನ್ ಕ್ಲೋಸ್ಡ್ ಬೈ ಬಿಲೀಫ್.

■

# ಅಮೇರಿಕಾಯಣ

✍ ಎಂ.ವಿ. ಶಶಿಭೂಷಣ ರಾಜು
ಪೆನ್ಸಿಲ್ವೇನಿಯ, ಅಮೇರಿಕ

ಜಗತ್ತಿನಾದ್ಯಂತ ವಲಸೆ ಎನ್ನುವುದು ಒಂದು ಸಾಧಾರಣ ಸಂಗಾತಿಯಾಗಿರುವ ಈ ಹೊತ್ತಿನಲ್ಲಿ, ವಲಸೆಹೋಗಿ ಬೇರೆ ದೇಶಗಳಲ್ಲಿ ಹೊಂದಿಕೊಳ್ಳುವುದು ಬಲು ಸುಲಭವಾಗಿದೆ. ಸುಲಭವಾಗಿ ಪ್ರಯಾಣಮಾಡಿ, ಬೇಕೆಂದಾಗ ಹಿಂತಿರುಗಿ ಮನೆ ಸೇರಿಕೊಳ್ಳುವುದು ಸುಲಭವಾಗಿರುವ ಈ ಕಾಲಘಟ್ಟದಲ್ಲಿ ವಲಸೆ ಹೊರಡುವುದು, ಉದ್ಯೋಗಕ್ಕಾಗಿ ದೂರದ ದೇಶಕ್ಕೆ ಪ್ರಯಾಣಿಸುವುದು ಅಂತಹ ಬೇಸರದ, ದುಃಖದ ಸಂಗಾತಿಯಾಗಿ ಉಳಿದುಕೊಂಡಿಲ್ಲ (ಒಂದು ಕಾಲದಲ್ಲಿ ವಿದೇಶ ಪ್ರಯಾಣ ಹೆಮ್ಮೆಯೂ ಹೌದು).

ನಮ್ಮ ನೆಲ, ಜಲ ಭಾಷೆ ಬಿಟ್ಟು ಜೀವನ ನಡೆಸುವ ಅನಿವಾರ್ಯತೆಯಿಂದ ಹೊರಗೆಲ್ಲೋ ನೆಲೆಸಿರುವವರಿಗೆ, ತಮ್ಮದಲ್ಲವ ಬಿಟ್ಟ ನೋವಿನಿಂದಲೋ, ತಪ್ಪಿತಸ್ಥ ಭಾವನೆಯಿಂದಲೋ, ತಾವೇನೋ ಕಳೆದುಕೊಳ್ಳುತ್ತಿದ್ದೇವೆ ಎನ್ನುವ ಅನುಮಾನದಿಂದಲೋ ತಮ್ಮ ದೇಶ, ಭಾಷೆಗಳನ್ನು ಇನ್ನೂ ಹೆಚ್ಚು ಪ್ರೀತಿಸುತ್ತಾರೆ. ತಮ್ಮ ಜಾಗಗಳಲ್ಲಿಯೇ ಸಂಘಗಳನ್ನು ಸ್ಥಾಪಿಸಿಕೊಂಡು ತಮ್ಮವರನ್ನು ಒಟ್ಟು ಗೂಡಿಸಿ ತಮ್ಮ ಸ್ವಂತ ದೇಶಪ್ರೇಮವನ್ನು ಜಾಗೃತಗೊಳಿಸಿಕೊಳ್ಳಲು ಪ್ರಯತ್ನಿಸುತ್ತಾರೆ.

ದೂರದ ಅಮೇರಿಕಾವನ್ನು, ಭಾರತದಿಂದ ಇಪ್ಪತ್ತುನಾಲ್ಕು ಗಂಟೆಗಳ ಒಳಗಾಗಿ ತಲಪಬಹದು. ಒಂದು ದಿನದ ಸಮಯ ತುಂಬಾ ಅನಿಸಿದರು, ಮಾನವನ ಸಾಧನೆಗಳಲ್ಲಿ ಇದೊಂದು ಅದ್ಭುತವೇ ಹೌದು. ಹಿಂದೆ ಹಡಗುಗಳಲ್ಲಿ ತಿಂಗಳುಗಟ್ಟಲೆ ಪ್ರಯಾಣಿಸಿ ಬೇರೆ ಬೇರೆ ದೇಶಗಳನ್ನು ತಲುಪಬೇಕಾಗಿತ್ತು, ಹೀಗೆ ಪ್ರಯಾಣಿಸಿದಾಗ ಸೇರಬೇಕಾಗಿರುವ ಸ್ಥಳ ಸೇರುವ ನಂಬಿಕೆ ಇರುತ್ತಿರಲಿಲ್ಲ. ಈಗ ವಿಮಾನ ಪ್ರಯಾಣ ಪ್ರಯಾಣಗಳಲ್ಲೆಲ್ಲಾ ಅತ್ಯಂತ ಸುರಕ್ಷಿತ ಎಂದು ಸಾಬೀತಾಗಿದೆ.

ಹೊಸ ಸ್ಥಳಕ್ಕೆ ಹೊಂದಿಕೊಳ್ಳಲು ಸ್ವಲ್ಪ ದಿನ ಬೇಕಾಗುತ್ತದೆ, ಅದು ಬೇರೆ ದೇಶವಾದರಂತೂ, ಅಲ್ಲಿನ ವಾತಾವರಣ, ಜನ, ಭಾಷೆ, ಸಂಪ್ರದಾಯ, ಕಾನೂನು ಕಟ್ಟಳೆ, ಊಟ ಮುಂತಾದವುಗಳ ಅರಿವು ಬೆಳೆಸಿಕೊಳ್ಳಲು ವರ್ಷಗಳೇ ಆಗಬಹದು.

ಇರಲಿ, ಅಮೇರಿಕಾಗೆ ನಾವು ಮೊದಲು ಅಂದರೆ 2001ಲ್ಲಿ ಬಂದಾಗ ಗೊಂದಲದಲಿ ಮುಳುಗಿ ಏಳಬೇಕಾಯಿತು. ಎಲ್ಲಾ ತಿರುವು ಮುರುವು, ಭಾರತದಲ್ಲಿ ಕೀಪ್ ಲೆಫ್ಟ್ ಎಂದರೆ ಇಲ್ಲಿ ಕೀಪ್ ರೈಟ್, ಇಲ್ಲಿ ಲೈಟ್ ಆನ್ ಮಾಡಬೇಕಾದರೆ ಸ್ವಿಚ್ ಅನ್ನು ಮೇಲೆ ಹಾಕಬೇಕು, ಭಾರತದಲ್ಲಿ ಕೆಳಗೆ ಹೀಗೆ ಅನೇಕ. ಮೊದಲು ಕಾರಿನಲ್ಲಿ ಕುಳಿತಾಗ, ಡ್ರೈವ್ ಮಾಡುತ್ತಿರುವವರು ಬಲ ತಿರುವು ತೆಗೆದುಕೊಂಡಾಗ, ಗಾಬರಿಗೊಂಡು ನೋಡುತ್ತಿದ್ದೆ, ರಾಂಗ್ ಸೈಡ್ ಹೋಗುತ್ತಿದ್ದಾರೆ ಎಂದು. ಎಲ್ಲಿ ಯಾವುದಾದರೂ ಕಾರು ಬಂದು ಗುದ್ದುವುದೋ ಎಂದು.

ಎಲ್ಲಿ ನೋಡಿದರೂ ಕಾರುಗಳದೇ ಕಾರುಬಾರು, ಯಾವುದೇ ಸ್ಥಳವೂ ಹತ್ತಿರವಲ್ಲ, ತರಕಾರಿಗೂ, ಹಾಲಿಗೂ ಕಾರಿನಲ್ಲೇ ಹೋಗಬೇಕು ಅಷ್ಟು ದೂರ. ನಡೆದರೆ ಅರ್ದಗಂಟೆಯಿಂದ ಒಂದು ಘಂಟೆ ನಡೆಯಬೇಕು, ಆಟೋಗಳಿಲ್ಲ. ಸಿಟಿಗಳಲ್ಲಿ ಸ್ವಲ್ಪ ಹತ್ತಿರ ಇರಬಹುದು. ಅಷ್ಟುದೂರ ನಡೆದು ಭಾರ ಹೊತ್ತಿಕೊಂಡು ನಡೆದು ಬರೆದು ಬೇಕಾಗಿತ್ತು. ಬೇಸಿಗೆಯಲ್ಲಿ ಸರಿ ಆದರೆ ಚಳಿಗಾಲದಲ್ಲಿ ಹಿಂಸೆ. ಅದರಲ್ಲೂ ಹಿಮಬಿದ್ದಾಗ ಮಕ್ಕಳಿಗೆ ಖುಷಿಯಾಗುತ್ತಿತ್ತೇನೋ ಆದರೆ ನಮಗೆ ಮಾತ್ರ ಜಾರುತ್ತಾ

ನಡೆಯಲಾರದೇ ಎಲ್ಲಿ ಬೀಳುತ್ತೇವೋ ಎಂದು ಭಯದಿಂದ ನಡೆಯಬೇಕಾಗಿತ್ತು. ಟ್ಯಾಕ್ಸಿ ಕೊಡುವಷ್ಟು ಹಣವೂ ಇರುತ್ತಿರಲಿಲ್ಲ. ಇರಲಿ, ಕಾರು ಪುರಾಣಕ್ಕೆ ಬರೋಣ, ಕಾರಲ್ಲಿ ಡ್ರೈವಿಂಗ್ ಸೀಟ್ ಎಡಕ್ಕೆ, ಡ್ರೈವಿಂಗ್ ಕಲಿಯುವ ಮೊದಲೂ ಯಾವಾಗಲೂ ಪ್ಯಾಸೆಂಜರ್ ಸೀಟ್ ಅಂದುಕೊಂಡು ಡ್ರೈವಿಂಗ್ ಸೀಟ್ ಕಡೆ ಹೋಗುತ್ತಿದ್ದೆವು, ಮತ್ತೆ ಸ್ಟಿಯರಿಂಗ್ ನೋಡಿ ಬೇರೆ ಕಡೆ ಹೋಗುತ್ತಿದ್ದೆವು. ಕ್ರಮೇಣ ಅಭ್ಯಾಸವಾಯಿತು. ತರೇವಾರಿ ಕಾರುಗಳಿದ್ದವು, ಎಲ್ಲಾ ಬಣ್ಣಗಳಲಿ, ಎಲ್ಲಾ ಗಾತ್ರಗಳಲಿ. ಕ್ರಮೇಣ ನಾವು ವಾಹನ ಚಾಲನೆ ಪಡೆದು, ಕಾರು ಖರೀದಿಸಿ ಡ್ರೈವಿಂಗ್ ಎಕ್ಸ್‌ಪರ್ಟ್ ಗಳಾದೆವು.

ಆಗತಾನೆ ಅಮೇರಿಕಾಗೆ ಬಂದ ನಾವು, ಮನೆಗೆ ಬಂದಮೇಲೆ ಇನ್ನೂ ಲುಂಗಿಯನ್ನೇ ಉಡುತಿದ್ದೆವು. ಒಂದು ದಿನ ನಾವು ಲುಂಗಿ ಉಟ್ಟು ಹೊರಗಡೆ ಬಂದೆವು, ಹಾಗೆ ಅಡ್ಡಾಡುತ್ತಾ ವಾಕಿಂಗ್ ಹೋಗೋಣ ಎಂದು ಹೊರಟೆವು. ಎಲ್ಲಾರೂ ವಿಚಿತ್ರವಾಗಿ ನಮ್ಮನ್ನೇ ನೋಡುತ್ತಿದ್ದರು, ಒಬ್ಬ ಚಿಕ್ಕ ಹುಡುಗ ಅವನ ಅಮ್ಮನಿಗೆ ಕೇಳಿದ "ಅಮ್ಮ ಅವರು ಯಾಕೆ ಹೆಂಗಸರ ತರ ಲಾಂಗ್ ಸ್ಕರ್ಟ್ ಧರಿಸಿದ್ದಾರೆ' ಎಂದು. ಒಬ್ಬ ಮಹಿಳೆ ನಮ್ಮನ್ನು ನೋಡಿ "ನೈಸ್ ಡ್ರೆಸ್" ಎಂದರು. ತರಾವರಿ ಬಣ್ಣಗಳಲಿದ್ದ ಲುಂಗಿಗಳ ನೋಡಿ ಅವರಿಗೆ ಸೋಜಿಗ ಅನಿಸಿರಬೇಕು. ಅವರಿಗೆ ತಿಳಿದಿಲ್ಲ ಲುಂಗಿಯ ಮಹಿಮೆ, ಎಷ್ಟೋ ಸಲ ಭಾರತದಲ್ಲಿ ಅದು ನಮಗೆ ಹೊದಿಕೆಯಾಗುತ್ತದೆ, ಚಳಿಗೆ ಚನ್ನಾಗಿರುತ್ತದೆ.

ಭಾರತಕ್ಕೆ ಅಮೇರಿಕಾದಿಂದ ಫೋನ್ ಮಾಡಬೇಕಾದರೆ. 011–91 ಒತ್ತಬೇಕು. 91 ಭಾರತದ ಕೋಡ್, ನಾವು ಎಷ್ಟೋ ಸಲ 911 ಒತ್ತಿದ್ದೇವೆ, 911 ಅಮೆರಿಕಾದ ಹೆಲ್ಪ್ ಲೈನ್, ಪೊಲೀಸರು ಆ ನಂಬರ್ಗೆ ಫೋನ್ ಮಾಡಿದರೆ ಶೀಘ್ರ ಬಂದು ವಿಚಾರಿಸುತ್ತಾರೆ. ಒಮ್ಮೆ ಹೀಗಾಯಿತು, ನಾನು ತಪ್ಪಾಗಿ 011–911 ಒತ್ತಿಬಿಟ್ಟೆ. ಐದು ನಿಮಷಕ್ಕೆ ಡೋರ್ ಬೆಲ್ ರಿಂಗ್ ಆಯಿತು. ಹೋಗಿ ಬಾಗಿಲು ತೆಗೆದರೆ, ಇಬ್ಬರು ಪೊಲೀಸ್, ಭಾರತದಲ್ಲಿ ಪೊಲೀಸ್ ಕಂಡರೆ ಭಯವಾಗುತ್ತಿತ್ತು, ಇಲ್ಲಿ ಇನ್ನೂ ಹೆಚ್ಚು ಭಯವಾಯಿತು, "ಎಲ್ಲಾ ಸರಿ ಇದೆಯಾ" ಎಂದು ಕೇಳಿದರು. ತಲೆ ಮೇಲೆ ಕೆಳಗೆ ಆಡಿಸಿದೆ. "ನಾವು ಒಳಗೆ ಬರಬಹುದೇ" ಎಂದರು. ನಾನು ದಾರಿಬಿಟ್ಟೆ. ನಮಗೆ ಕಂಪನಿ ಆ ಮನೆಯನ್ನು ಕೊಟ್ಟಿತ್ತು. ನಾವು ಐದು ಜನ ಅಲ್ಲಿದ್ದೆವು. ಪೊಲೀಸ್ ಬಂದಾಗ ಎಲ್ಲರೂ ಹಾಲಿಗೆ ಬಂದರು, ನಮ್ಮನ್ನು ನೋಡಿದ ಪೊಲೀಸ್ ಜೋರಾಗಿ ನಗಲು ಸುರು ಮಾಡಿದರು. ಯಾಕೆ ಎಂದು ನಮಗೆ ಗೊತ್ತಾಗಲೇ ಇಲ್ಲಾ, ಏನಾಯಿತು ಎಂದು ಮುಖ ಮುಖ ಮಾಡಿಕೊಂಡೆವು. ಕೊನೆಗೆ "ಅದು ಏನು" ಎಂದರು ನಮ್ಮ ಲುಂಗಿಗಳ ಕಡೆ ತೂರಿಸಿ, ಐದು ಜನ ಐದು ಬೇರೆ ಬಣ್ಣದ ಲುಂಗಿ ಉಟ್ಟಿದ್ದೆವು. ನಾವು ನಗುತ್ತಾ ಅದನ್ನು ಲುಂಗಿ ಎನ್ನುತ್ತಾರೆ ಎಂದು ಲುಂಗಿಯ ಮಹಿಮೆ ಸಾರಿದೆವು. ಅವರು ಮನೆಯಲಿ ಒಂದು ಸುತ್ತು ಹೊಡೆದು ಎಲ್ಲ ಸರಿಯಿದೆ ಎಂದು ಖಾತ್ರಿಮಾಡಿಕೊಂಡು ಹೊರಟುಹೋದರು. ಹೋಗುತ್ತಾ "ಪದೇ ಪದೇ 911 ಗೆ ಫೋನ್ ಮಾಡಬೇಡಿ, ಫೈನ್ ಬೀಳುತ್ತೆ" ಎಂದು ಹೇಳಿದರು. ಕೊನೆಗೆ ಒಂದು ದಿನ ಲುಂಗಿಗೆ ತಿಲಾಂಜಲಿ ಬಿಟ್ಟು ಷಾರ್ಟ್‌ಗಳಿಗೆ ಬದಲಾದೆವು.

ಅಮೇರಿಕಾ ದಲ್ಲಿ ನಾವು ಗಾಭರಿಯಾಗಿದ್ದು ಮತ್ತೊಂದು ವಿಷಯಕ್ಕೆ ಅದು ಹೆಂಗಸರು ಸಿಗರೇಟ್ ಸೇದುವುದ ನೋಡಿ, ಅಷ್ಟೇನೂ ವಯಸ್ಸಲ್ಲದವರೇ ಅಲ್ಲದೆ ಮುದುಕಿಯರು ಸೇದುತ್ತಿದ್ದರು (ಈಗಲೂ ಸೇದುತ್ತಾರೆ), ನಮಗೆ ಸೋಜಿಗವೆನಿಸುತ್ತಿತು. ಬಿಳಿ ಮುಖದ, ಕೆಂಪು ತುಟಿಗೆ ಬಿಳಿ ಸಿಗರೇಟ್ ಹಿಡಿದು ಎಳೆಯುವ ಪರಿ, ಹೊಗೆಯನ್ನು ಹೊರಬಿಡುವ ಸ್ಟೈಲನ್ನು ಹಾಗೆ ಅವರಿಗೆ ಗೊತ್ತಿಲ್ಲದ ಹಾಗೆ ನೋಡುತ್ತಿದ್ದೆವು. ಸುಂದರಿಯರ ಈ ಸಿಗರೇಟ್ ಎಳೆಯುವ ಪರಿಗೆ ಮಾರುಹೋಗಿದ್ದೆವು. ಅಮೇರಿಕಾದಲ್ಲಿ

ಎಷ್ಟೇ ಸುಂದರಿಯನ್ನು ನೋಡಿದರೂ ಸೀರೆ ಅಥವಾ ಸಲ್ವಾರ್ ಕಮೀಜ್ ತೊಟ್ಟ ಭಾರತದ ಹುಡುಗಿಯರನ್ನು ಮಿಸ್ ಮಾಡಿಕೊಡಿದ್ದಂತೂ ಸತ್ಯ.

ಇನ್ನೊಂದು ದೊಡ್ಡ ಸವಾಲು ನನಗಾಗಿದ್ದು ಊಟದ್ದು, ಇಲ್ಲಿ ಮಾಂಸಾಹಾರ ಜಾಸ್ತಿ, ಬರ್ಗರ್ ಕಿಂಗ್, ಮೆಕ್ ಡೊನಾಲ್ಡಿಗೆ ಹೋದರೆ, ಸಸ್ಯಾಹಾರಿಗಳಿಗೆ ಏನೂ ಸಿಗುತ್ತಿರಲಿಲ. ಅವರು ಸ್ಯಾಂಡ್ ವಿಚ್ನಲ್ಲಿ ಮಾಂಸದ ತುಣಕು ಹಾಕಿ ಕೊಡುತ್ತಿದ್ದರು, ನಾವು ಮಾಂಸ ತೆಗೆದು ಬರೀ ಬ್ರೆಡ್ ತಿನ್ನಬೇಕಾಯಿತು. ಕೊನೆಗೆ ಸ್ಯಾಂಡ್ ವಿಚ್ ವಿಥ್ ನೋ ಮೀಟ್ ನೋ ಚಿಕನ್ ಎನ್ನುತಿದ್ದವು, ಆಗ ಮಾಂಸವಿಲ್ಲದೆ ಕೊಡುತ್ತಿದ್ದರು, ಅಂತಹ ರಾತ್ರಿ ಊಟವನ್ನು ತಿಂಗಳಗಟ್ಟಲೆ ತಿಂದಿದ್ದೇವೆ. ನಮ್ಮಲಿ ಕೆಲವರು ಅಮೆರಿಕಾಗೆ ಬಂದು ಮಾಂಸಾಹಾರಿಗಳಾಗಿದ್ದೂ ಉಂಟು. ಈಗ ತುಂಬಾ ಬದಲಾಗಿದೆ ಎಲ್ಲಾ ತರದ ಭಾರತ ತಿನಿಸುಗಳು ಸಿಗುತ್ತವೆ, ಬೇಕಾದಷ್ಟು ಭಾರತದ ರೆಸ್ಟೋರೆಂಟ್ಗಳಿವೆ. ಊಟಕ್ಕೆ ತೊಂದರೆ ಕಡಿಮೆ.

ಇದಲ್ಲದೆ ನಾವು ಈ ರೆಸ್ಟೋರೆಂಟ್ಗಳಿಗೆ ಹೋದಾಗ, ಆರ್ಡರ್ ತೆಗೆದುಕೊಂಡ ಮೇಲೆ ಟು ಗೋ ಆರ್ ಹಿಯರ್ ಅನ್ನುತ್ತಿದ್ದರು. ಹಾಗೆಂದರೆ ಏನು ಎಂದು ತಿಳಿಯುತ್ತಿರಲಿಲ್ಲ. ಮೊದಲಬಾರಿ ಹಾಗಂದರೆ ಏನು ತಿಳಿಯದೆ, ಹಾಗೆಯೇ ಹೊರಗಡೆ ಬಂದು ಬಿಡುತ್ತಿದ್ದೆವು. ಆಫೀಸ್‌ನಲ್ಲಿ ವಿಚಾರಿಸಿದಾಗ ತಿಳಿಯಿತು. ಟು ಗೋ ಎಂದರೆ ಪಾರ್ಸೆಲ್ ಎಂದೂ, ಹಿಯರ್ ಎಂದರೆ ಅಲ್ಲಿಯೇ ಕುಳಿತು ತಿನ್ನುವಿದು ಎಂದು. ಈಗೆಲ್ಲಾ ತುಂಬಾ ಭಾರತದ ರೆಸ್ಟೋರೆಂಟ್‌ಗಳಿವೆ, ಊಟಕ್ಕೆ ತೊಂದರೆ ಇಲ್ಲ.

ನಾವು ಅಮೇರಿಕಾಕ್ಕೆ ಬಂದು ಸ್ವಲ್ಪ ಜಾಗಗಳನ್ನು ಅರ್ಥಮಾಡಿಕೊಂಡ ಮೇಲೆ ತಿಳಿದಿದ್ದು ಅಲ್ಲಿನ ಉಡುಪಿ ರೆಸ್ಟೋರೆಂಟ್. ಉಡುಪಿ ರೆಸ್ಟೋರೆಂಟ್ ಕಂಡು ಉಡುಪಿ ಶ್ರೀ ಕೃಷ್ಣನನ್ನು ಕಂಡಷ್ಟೇ ಸಂತೋಷವಾಗಿತ್ತು. ಅಲ್ಲಿ ದಿನಾ ರಾತ್ರಿ ಊಟಕ್ಕೆ ಹೋಗುತ್ತಿದ್ದೆವು. ರೆಸ್ಟೋರೆಂಟ್ ಮುಚ್ಚುವ ಸಮಯ ರಾತ್ರಿ 10 ಗಂಟೆ, ನಾವು ಕೆಲಸಮುಗಿಸಿಕೊಂಡು ರಾತ್ರಿ ಹತ್ತು ಗಂಟೆಗೆ ಹೋಗುತ್ತಿದ್ದೆವು. ಆಗ ನಾವು ಬಿಟ್ಟರೆ ಬೇರೆ ಯಾರೂ ಇರುತ್ತಿರಲಿಲ್ಲ, ಮಾಲೀಕರಾದ ಕುಂದಾಪುರದ ಶೇರೆಗಾರರು ನಾವು ಕುಳಿತ ತಕ್ಷಣ ಹತ್ತಾರು ಬಗೆಯ ತಿಂಡಿಗಳನ್ನು ತಂದು ನಮ್ಮ ಟೆಬಲ್ ಮೇಲೆ ಇರಿಸುತ್ತಿದ್ದರು. ನಾವು ಖುಷಿಯಿಂದ ತಿನ್ನುತ್ತಿದ್ದೆವು. ಅಷ್ಟೆಲ್ಲಾ ತಿಂಡಿತಿಂದರೂ ನಮ್ಮ ಹತ್ತಿರ ಐದು ಡಾಲರನ್ನು ಮಾತ್ರ ತೆಗೆದು ಕೊಳ್ಳುತ್ತಿದ್ದರು. ನಮಗೆ ಹೊಟ್ಟೆತುಂಬಾ ಊಟ, ಹಣವೂ ಕಡಿಮೆ. ಒಂದು ದಿನ ತಡೆಯಲಾರದೆ "ನಿಮಗೆ ನಷ್ಟವಾಗುವುದಿಲ್ಲವೇ" ಎಂದು ಕೇಳಿದ್ದೆ. ಆಗ ಅವರು ಕೊಟ್ಟ ಉತ್ತರ ನೋಡಿ ಎಲ್ಲರು ದಂಗಾಗಿ ಹೋದೆವು. ಉತ್ತರ ಹೀಗಿತ್ತು" ಹೇಗೋ ದಿನಾ ರಾತ್ರಿ ಮಿಕ್ಕಿರುವುದನ್ನು ನಾವು ಎಸೆಯಬೇಕು ಅದರ ಬದಲು ನಿಮಗೆ ಕೊಡ್ತುತ್ತಿದ್ದೇವೆ". ನಾವು ಒಬ್ಬರ ಮುಖ ಮುಖ ನೋಡಿಕೊಂಡಾಗ "ಅದು ಹಾಗಲ್ಲ ಎಲ್ಲಾ ಊಟ ತಿನ್ನಲು ಯೋಗ್ಯವೇ, ಆದರೆ ಈ ದೇಶದಲ್ಲಿ ಈ ದಿನ ಮಾಡಿದ್ದು ನಾಳೆ ಉಪಯೋಗಿಸಲು ಅವಕಾಶವಿಲ್ಲ" ಎಂದರು. ನಮಗೇನು ತಿನ್ನಲು ಒಳ್ಳೆಯ ಊಟ, ಹಣವೂ ಉಳಿತಾಯ ಹೀಗೆಯೇ ತಿಂಗಳುಗಟ್ಟಲೆ ಉಡುಪಿ ನಮಗೆ ಅನ್ನದಾತೆಯಾಗಿತ್ತು. ಎಲ್ಲಾ ವಿಷಯಗಳಂತೆ ಪದೇ ಪದೇ ಅದೇ ರುಚಿ ಬೋರ್ ಆದಮೇಲೆ ಬೇರೆಕಡೆ ಮುಖಮಾಡಿದ್ದು. ಈಗಲೂ ನಾವು ಸ್ನೇಹಿತರು ಸೇರಿದರೆ ಉಡುಪಿ ರೆಸ್ಟೋರೆಂಟ್ ನೆನೆಸಿಕೊಂಡು ನಗಾಡುತ್ತೇವೆ.

ದಿನಗಳೆದಂತೆ ಜುಲೈ ನಾಲಕ್ಕನೆ ತಾರೀಕು ಬಂತು. ಜುಲೈ ನಾಲಕ್ಕು ಅಮೆರಿಕಾದ ಸ್ವಾತಂತ್ರ್ಯ ದಿನಾಚರಣೆ.  ಆ ದಿನ ನ್ಯೂಯಾರ್ಕ್‌ನಲ್ಲಿ ದೊಟ್ಟ ಮಟ್ಟದಲ್ಲಿ ಪಟಾಕಿ ಸಿಡಿಸುತ್ತಾರೆ, ನೋಡಲು ಅದ್ಭುತವಾಗಿರುತ್ತದೆ. ಹೇಗೋ ರಜೆ ಇರುವುದರಿಂದ ನಾವು ನ್ಯೂಯಾರ್ಕ್ ಕಡೆ ಹೊರಟವು. ಮೊದಲಬಾರಿಗೆ ಅಮೇರಿಕಾದಲ್ಲಿ ರೈಲುನಲ್ಲಿ

ಪ್ರಯಾಣ ಮಾಡಿದೆವು. ನಾವು ಇದ್ದುದ್ದು ನ್ಯೂಜೆರ್ಸಿಯ ಸೊಮರ್ಸೆಟ್ ನಲ್ಲಿ, ಅಲ್ಲಿಂದ ನ್ಯೂಯಾರ್ಕ್ಗೆ ಒಂದು ಗಂಟೆಯ ಪ್ರಯಾಣ. ಮೊದಲಬಾರಿಗೆ ರೈಲಿನಲ್ಲಿ ಪ್ರಯಾಣಿಸುವ ಖುಷಿಯಲ್ಲಿ ನಾವೆಲ್ಲರೂ ಬೇಗೆ ಎದ್ದು ಹೊರಟಿದ್ದೆವು. ನಾವು ನ್ಯೂಯೋರ್ಕ್‌ನಲ್ಲಿ ಇಳಿದಾಗ ಗಂಟೆ ಹತ್ತು. ರೈಲಿನಿಂದ ಇಳಿದು ನ್ಯೂಯಾರ್ಕ್‌ನ ರಸ್ತೆಗಳಲ್ಲಿ ನಡೆದಾಡಿದೆವು. ಎಲ್ಲರ ಮುಖದಲ್ಲಿ ಖುಷಿ, ಕನ್ನಡ ಅರ್ಧ ಬರ್ದ ಮಾತನಾಡುತಿದ್ದ ಕೇರಳದ ಸ್ನೇಹಿತ ಅಭಿಷೇಕ "ಏನಪ್ಪಾ ಬೆಂಗಳೂರಿನಿಂದ ಏಕ್‌ದಂ ನ್ಯೂಯೋರ್ಕ್ಗೆ ವಾವ್" ಎಂದು ಮುಸಿನಗುತ್ತಾ ಎಲ್ಲರನ್ನು ಹೆಮ್ಮೆಯಿಂದ ನೋಡಿದ್ದ.

ನ್ಯೂಯಾರ್ಕ್ ನಲ್ಲಿ ಅಡ್ಡಾಡಿ ಕೊನೆಗೆ ಪಟಾಕಿ ಸಿಡಿಸುವ ಸ್ಥಳಕ್ಕೆ ಬಂದೆವು. ಅಲ್ಲಿ ತುಂಬಾ ಜನ ಸೇರಿದ್ದರು. ಮಕ್ಕಳಿಂದ ಹಿಡಿದು ವೃದ್ಧರೂ ಅಲ್ಲಿ ಸೇರಿದ್ದರು. ಇಲ್ಲಿ ಒಂದು ವಿಶೇಷಕ್ಕೆ, ವಿಸ್ಮಯಕ್ಕೆ ಎದುರಾದೆವು. ಇಲ್ಲಿ ಹುಡುಗ ಹುಡುಗಿಯರು ಎಲ್ಲರ ಎದುರಿನಲ್ಲೆ ತುಟಿಗೆ ತುಟಿಯಿಟ್ಟು, ಮುತ್ತು ಸುರಿಸುತ್ತಿದ್ದರು. ಇಂತಹ ಯಾವುದೇ ದೃಶ್ಯಗಳನ್ನು ನಾವು ಭಾರತದಲ್ಲಿ ನೋಡಿರಲಿಲ್ಲ, ಎಲ್ಲರೂ ಅವಾಕ್ಕಾದೆವು. ಸುಂದರ ಬಿಳಿ ಮೊಗದ, ಕೆಂಪು ತುಟಿಯ  ಹುಡುಗ ಹುಡುಗಿಯರು, ಕಪ್ಪಗಿನ ಆಫ್ರಿಕನ್ ಅಮೆರಿಕನ್ ಹುಡುಗ ಹುಡುಗಿಯರು, ತಮ್ಮ ತಮ್ಮಲ್ಲೇ ಏನೋ ಮಾತಾಡಿಕೊಳ್ಳುತ್ತಾ, ನಗುತ್ತಾ ತುಟಿಗೆ ತುಟಿ ಸೇರಿಸುವುದು ಸಾಮಾನ್ಯ ವಾಗಿತ್ತು. ಯಾರೂ ಅದನ್ನು ವಿಶೇಷವಾಗಿ ಗಮನಿಸಿಕೊಳ್ಳದಿದ್ದರೂ ಅಮೇರಿಕಾಗೆ ಆಗತಾನೆ ತೆರೆದುಕೊಳ್ಳುತ್ತಿದ್ದ ನಮಗೆ ವಿಶೇಷವಾಗಿತ್ತು. ಇದಕ್ಕಿಂತ ದೊಡ್ಡ ಶಾಕ್ ಆಗಿದ್ದು, ಮುತ್ತು ಸುರಿಸುತ್ತಿದ್ದ ಭಾರತೀಯ ಜೋಡಿಯನ್ನು ಕಂಡಾಗ. ಬಹುಶ ಇಲ್ಲೇ ಹುಟ್ಟಿ ಬೆಳೆದಿರಬೇಕು ಎಂದುಕೊಂಡೆವು.

ನಮಗೆ ತುಂಬಾ ತೊಂದರೆ ಕೊಟ್ಟಿದ್ದು ಇಲ್ಲಿನ ಇಂಗ್ಲಿಷ್ ಉಚ್ಚಾರಣೆ. ಕೆಲವು ಸಲ ಅರ್ಥವೇ ಆಗುತ್ತಿರಲಿಲ್ಲ. ನಾವು ಮಾತನಾಡುವುದು ಇಲ್ಲಿಯವರಿಗೆ ಅರ್ಥವಾಗುತ್ತಿರಲಿಲ್ಲ. ಫೋನಿನಲ್ಲಿ ಮಾತನಾಡಿದರಂತೋ ಇನ್ನೂ ಅದ್ವಾನ, ಪರಸ್ಪರ ನಿಧಾನವಾಗಿ ಮಾತನಾಡಿ ಎನ್ನಬೇಕಾಗಬೇಕಿತ್ತು. ಎಷ್ಟೋಸಲ ಈ–ಮೇಲ್ ಮಾಡಿ ಎನ್ನುತ್ತಿದ್ದೆವು, ನಾವು ಈ–ಮೇಲ್‌ನಲ್ಲಿಯೇ ಸಂಭಾಷಣೆ ನಡೆಸುತಿದ್ದೆವು.

ಉದರ ನಿಮಿತ್ತಮ್ ನಾವು ಎಲ್ಲಾ ಕಲಿಯಬೇಕಾಗಿತ್ತು, ಕಲಿತುಕೊಂಡೆವು. ಇದುವರೆಗೂ ನಮಗೆ ಯಾವುದೇ ಕಹಿ ಅನುಭವವಾಗಿಲ್ಲ. ಇಲ್ಲಿಯಜನ ನಮ್ಮನ್ನು ಕಡೆಗಣಿಸಲ್ಲ. ಸಹಾಯ ಮಾಡಿದ್ದಾರೆ.

ತುಂಬಾ ಜನ ಭಾರತೀಯರು ಉನ್ನತ ಹುದ್ದೆಗೇರಿದ್ದಾರೆ. ಒಳ್ಳೆಯ, ಸಿರಿಜೀವನ ನಡೆಸುತ್ತಿದ್ದಾರೆ. ಹೊಸ ಡೆವಲಪ್ಮೆಂಟ್ ಬಂದರೆ ಅದರಲ್ಲಿ ಶೇಕಡ  ನಲವತ್ತರಷ್ಟು ಭಾರತೀಯರೇ ಇರುತ್ತಾರೆ. ಭಾರತೀಯರು ಹಣ ಪೋಲು ಮಾಡುವುದಿಲ್ಲವಾದ್ದರಿಂದ ಒಳ್ಳೆಯ ಮನೆಯಲ್ಲಿ ವಾಸಿಸುತ್ತಾರೆ, ಒಳ್ಳೆಯ ಕಾರಿನಲ್ಲಿ ತಿರುಗುತ್ತಾರೆ. ಇದಕ್ಕೆ ಕಾರಣ ನಾವು ನಮ್ಮ ಜೀವನವನ್ನು ಬೇರೆಯವರಿಗೆ ಹೋಲಿಸಿಕೊಳ್ಳುವುದು ಇರಬಹದು ಅಥವಾ ಮಹತ್ವಾಕಾಂಕ್ಷೆಯೂ ಇರಬಹುದು. ಭಾರತೀಯರು ಹಣವನ್ನು ಭಾರತಕ್ಕೆ ಕಳಿಸಿಕೊಡುವುದರಿಂದ, ಭಾರತದ ಆರ್ಥಿಕತೆಗೆ ಸಹಾಯವೂ ಆಗುತ್ತಿದೆ.

ಏನೇ ಇದ್ದರೂ ಬೇರುಗಳು ಭಾರತದಲ್ಲಿರುವುದರಿಂದ, ಭಾರತದ ಸೆಳೆತ ಸದಾ ಇರುತ್ತದೆ. ಭಾರತೀಯ ಚಲನಚಿತ್ರಗಳನ್ನು ನೋಡುವುದು, ಭಾರತದ ನ್ಯೂಸ್ ನೋಡುವುದು, ಓದುವುದು, ನಮ್ಮ ಹಬ್ಬಗಳನ್ನು ಆಚರಿಸುವುದು ಹೀಗೆ ಭಾರತಕ್ಕೆ ಹತ್ತಿರವಾಗುವ ಸನ್ನಾಹ ಜರುಗುತ್ತಲೇ ಇರುತ್ತದೆ, ಎಷ್ಟೇ ಆಗಲಿ ಮಾತೃಭೂಮಿ, ತಾಯಿಯ ಮಮತೆಯಂತೆ ಮಧುರವಾಗಿರುತ್ತದೆ ಅಲ್ಲವೇ.

■

# ಯೂಟ್ಯೂಬ್ ಅವಾಂತರ.....

**✍ ಜ್ಯೋತಿ ರಾಜೇಶ್**

ನಿನ್ನೆ ರಾತ್ರಿ ಮಾಡಿದ ಚಪಾತಿ ಸ್ವಲ್ಪ ಉಳಿದುಬಿಟ್ಟಿತ್ತು. ಇನ್ನು ಅದನ್ನು ವೇಸ್ಟ್ ಮಾಡೋದು ಯಾಕೇಂತ ಆಪದ್ಬಾಂಧವ ಯೂ ಟ್ಯೂಬ್ ನಲ್ಲಿ ಏನಾದ್ರೂ ಹೇಳಿದ್ದಾರಾ ಅಂತ ನೋಡಿದೆ. ಸಿಕ್ಕೇಬಿಡ್ತು, 'ಉಳಿದ ಚಪಾತಿಯಿಂದ ಮಾಡಿ ಈ ಸೂಪರ್ ಸ್ವೀಟ್ ಮತ್ತು ಖಾರದ ತಿಂಡಿ....ನೀವೆಂದೂ ಮರೆಯಲ್ಲ' ಅಂತ ಇತ್ತು. ಫುಲ್ ಖುಷಿ, ಸೆರಗು ಅಲ್ಲಲ್ಲ ವೇಲ್ ಸೊಂಟಕ್ಕೆ ಸಿಕ್ಕಿಸಿ ಮಾಡಲು ಹೊರಟೇ ಬಿಟ್ಟೆ.

ಮೊದಲು ಸ್ವೀಟ್ ಮಾಡೋಣ ಅಂತ ಯೋಚಿಸಿ ಏನೇನು ಬೇಕೆಂದು ನೋಡಿದರೆ ಅದರಲ್ಲಿ......ಚಪಾತಿ ನಾಲ್ಕು, ಸಕ್ಕರೆ ಎರೆಡು ಕಪ್, ತುಪ್ಪ ಒಂದು ಕಪ್, ಪನೀರ್ ಐವತ್ತು ಗ್ರಾಮ್, ಹಾಲಿನ ಪುಡಿ ನೂರು ಗ್ರಾಮ್, ಡ್ರೈ ಫ್ರೂಟ್ಸ್, ಕರಿಯಲು ಬೇಕಾದಷ್ಟು ಎಣ್ಣೆ.......ಹೀಗೆ ಉದ್ದ ಲಿಸ್ಟ್ ಇತ್ತು. ಮನೆಯವರಿಗೆ ಹೇಳಿ ಅಂಗಡಿಯಿಂದ ಪನೀರ್, ಹಾಲಿನ ಪುಡಿ ಎಲ್ಲ ತರಿಸಿ ಜೋಡಿಸಿಕೊಂಡು ಹೊಸರುಚಿ ಮಾಡಲು ಹೊರಟೆ. ಮೊದಲು ಚಪಾತಿಯನ್ನು ತುಂಡು ಮಾಡಿಕೊಂಡು ತುಪ್ಪದಲ್ಲಿ ಹುರಿದು ಮಿಕ್ಸಿಯಲ್ಲಿ ಪುಡಿ ಮಾಡಿಕೊಂಡು ಅದಕ್ಕೆ ಪನ್ನೀರ್, ಹಾಲಿನಪುಡಿ, ಸಕ್ಕರೆಪುಡಿ, ತುಪ್ಪ ಎಲ್ಲ ಸೇರಿಸಿ ಚೆನ್ನಾಗಿ ಕಲೆಸಿ ಉಂಡೆ ಮಾಡಿಕೊಳ್ಳಬೇಕೆಂದಿತ್ತು. ಹಾಗೇ ಮಾಡಿದೆ. ನಂತರ ಎಣ್ಣೆಯಲ್ಲಿ ಕರಿದು ತೆಗೆದರೆ ರುಚಿಯಾದ ಸ್ವೀಟ್ ರೆಡಿ ಅಂದ್ರು.... ಹಾಗೆ ಖುಷಿಯಿಂದ, ಅಂತೂ ಇವತ್ತು ಉಳಿದ ಚಪಾತಿಯನ್ನು ವೇಸ್ಟ್ ಮಾಡದೇ ಚೆಂದದ ಸ್ವೀಟ್ ಮಾಡಿ ಮನೆಯವರಿಗೆ ಕೊಟ್ಟು ಶಭಾಷ್ ಎನಿಸಿಕೊಳ್ಳುವ ಕನಸು ಕಾಣುತ್ತಾ ಆ ಉಂಡೆಗಳನ್ನು ಒಂದೊಂದಾಗಿ ಎಣ್ಣೆಗೆ ಬಿಟ್ಟೆ.........ಅವಸ್ಥೆ ಮಾರಾಯ್ರೆ ನಾ ಬಿಡುವಾಗ ಉಂಡೆಗಳಾಗಿದ್ದದ್ದು ಎಣ್ಣೆಯೊಳಗೆ ಹೋದ ತಕ್ಷಣ ಏನಾಯ್ತೋ ಎಲ್ಲ ಹರಡಿಕೊಂಡು ಬಿಡೋದ? ಒಳ್ಳೆ ಪಾಯಸದ ಥರ ಕಾಣ್ತಿತ್ತು. ಏನು ಮಾಡೋದಂತ ತೋಚದೇ ಗಲಿಬಿಲಿಯಲ್ಲಿ ಮತ್ತೊಮ್ಮೆ ಯೂ ಟ್ಯೂಬ್ ಗೆ ಮೊರೆ ಹೋದೆ. ಅದಂತೂ ನಾ ಮಾಡಿದ್ದೇ ಸರಿ ಅಂತ ತೋರಿಸ್ತಿತ್ತು. ಅಷ್ಟೊತ್ತಿಗೆ ಏನೋ ಸುಟ್ಟ ವಾಸನೆ ಬರ್ತಿದೆ ಅಂತ ನೋಡಿದರೆ......ಬಾಣಲೆಯಲ್ಲಿದ್ದದ್ದೆಲ್ಲ ಸುಟ್ಟು ಕರಕಲಾಗಿತ್ತು. ಗ್ರಹಚಾರ ಸರಿಯಿರಲಿಲ್ಲ ನೋಡಿ ಸ್ಟೌ ಆರಿಸೋದು ಮರೆತಿದ್ದೆ. ಇನ್ನು ಹೊಸರುಚಿ ಆಯ್ತಾ? ಅಂತ ಕೇಳುವ ಯಜಮಾನರಿಗೆ ಏನು ಹೇಳೋದಂತ ತೋಚ್ತಿಲ್ಲ......ಮೊದಲಾದರೆ ಬರಿ ಚಪಾತಿ ವೇಸ್ಟ್ ಆಗ್ತಿತ್ತು. ಈಗ ಪನ್ನೀರ್, ತುಪ್ಪ, ಹಾಲಿನಪುಡಿ, ಡ್ರೈಫ್ರೂಟ್ಸ್, ಸಕ್ಕರೆ, ಎಣ್ಣೆ.....ಎಲ್ಲ ಗೋವಿಂದ. ಬೇಕಿತ್ತಾ ನನಗೆ ಚಪಾತಿಯನ್ನು ವೇಸ್ಟ್ ಆಗದಂತೆ ತಡೆಯೋದು......

ಈ ಚಾನಲ್ ಗಳನ್ನ ನೋಡಿ ಪ್ರಯೋಗ ಮಾಡೋದು ಬಿಟ್ಬಿಡಬೇಕು ಅಂದುಕೊಂಡೆ. ಆದರೆ ಅವರು ಹೇಳಿದ ಒಂದು ಮಾತಂತೂ ನಿಜ....."ಈ ಸೂಪರ್ ಸ್ವೀಟ್ ರೆಸಿಪಿ ಎಂದೂ ಮರೆಯಲ್ಲ" ಅಂತ ನಿಜ ನಾನಿದನ್ನು ಸಧ್ಯಕ್ಕಂತೂ ಮರೆಯಲ್ಲ.............

■

# ವಾಸ್ತು ವಿಸ್ತರಣೆ

✍ ಅಚ್ಯುತ ರಾವ್

ನನಗೆ ಮುಂಚಿನಿಂದಲೂ ಸಿವಿಲ್ ಇಂಜನಿಯರ್ಸ್ ಕಂಡರೆ ಹೊಟ್ಟೆ ಉರಿ, ಅದರಲ್ಲೂ ಅವನು / ಅವಳು ಒಬ್ಬ ಆರ್ಕಿಟೆಕ್ಟ್ ಕಂ ವಾಸ್ತು ಕನ್‌ಸೆಲ್ಟೆಂಟ್ ಆಗಿದ್ದರೆ ಇನ್ನೂ ಸಂಕಟ. ಅವರ ಮನೆ, ಕಾರು, ಕಾರುಬಾರು, ಧಿಮಾಕು, ಜೋಶ್ ಎಲ್ಲಾ ನೋಡಿ, ಇರೋ ಬರೋ ದುಡ್ಡೆಲ್ಲಾ ಒಂದೇ ಕಡೆ ಹರಿಯುತ್ತಿರುವುದೆ ಎಂದು ಅನುಮಾನ ಮತ್ತು ನನ್ನಲ್ಲೇ ಕೀಳರಿಮೆ.

ಯಾವ ನನ್ನಂತಹ ಬಡಪಾಯಿ ಹಾರ್ಡ್‌ಕೋರ್ ಮೆಕ್ಯಾನಿಕಲ್ ಇಂಜನಿಯರ್ ಗೆ ಬೇಜಾರಾಗಲ್ಲ ಹೇಳಿ?

ಬೆಳಗ್ಗಿನಿಂದ ಸಂಜೆಯವರೆಗೆ, ಆ ದೊಡ್ಡ ಮೆಷಿನರಿಗಳ ಗಳ ಮದ್ಯೆ, ಶಾಪ್ ಫ್ಲೋರ್‌ನಲ್ಲಿ ಓಡಾಡುತ್ತಾ, ಕೀಲೆಣ್ಣೆ ಮೈ ಕೈ ಗೆ ಮೆತ್ತಿಕೊಂಡು, ಡ್ರಾಯಿಂಗ್ ಬೋರ್ಡ್‌ಗಳ ಮದ್ಯೆ ನುಸುಳುತ್ತಾ ಆ ಕಟ ಶಬ್ದಗಳ ಮದ್ಯೆ, ಬೇರೆ ಯಾವುದಾದರೂ ಒಂದು ಎಕ್ಸ್ಟ್ರಾ ಇನ್‌ಕಂ ಆಪರ್ಚುನಿಟಿ ಇದೆಯಾ ಎನ್ನುವ ಕನಸು. ಆ ಕನಸುಗಳು ಮೆಷಿನರಿಗಳ ಶಬ್ದಗಳ ಮದ್ಯೆ ಲೀನ ವಾಗಿ ಹೋಗುತ್ತಿತ್ತು. ಮತ್ತದೇ ದಿನ, ಅದೇ ಕನಸು, ಮತ್ತೆ ಸಾಯಂಕಾಲ ಆ ಕನಸನ್ನು ಅಳಿಸು. ಇದೇ ದಿನಚರಿ.

ಆ ದಿನ ಬಂದೇ ಬಂತು ! ಯುರೇಕಾ ಮೊಮೆಂಟ್!! ನನ್ನ ಜೀವನದಲ್ಲೂ ಕೂಡ !

ನಾನೂ ಯಾಕೆ ವಾಸ್ತು ಜ್ಞಾನವನ್ನು ಬೇರೆ ಇಂಜನಿಯರಿಂಗ್ ಶಾಖೆಗಳಿಗೆ ವಿಸ್ತರಿಸಬಾರದು ? ಅದೇಕೆ ಬರೀ ಸಿವಿಲ್ ಇಂಜನಿಯರ್‌ಗಳ ಸ್ವತ್ತಾಗಿರಬೇಕು ?

ಅರೇ ಫೆಂಟಾಸ್ಟಿಕ್ ಐಡಿಯ ನಾನೇ ಯಾಕೆ ಪ್ರಪಂಚದ ಮೊದಲ ಮೆಕ್ಯಾನಿಕಲ್ ಇಂಜನಿಯರಿಂಗ್ ವಾಸ್ತು ವಾಸ್ತು ಕನ್‌ಸೆಲ್ಟೆಂಟ್ ಆಗಬಾರದು? ಲೆಟ್ಸ್ ಗೊ ಟು ದಿ ಡ್ರಾಯಿಂಗ್ ಬೋರ್ಡ್. ಬೇರೇ ಯಾರಿಗಾದರೂ ಈ ಐಡಿಯಾ ಬರುವ ಮೊದಲು, ನನ್ನ ಪೆನ್ನಿಗೆ ಈ ಐಡಿಯಾ ತುಂಬಿಸಿ ಭಟ್ಟಿ ಇಳಿಸಿ ಪ್ರಾಜೆಕ್ಟ್ ತಯಾರು ಮಾಡಿಬಿಡಬೇಕು.

ಒಂದಂತೂ ಸತ್ಯ, ವಾಸ್ತು ನಶೆ ನಮ್ಮಲ್ಲಿ ಶಾಶ್ವತ. ಇನ್ನೂ ಬೃಹದಾಕಾರವಾಗಿ ಬೆಳೆಯುತ್ತಲೇ ಹೋಗುತ್ತದೆ. ಅದರ ಆಳ ಈಗಿನ ಬೋರ್ ವೆಲ್ ಆಳಕ್ಕಿಂತ ಕೆಳಗಿಳಿಯುತ್ತಿದೆ.

ಒಂದು ಮನೆಯಿಂದ ಶುರುವಾಗಿ ಈಗ ಅಪಾರ್ಟ್ಮೆಂಟ್ ಕಾಂಪ್ಲೆಕ್ಸ್, ಆಫೀಸು, ಫ್ಯಾಕ್ಟರಿ, ಹೊಸಾ ಲೇಔಟ್ ಎಲ್ಲಾ ಕಡೆ ಪಸರಿಸುತ್ತಿದೆ. ಎಲ್ಲವೂ ವಾಸ್ತು ಕಾಂಪ್ಲೆಂಟ್ ಆಗಿರಬೇಕು. ಅದಕ್ಕೆ ಪೂರಕವಾಗಿ ಸ್ಪೆಷಲಿಸ್ಟ್‌ಗಳು ಬೇಡವೇ ? ವಾಸ್ತು ಕನ್‌ಸೆಲ್ಟೆಂಟ್ ವಾಸ್ತು ಇಂಜನಿಯರ್, ವಾಸ್ತು ಮೇಸ್ತ್ರಿ ಇತ್ಯಾದಿ.

ಹಾಗೆಯೇ ಮುಂದೊಂದು ದಿನ ಎಂಎಸ್ಸಿ ವಾಸ್ತು, ಎಂಟೆಕ್ ವಾಸ್ತು, ಪಿಎಚ್‌ಡಿ ವಾಸ್ತು ಎಂಬ ಡಿಗ್ರಿಗಳು ಬೇಡವೇ?

ಸಧ್ಯಕ್ಕೆ ದಿಢೀರ್ ವಾಸ್ತು ಸ್ಪೆಷಲಿಸ್ಟ್ ಆಗಲು ಏನಾದರೂ ಸ್ಪೆಷಲ್ ಕ್ವಾಲಿಫಿಕೇಷನ್ ಬೇಕೆ ?

ಹಾಗೇನಿಲ್ಲ, ಸ್ವಲ್ಪ ಜ್ಯೋತಿಷ್ಯ ಜ್ಞಾನ, ಇಂಜನಿಯರಿಂಗ್ ಡ್ರಾಯಿಂಗ್ ಜೊತೆಗೆ, ಜಾತಕ ಓದುವ ಅರಿವು, ನ್ಯೂಮರಾಲಜಿ, ಪಾಮಿಸ್ಟ್ರಿ ಗೊತ್ತಿದ್ದರೆ ಒಳ್ಳೆಯದು.

ನನ್ನ ಹಾಗೆ ಬಡಪಾಯಿ ಹಾರ್ಡ್‌ಕೋರ್ ಮೆಕ್ಯಾನಿಕಲ್ ಇಂಜನಿಯರಿಂಗ್ ಗಳಿಗೆ ಈ ಪುಕ್ಕಟೆ ಸಲಹೆ ಉಪಯೋಗ ವಾಗಬಹುದು.

ಮೊದಲು ಒಂದು ಒಳ್ಳೆಯ ಆಫೀಸ್ ಸ್ಪೇಸ್ ಬಾಡಿಗೆ ಪಡೆಯಿರಿ. ಅಪ್ಪಿ ತಪ್ಪಿಯೂ, ಯಾವುದೇ ರೀತಿ ಮೆಕ್ಯಾನಿಕಲ್ ಟೂಲ್ಸ್, ಸ್ಪಾನರ್, ಸ್ಕ್ರೂ ಡ್ರೈವರ್, ಡ್ರಿಲ್ ಗನ್ ಒಳಗೆ ಇಡಬೇಡಿ.

ಒಬ್ಬ ಸುಂದರ ಹುಡುಗಿಯನ್ನು ರೆಸೆಪ್ಷಿನಸ್ಟ್ ಆಗಿ ಅಪಾಯಿಂಟ್ ಮಾಡುವುದು ಮರೆಯುವ ಹಾಗಿಲ್ಲ.

ಆಫೀಸಿನ ಪ್ರಮುಖ ಗೋಡೆಯ ಮೇಲೆ ದೊಡ್ಡ ರೋಲ್ಸ್ ರಾಯ್ಸ್, ಅಥವಾ ಬಿಎಂಡಬ್ಲ್ಯೂ ಅಥವಾ ಬೆಂಝ್ ಕಾರ್ ಟಾಪ್ ವ್ಯೂ ನ ಪೋಸ್ಟರ್ ಹಾಕಿ. ಆ ಪೋಸ್ಟರ್ ಒಳಗೆ ವಾಸ್ತು ಪುರುಷ ನ್ನ ಮಲಗಿಸಿ.

ಒಂದು ಬಿಲ್ಡಿಂಗ್ ಪ್ಲಾಟ್ ಒಳಗೆ ವಾಸ್ತು ಪುರುಷನ್ನ ಮುಗಿಸಿರುವ ಚಿತ್ರ ನಾವು ನೋಡಿಯೇ ಇದ್ದೇವೆ. ಅದರ ಹಾಗೆಯೇ. ತಲೆ ಭಾಗ ಸ್ಟೀರಿಂಗ್ ಹತ್ತಿರ ಬರಲಿ, ಮಂಡಿ ಮಡಚಿರುವ ಕಾಲುಗಳು ಡಯಾಗನಲಿ ವಿರುದ್ಧ ದಿಕ್ಕಿನಲ್ಲಿರಲಿ.

ನಿಮ್ಮ ಗ್ರಾಹಕ, ತನ್ನ ಹೆಂಡತಿಯೊಂದಿಗೆ ನಿಮ್ಮ ಆಫೀಸಿಗೆ ಬರುತ್ತಾನೆ. ಆಗತಾನೇ ವಾಸ್ತು ಪ್ರಕಾರ ಮನೆ ಕಟ್ಟಿ ಒಂದು ಹೊಸಾ ಕಾರು ತೆಗೆದುಕೊಳ್ಳುವ ಸಂಭ್ರಮ ಸಡಗರದಲ್ಲಿರುತ್ತಾರೆ. ನಿಮ್ಮ ಸೂಚನೆ ಪ್ರಕಾರ ತಮ್ಮ ಜಾತಕ ತಂದೇ ಇರುತ್ತಾರೆ.

ಮೊದಲು ಅವರ ಕಾರ್ ಬಜೆಟ್ ಬಗ್ಗೆ ಅಂದಾಜು ಮಾಡಿ. ಇದು ಬಹಳ ಸುಲಭ. ಅವರ ಮನೆಗೆ ತಗುಲಿದ ವೆಚ್ಚದಿಂದ ಇದನ್ನು ಸುಲಭವಾಗಿ ಊಹಿಸಹುದು.

ಅದರ ಮೇಲೆ ಕಾರ್ ಮೆಕ್ ಮತ್ತು ಮಾಡೆಲ್ ನ ಸಲಹೆ ನೀಡಿ.

ಅವರ ಜಾತಕ ಪರಿಶೀಲಿಸಿ, ಗುಣಾಕಾರ ಮಾಡಿದಂತೆ ನಟಿಸಿ ಎಷ್ಟು ಸೀಟು ಅಂತ ಸಜೆಸ್ಟ್ ಮಾಡಿ. ಅಪ್ಪಿ ತಪ್ಪಿಯೂ 2 ಅಥವಾ 3 ಸೀಟು ಸಲಹೆ ಕೊಡಬೇಡಿ. ಅವರು ಆಗಲೇ 5 ಅಥವಾ 7 ಸೀಟ್ ಗೆ ತಯಾರಾಗಿ ಬಂದಿರುತ್ತಾರೆ.

ಒಮ್ಮೆ ಅವರ ಕೈ ನೋಡಿ ಮತ್ತೆ ಜಾತಕ ನೋಡಿ, ಯಾವ ಇಂಧನ ಅವರ ಗ್ರಹಬಲ–ತಾರಬಲಕ್ಕೆ ಸರಿ ಹೊಂದುತ್ತದೆಂದು ಸಲಹೆ ನೀಡಿ. ಪೆಟ್ರೋಲ್, ಡೀಸೆಲ್, ಸಿಎನ್‌ಜಿ, ಎಲೆಕ್ಟ್ರಿಕ್, ಹೈಬ್ರಿಡ್ ಹೀಗೇ ಮುಂದುವರೆಸಿ.

ಅವರ ಜಾತಕವನ್ನು ಇನ್ನೂ ಕೂಲಂಕುಷವಾಗೀ ಬೂತಗನ್ನಡಿಯಲ್ಲಿ ನೋಡಿ ಯಾವುದಾದರೂ ದೋಷ ಹುಡುಕಿ. ಅದಕ್ಕೆ ತಕ್ಕ ಪರಿಹಾರವಾಗೀ ತಾಯತವನ್ನು ಪ್ರಿಸ್ಕ್ರೈಬ್ ಮಾಡಿ. ಆ ತಾಯತ ದ ಡಿಸೈನ್ ಸ್ವಲ್ಪ ವಿಭಿನ್ನವಾಗಿರುತ್ತದೆ. ಅ ತಾಯತವನ್ನು ಕಾರಿನ ಚಕ್ರದ ಜೊತೆ ಜೋಡಿಸಬಹುದು. ಕಾರಿನ ಚಕ್ರಕ್ಕೆ ವೀಲ್ ಅಲೈನ್‌ಮೆಂಟ್ ಮತ್ತು ಬ್ಯಾಲೆನ್ಸಿಂಗ್ ಮಾಡಿಸುವಾಗ ಈ ತಾಯತವನ್ನು ವೀಲ್ ಸೈಡ್‌ಗೆ ಸಿಕ್ಕಿಸಬಹುದು.

ಅದಕ್ಕೆ ಮುಂಚೆಯೇ ನಿಮ್ಮ ಹತ್ತಿರದ ವೀಲ್ ಅಲೈನ್‌ಮೆಂಟ್ ಸರ್ವೀಸ್ ಅಂಗಡಿಯ ಜೊತೆ ಟೈಅಪ್ ಆಗಿರಲು ಮರೆಯದಿರಿ.

ಅವರ ಜಾತಕದ ಪ್ರಕಾರ ಸ್ಟೀರಿಂಗ್ ವೀಲ್ ಹಿಂದೆ ಇರಬೇಕು ಎಂದು ಹೇಳಿ. ಅವರು ಮೂರ್ಛೆ ಹೋಗುವ ಮೊದಲು, ಪರಿಹಾರವಾಗಿ ಡ್ಯಾಶ್ ಬೋರ್ಡ್ ನಲ್ಲಿ ಒಂದು ದೇವರ ಪ್ರತಿಷ್ಠಾಪನೆಗೆ ಸಲಹೆ ಕೊಡಿ.

ಗಣೇಶ ಅಥವಾ ದಾರದಲ್ಲಿ ಜೋಲಾಡುವ ಹನುಮ ಬೇಡ.

330 ಕೋಟಿ ದೇವರಲ್ಲಿ ಬೇರೇ ಯಾವುದಾದರೊಂದು ಹೊಸ ದೇವರು ಸಿಕ್ಕೆ ಸಿಗುತ್ತಾರೆ.

ಇನ್ನು ರಿಜಿಸ್ಟ್ರೇಷನ್ ಸಂಖ್ಯೆ ವಿಚಾರ. ಇದು ಮತ್ತೊಂದು ದೊಡ್ಡ ಸಬ್ಜೆಕ್ಟ್ ಇದಕ್ಕೆ ಸ್ವಲ ನ್ಯೂಮರಾಲಜಿ ಗೊತ್ತಿದ್ದರೆ ಬಹಳ ಉಪಯೋಗ. ಬಹಳ ದುಡ್ಡು. ಈ ಫ್ಯಾನ್ಸಿ ನಂಬರ್ ಗೆ ಡಿಮ್ಯಾಂಡ್ ಇದ್ದ ಹಾಗೆ.

ಮೆಕ್ಯಾನಿಕಲ್ ಇಂಜನಿಯರಿಂಗ್ ವಾಸ್ತುವಿನಲ್ಲಿ ದಿಕ್ಕುಗಳಿಗೆ ಪ್ರಾಮುಖ್ಯತೆ ಇಲ್ಲಾ. ಯಾವಾಗಲೂ ಚಲಿಸುವ ವಸ್ತುವಿನ ದಿಕ್ಕುದೆಶೆ ತಂಟೆಗೆ ಹೋಗಬೇಡಿ.

ಇನ್ನು ಕಾರಿನ ಬಣ್ಣ, ಸೀಟು ಕವರ್, ಆಕ್ಸೆಸರೀಸ್ ಗಳ ಬಗ್ಗೆ ಧಾರಾಳವಾಗಿ ಸಲಹೆ ಕೊಡಿ.

ನಿಮ್ಮ ಗ್ರಾಹಕನ ಕಾರಿನ ಬಜೆಟ್ ಮೇಲೆ ನಿಮ್ಮ ಕನ್ಸಲ್ಟೆನ್ಸಿ ಫೀ ಚಾರ್ಜ್ ಮಾಡಿ.

ಹೀಗೇ ಯೋಚಿಸುತ್ತಾ, ಹಗಲುಗನಸು ಕಾಣುತ್ತಾ ಡ್ರೈವ್ ಮಾಡುತ್ತಿದ್ದಾಗ ಮುಂದಿನ ಆಟೋ ತಕ್ಷಣ ಬ್ರೇಕ್ ಹಾಕಿದಾಗಲೆ, ನನ್ನ ಕಾರಿಗೆ ಹಾಗೂ ಕನಸಿಗೆ ಬ್ರೇಕ್ ಬಿತ್ತು.

ಕಾರಿನ ಇಎಂ ರೇಡಿಯೋದಲ್ಲಿ, ವಾಸ್ತು ಪ್ರಕಾರ ಚಿತ್ರದ, ಜಯಂತ ಕಾಯ್ಕಿಣಿಯವರ, ವಿಜಯ್ ಪ್ರಕಾಶ್ ಹಾಡಿರುವ ಹಾಡು ಗುನುಗುತ್ತಿತ್ತು

"ಬಿದ್ದಲ್ಲೆ ಬೇರೂರಿ, ಗಗನಕ್ಕೆ ಕೈಯತ್ತಿ, ಹೂ ಬಿಡುವ ಗಿಡಮರಕೆ ವಾಸ್ತುವೆಲ್ಲಿ. ಗುಡಿಸಿಲಿನ ಹೊಸಿಲಲ್ಲಿ, ಬಡತಾಯ ಮಡಿಲಿನಲಿ, ನಸು ನಗುವ ಮಗು ಮನಕೆ ವಾಸ್ತುವೆಲ್ಲಿ"

ಮುಂದಿನ ಆಕರ್ಷಣೆ: ವಾಸ್ತು ಫಾರ್ ಎಲೆಕ್ಟ್ರಾನಿಕ್ಸ್ ಇಂಜನಿಯರಿಂಗ್, ವಾಸ್ತು ಫಾರ್ ಕಂಪ್ಯೂಟರ್ ಇತ್ಯಾದಿ.




■

# ವೃದ್ಧಾಶ್ರಮ

ರಾಮಮೂರ್ತಿ S.K .

ನಮ್ಮ ಸ್ನೇಹಿತನೊಬ್ಬ ಇವತ್ತು ವೃದ್ಧಾಶ್ರಮದ ಬಗ್ಗೆ ತಲೆ ಕೆಡಿಸಿಕೊಂಡಂತಿತ್ತು. Parkನಲ್ಲಿ ಇದರ ಬಗ್ಗೆ ವ್ಯಾಖ್ಯಾನಿಸ್ತಾ ಹಲವಾರು ಕಥೆ ವ್ಯಥೆ ಬಗ್ಗೆ ಹೇಳ್ತಿದ್ದ, ಹಾಗಾಗಿ ನನ್ನ ಮನಸ್ನಲ್ಲಿ ಹಲವಾರು ವಿಷಯಗಳು ಬಂದ್ವು, ನಾನೂ ಏನೇನೋ ಹೇಳ್ಕೊಂಡೆ.

ವೃದ್ಧಾಶ್ರಮ – ಇದರ ಬಗ್ಗೆ  ಸಾಕಷ್ಟು article ನಾನೂ ಓದಿದೀನಿ, ನೀವೂ ಓದಿರಬಹುದು.  ಒಂದು ಸಾಮಾನ್ಯ ಹೇಳಿಕೆ ಅನ್ನಿ ಅನಿಸಿಕೆ ಅನ್ನಿ ಎಲ್ರೂ ಹೇಳೋದು "ಮನೆಯ ವಾತಾವರಣ ವೃದ್ಧಾಶ್ರಮದಲ್ಲಿ ಸಿಗದು, ಈ ವೃದ್ಧಾಶ್ರಮಗಳನ್ನು ಯಾವ ದೃಷ್ಟಿಯಿಂದ ನೋಡಿದರೂ ಅವು ಸಮಾಜದ ನ್ಯೂನತೆಯ ಸೂಚಕಗಳೇ ವಿನಾ ಗರಿಮೆಯಲ್ಲ", "ವೃದ್ಧಾಶ್ರಮ ಎಂದೂ ಮನೆಯಾಗಲು ಸಾಧ್ಯವಿಲ್ಲ ಅಥವಾ ಕುಟುಂಬದ ಭಾವನೆಗಳನ್ನು ಸೃಷ್ಟಿಸಲು ಸಾಧ್ಯವಿಲ್ಲ"–ಈ ಶೀರ್ಷಿಕೆಯ ಮೇಲೇ ಸಾಕಷ್ಟು ಲೇಖನಗಳನ್ನೂ ಓದಿರ್ತೀವಿ.

ವೃದ್ಧಾಶ್ರಮ ಬೇಕೇ ಬೇಡವೇ ಅನ್ನೋದು ಒಂದು ಜಿಜ್ಞಾಸೆ.  ಸಮಸ್ಯೆಗಳೋ ಹಲವಾರು.  ಸರಿ ಅಂದ್ರೆ ತಪ್ಪಾಗುತ್ತೆ, ತಪ್ಪು ಅಂದ್ರಾ ಸರಿ ಅನ್ಸುತ್ತೆ.  ಹಾಗಾಗಿ ವೃದ್ಧಾಶ್ರಮ ಬೇಕೇ ಬೇಡ್ವೇ ಅನ್ನೋ ಪ್ರಶ್ನೆ ಬರುತ್ತೆ. ಸಮಸ್ಯೆಯ ವಿವಿಧ ಆಯಾಮಗಳನ್ನು ನೋಡಿದಾಗ ಬೇಕು ಅನ್ಸುತ್ತೆ. ವೃದ್ಧಾಶ್ರಮ ಅಂದಾಗ ಒಳಿತು, ಕೆಡಕು, ಅನುಕೂಲತೆಗಳು, ನ್ಯೂನತೆಗಳೂ ನಮ್ಮ ಮನಸ್ನಲ್ಲಿ ಬರೋದಂತೂ ನಿಜ.

ನಮ್ಮ ತಾಯಿ ಹಾಗೂ ಅವರ ಸ್ನೇಹಿತೆ ಇದರ ಬಗ್ಗೆ 20–30 ವರ್ಷಗಳ ಹಿಂದೆ ಒಂದು ಹರಟೆಯಲ್ಲಿ, ವೃದ್ಧಾಶ್ರಮ ಅಂದಾಗ ನಮ್ಮಲ್ಲಿ ತಪ್ಪು ಭಾವನೆನು ಬರ್ಬಾರ್ದು, ಏನೋ ಕಾರಣಕ್ಕೆ, ಒಳ್ಳೇದಕ್ಕೇ ಅಂತಾನೂ ಇರಬಹುದು, ಸಮಯಾ ಸಂದರ್ಭ ಹಾಗೆ ಮಾಡಿರಲೂ ಬಹುದು ಅಂತ ನಮ್ಮಮ್ಮ ಹೇಳಿದ ಮಾತು ಜ್ಞಾಪಕಕ್ಕೆ ಬರುತ್ತೆ.

ಅವತ್ತು, ನಮ್ಮ ಸ್ನೇಹಿತ ಚಿದಂಬರನ ಮನೆಯಲ್ಲಿ, ಕಾಫಿ, ಕುರುಕ್ಲು ಕೊಡ್ತಾ, ಅವರ ತಾಯಿ – ಏ ಪದ್ಮಾ, ನಿಮ್  ಸುಬ್ಬಣ್ಣೋರನ್ನ ವೃದ್ಧಾಶ್ರಮಕ್ಕೆ ಸೇರ್ಸಿದಾರಂತೆ.'

ಅವ್ರಿಗೂ  ವಯಸ್ಸಾಗಿದೆ, ಊರು ಹೋಗು ಅಂತಿದೆ, ಕಾಡು ಬಾ ಅಂತಿದೆ' ಈಗ್ಯಾಕೇ ಈ ಬುದ್ಧಿ ಬಂತು ಅವರ ಮಕ್ಳಿಗೆ ಅಂತ ಶುರು ಮಾಡಿದ್ರು.

ನಮ್ಮಮ್ಮ, ಏ, ನೀನು ಏನೇನೋ ಕೆಟ್ಟಾದ್ದೇಳ್ಬೇಡ ನೋಡು.  ನಮ್ಮ ಸುಬ್ಬು ಅಂಥಾ ಚೆನ್ನಾಗಿದಾನೆ, ಗಂಡ ಹೆಂಡ್ತಿ ಇಬ್ರೂ ಅರೋಗ್ಯ ಎಷ್ಟು ಚೆನ್ನಾಗಿಟ್ಕೊಂಡಿದಾರೆ ಗೋತ್ತಾ ?.

ನೋಡು, ಮಗ, ಸೊಸೆ ಇಬ್ರೂ ಕೆಲ್ಸಕ್ಕೆ ಹೋಗ್ತಾರೆ, ಮೊಮ್ಮಕ್ಕಳೆಲ್ಲಾ ದೊಡ್ಡೋರಾಗಿದಾರೆ, ಸ್ಕೂಲು, ಕಾಲೇಜು ಅಂತ ಹೋಗ್ತಾರೆ. ಮನೇಲಿ ಇವ್ರಿಬ್ರೇ ಆಗ್ತಾರೆ, ಇವ್ರನ್ನ ನೋಡ್ಕೊಳೋಕೆ ಮನೇಲಿ ಯಾರಿರ್ತಾರೆ ಹೇಳು?.

ನಮ್ಮ ಸುಬ್ಬಣ್ಣನ ಕಥೆ ಸ್ವಲ್ಪ ಹೇಳ್ತೀನಿ ಕೇಳು.  ಅವ್ನು, ಯಾರ ಮಾತೂ ಕೇಳಲ್ಲ. ತಾನೇ ಸರಿ, ತಾನ್ಮಾಡಿದ್ದೆಲ್ಲಾ ಸರಿ ಅನ್ನೋ ಸ್ವಭಾವ. ಎಲ್ಲರಮೇಲೂ

ಜೋರು, ದಬ್ಬಾಳಿಕೆ. ವಯಸ್ಸು 81 ಆಗಿ 82 ಕ್ಕೆ ಬಂತು. ಹೋದವರ್ಷ 80 ವರ್ಷದ ಶಾಂತಿಗೆ ಕರ್ದಿದ್ರು, ಹೋಗಿದ್ದೆ. ತೋರಣ ಕಟ್ಟಿದ್ದು ಸರಿಯಾಗಿಲ್ಲ, ಸರಿ ಮಾಡ್ತೀನಿ ಅಂತ stool ತಗೊಂಡ್ಬಂದು ಹತ್ತೇ ಬಿಟ್ಟ. ಮಗ ಓಡ್ಬಂದು, ನಾನು ಸರಿ ಮಾಡ್ತೀನಿ ಬಿಡಿ ಅಂದ. ನಿಂಗೆಲ್ಲಬರುತ್ತೆ, ನಂಗೊತ್ತಿಲ್ವಾ ಅಂದ್ರು. ಬಿದ್ರೆ ಗಿದ್ರೆ ಕಷ್ಟ ಅಂತ stool ಹಿಡ್ಕೊಳೋಕೆ ಹೋದ್ರೆ, ಸ್ಟೂಲೂ ಗಟ್ಟಿಯಾಗಿದೆ ನಾನೂ ಗಟ್ಟಿಯಾಗಿದೀನಿ, ನಿಂಕೆಲ್ಸ ನೀನ್ ನೋಡ್ಕೋ ಹೋಗು, ಬಂದವರ ಕಡೆ ಗಮನ ಕೊಡು, ಪುರೋಹಿತರು ಇನ್ನೂ ಬಂದಿಲ್ಲ, ಸ್ವಲ್ಪ ವಿಚಾರ್ಸು ಅಂದ್ರು. ಮಗ ತಾನೆ ಏನ್ಮಾಡ್ತಾನೆ, ಆಯ್ತು, ನೀವು ಏನಾರ ಮಾಡ್ಕೊಳಿ ಅಂತ ಹೋದ. ಇವ್ರು ಎಡಗಡೆ ಸ್ವಲ್ಪ ಸೊಟ್ಟಗಿದ್ದದ್ದನ್ನ ಬಲಗಡೆ ಸೊಟ್ಟ ಮಾಡಿ ಸರಿ ಇದ್ಯಾ ಅಂತ ಹೊರಗಡೆ ನಿಂತಿದ್ದ ನಮ್ಮನ್ನ ಕೇಳಿದ್ರು. ಸರಿ ಇದೆ ಅಂತ ಹೇಳಿದ್ವಿ. ಅವ್ರು ಕೆಳಗಿಳಿದು ಒಳಗೆ ಹೋದ್ರು. ಮತ್ತೆ ಸರಿಗಿಲ್ಲ ಅಂದ್ರೆ, ಬೈತಾರೋ, ಮತ್ತೆ ಹತ್ತಾರೋ ಅಂತ ನಾವೆಲ್ಲಾ ಒಳೊಳ್ಗೆ ಮುಸಿ ಮುಸಿ ನಗ್ತಾ, ಸರಿ ಇದೆ ಸರಿ ಇದೆ ಅಂತ ಒಳಗ್ ಹೋದ್ವಿ. ಇಂಥಾ ಜಾಯ್ಮಾನದವನು ನಮ್ಮ ಸುಬ್ಬು.

ಮೊದಲ್ನೇ ಮಗ ಅಮೆರಿಕದಲ್ಲೆಲ್ಲೋ ಇದಾನೆ, ಅಲ್ಲೇ settle ಆಗ್ಬಿಟ್ಟಿದಾನೆ. ಇವ್ರು ಅಲ್ಲಿಗೆ ಹೋಗಲ್ಲ,ಇರಲ್ಲ. ಒಂದ್ಸಲ ಹೋಗಿ ಬಂದ್ರು, ಮತ್ತೆ ಇನ್ಯಾವತ್ತೂ ಅಲ್ಲೀಗೆ ಹೋಗಲ್ಲ, ಕಾಲ ಕಳ್ಯೋದೇ ಕಷ್ಟ, ಮಾತಾಡೋಕು ಒಬ್ರು ಸಿಗಲ್ಲ, ಅಂತ ಬೈತಿರ್ತಾನೆ. ಇಲ್ಲೇ ಎರ್ಡನೇ ಮಗನ್ಜೊತೇಲೆ ಜೋರ್ಮಾಡ್ಕೊಂಡಿರ್ತಾನೆ.

– ನಮ್ಮ ಸುಬ್ಬುಗೆ ಹೆಂಡ್ತಿ ಮಾತಂತೂ ಲೆಕ್ಕಕ್ಕೇ ಇಲ್ಲ. ಹೀಗಿರುವಾಗ, ನೀನೇ, ಹೇಳು, ಮನೇಲಿ ಇಬ್ರೇ ಇರ್ತಾರೆ, ನಮ್ಮ ಸುಬ್ಬು ಏನಾರ ಮಾಡ್ತಿರ್ತಾನೆ, ಏನನ್ನೋ ರಿಪೇರಿ ಮಾಡ್ತಿರ್ತಾನೆ, ಏನೋ ಒಂದು ಮಾಡ್ತಾನೆ ಇರ್ತಾನೆ ಪುಣ್ಯಾತ್ಮ. ಏನಾರು ಆದ್ರೆ ಯಾರು ನೋಡೋವ್ರು. ಅದಕ್ಕೆ ಹಾಗೆ ಮಾಡಿದಾರೆ. ಮಗ, ಸೊಸೆ ಎಲ್ಲಾರೂ ತುಂಬಾನೇ ಒಳ್ಳೆಯವ್ರು, ಒಳ್ಳೇ ಗುಣ ಕಣೇ. ಮೊಮ್ಮಕ್ಳಂತು ಕೇಳ್ಬೇಡ ಅಷ್ಟು ಚೆನ್ನಾಗಿದಾರೆ. ಮಗ, ಇನ್ನೊಂದು ವರ್ಷಕ್ಕೋ ಎರಡು ವರ್ಷಕ್ಕೋ retire ಆಗ್ತೀನಿ. ಆಮೇಲೆ ಮನೇಗೇ ಕರ್ಕೊಂಡ್ಬರ್ತೀನಿ ಅಂತಿದ್ದ.

ಈಗ್ಲಾದ್ರೂ ಗೊತ್ತಾಯ್ತಾ ? ಯಾಕೆ ಸೇರ್ಸಿದಾರೆ ಅಂತ. ಶನಿವಾರ, ಭಾನುವಾರ ಮನೇಗೆ ಕರ್ಕೊಂಡ್ಬರ್ತಾರೆ. ಮತ್ತೆ ಸೋಮವಾರ ಬಿಟ್ಬರ್ತಾರೆ, ಅವ್ರೂ ಅಲ್ಲಿಗೆ ಹೊಂದ್ಕೊಂಡಿದಾರೆ. ನಂಗೇನೂ ಇದ್ರಲ್ಲಿ ತಪ್ಪು ಕಾಣಿಸ್ತಿಲ್ಲವ್ವ. ಅವ್ರೇ, ಒಂದೊಂದ್ಸಲ, ಈ ವಾರ ನಮ್ಮ ಆಶ್ರಮದಲ್ಲಿ, ಉಪನ್ಯಾಸ ಇದೆ, ನಾವು ಬರೋಲ್ಲ, ನೀವೂ ಬೇಕಾದ್ರೆ, ಉಪನ್ಯಾಸ ಕೇಳೋದಾದ್ರೆ, ಬನ್ನಿ ಅಂತಿರ್ತಾರಂತೆ. ವೃದ್ಧಾಶ್ರಮನೂ ಚೆನ್ನಾಗಿದೆಯಂತೆ. ಚೆನ್ನಾಗಿ, ನೋಡ್ಕೋತಾರೆ ಅಂತ ಕಾಣ್ಸುತ್ತೆ.

ಅದ್ಸರಿ, ನಿಮ್ ಸುಬ್ಬು ಒಪ್ಕೊಂಡ್ನೇನೇ ವೃದ್ಧಾಶ್ರಮಕ್ಕೆ ಹೋಗೋಕೆ?. ನಮಗೇನು, ಕಾಡ್ನಲ್ಬಿಟ್ಬಂದ್ರೂ ಆರಾಮಾಗಿರ್ತೀವಿ. ಇದೇನ್ಮಹಾ. ಇದೂ ಒಂಥರಾ change, ಹೇಗಿರುತ್ತೆ ನೋಡೋಣ ಅಂತ ಹೊರಟೇ ಬಿಟ್ರಂತೆ ಕಣೆ. ಅವಂಗೇನು, ಕಲ್ಲಿನ್ಜೊತೇಲೂ ಮಾತಾಡೋ ಅಂತ ವಾಚಾಳಿ, ಅಲ್ಲಿರೊವ್ರೆಲ್ಲಾ friend ಆಗಿರ್ತಾರೆ, ಬಾಯಿಗೆ ಪುರ್ಸೊತ್ತು ಇಲ್ಲದ ಹಾಗೆ ಹರಟೆ ಹೊಡ್ಕೊಂಡು, ಅದೋ ಇದೋ ಏನೋ ಕಾಯಕ ಮಾಡ್ತಾ ಕಾಲ ಕಳೀತಾನೆ. ಇನ್ನು ನಮ್ಮ ಗೌರಮ್ಮನ್ಯಾರ್ ಕೇಳ್ತಾರೆ? ಇಬ್ಬರೂ ಹೋಗಿದಾರೆ. ಆದ್ರೆ, ನಂಗೆ, ನಮ್ ಸುಬ್ಬು ಹೆಂಡ್ತಿ ಗೌರಮ್ಮನ್ನ ನೆನಸ್ಕೊಂಡ್ರೆ

ಅಯ್ಯೋ ಅನ್ನುತ್ತೆ ಕಣೆ.  ತುಂಬಾ ಸಾಧು. ಎಷ್ಟು ಬೇಕೋ ಅಷ್ಟು ಮಾತ್ರ ಮಾತು. ಅಡಿಗೆ, ಊಟ, ತಿಂಡಿ, ಮಕ್ಕಳು–ಮೊಮ್ಮಕ್ಕಳ, ಬಂದು ಹೋಗುವವರ್ನ ಸುಧಾರಿಸ್ತಾ ಆದರಿಸ್ತಾ, ಪುರಾಣ–ಪುಣ್ಯ ಕಥೆ ಅಂತಾ ದಿನವೆಲ್ಲಾ ದುಡಿತಾ ಇದ್ದೋರು, ಆ ವೃದ್ಧಾಶ್ರಮದಲ್ಲಿ ಹೇಗಿರ್ತಾರೋ ಏನ್ಕಥೆಯೋ?.  ಅಲ್ಲಿ ಮಾಡೋಕೇನ್ಕೆಲಸ ಇರತ್ತೆ ಹೇಳು. ನಮ್  ಸುಬ್ಬು ಅಲ್ಲೂ ಅವ್ರ ಮೇಲೆ ಜೋರ್ಮಾಡ್ಕೊಂಡಿರ್ತಾನೆ ಅನ್ಸುತ್ತೆ.

ಈಗ್ಲಾದ್ರೂ ಅರ್ಥ ವಾಯ್ತಾ?. ವೃದ್ಧಾಶ್ರಮ ಅಂದಾಗ ನಮ್ಮಲ್ಲಿ ತಪ್ಪು ಭಾವನೆ ಬರ್ಬಾರ್ದು ಕಣೇ, ಏನೋ ಕಾರಣಕ್ಕೆ, ಒಳ್ಳೇದಕ್ಕೇ ಇರಬಹುದು, ಸಮಯಾ ಸಂದರ್ಭ ಹಾಗೆ ಮಾಡಿರಲೂ ಬಹುದು ಅಲ್ವಾ.

ವೃದ್ಧಾಶ್ರಮ ಅಂದ್ರೆ ಅದೇನು Jail ಲಾ. ಅದಕ್ಕೇ, ಅದನ್ನ ವೃದ್ಧಾಲಯ ಅನ್ನಲ್ಲ, ವೃದ್ಧಾಶ್ರಮ ಅನ್ನೋದು. ಗೌರವ, ಪೂಜ್ಯ ಭಾವನೆ ನಮ್ಮಲ್ಲಿ ಬರ್ಬೇಕು ಗೊತ್ತಾ.  ವೃದ್ಧಾಶ್ರಮ ಅನ್ನೋದ್ರ ಬದ್ಲಾಗಿ "ವಾನಪ್ರಸ್ಥಾಶ್ರಮ" ಅನ್ಕೊಂಡ್ರೆ ಇನ್ನೂ ಚೆನ್ನ ಕಣೇ.

ಏನೋ , ನಂಗೆ ಹಂಗೆ ಅನ್ನಿಸ್ತು ಕಣೇ , ಹಾಗೆ ಹೇಳ್ದೆ. ನಮಗೂ, ವಯಸ್ಸಾಗ್ತಾ ಬಂತಲ್ವಾ?. ಮನಸ್ಸು, ಸುಮ್ನಿರುತ್ತಾ ಹೇಳು, ಏನೇನೋ, ಯೋಚ್ನೆ ಮಾಡುತ್ತೆ ಅಲ್ವಾ. ನಾವೂ, ವಾನಪ್ರಸ್ಥಾಶ್ರಮಕ್ಕೆ ಅಲ್ಲಲ್ಲ ವೃದ್ಧಾಶ್ರಮಕ್ಕೆ ಸೇರ್ಕೊ ಬೇಕಾಗಿ ಬಂದ್ರೆ, ಇಬ್ರು ಒಂದೇ ಆಶ್ರಮಕ್ಕೆ ಸೇರ್ಕೊಳ್ಳೋಣ ಕಣೆ, ಒಟ್ಟಿಗೇ enjoy ಮಾಡ್ಬಹುದು.

ಹೌದವ್ವಾ, ನೀನು, ದಿವಸಾ, ರಾಮಾಯಣ, ಮಹಾಭಾರತ, ಭಗವದ್ಗೀತೆ, ಅಂತ  ಉಪದೇಷ, ಉಪನ್ಯಾಸ ಕೊಡ್ತಾ ಕೂತ್ಕೋತೀಯ ನಾನೇನ್ಮಾಡ್ಲಿ ಹೇಳು?.

ಯಾಕೇ ಹಾಗಂತೀಯ, ನೀನೂ, ಸೌಂದರ್ಯಲಹರೀ, ಶಿವಾನಂದ ಲಹರೀ, ಲಲಿತಾ ಸಹಸ್ರ ನಾಮ, ವಿಷ್ಣು ಸಹಸ್ರನಾಮ ಅಂತ ಎಲ್ಲಾ ಪಾಠ ಆಗಿದ್ಯಲ್ಲಾ, ನೀನೂ ಹೇಳ್ಕೊಡು. ಬೇಡಾ ಅಂತಾರ್ಯೇ?.

ಆಯ್ತು, ಹಿಗ್ಮಾಡೋಣ, ನಾನು, ವಾಚಿಸ್ತಾ ಹೋಗ್ತೀನಿ, ನೀನು ವ್ಯಾಖ್ಯಾನಿಸ್ತಾ ಹೋಗು. ಇಬ್ರೂ stage ಮೇಲೆ ಕೂತ್ಕೊಬಹುದು – ಅಂತ ನಕ್ರು.

ಸರಿ, ಈಗ್ಲೇ ಯಾಕೀ ಯೋಚ್ನೆ ಮಾಡ್ಬೇಕು?. ನಮ್ಮನೆಗಳಲ್ಲಿ ಮಗ ಸೊಸೆ, ಮಗ್ಳು ಅಳ್ಯ ಎಲ್ಲ ಹೊಂದ್ಕೊಂಡಿದಾರೆ, ಸಧ್ಯ ವಯಸ್ಸಾದ್ರೂ ನಾವು ಆರೋಗ್ಯವಾಗೇ ಇದೀವಲ್ವ. ನಂಗೇನೋ ಕಾಲು ನೋವು, ಜಾಸ್ತಿ ಓಡಾಡುಕ್ಕಾಗುಲ್ಲ. ಅದಕ್ಕೇ, ನಮ್ಮನೇಗೆ, ನೀನೇ ಬಾ ಅನ್ನೋದು. ನೀನೇ ಪುಣ್ಯವಂತೆ ಕಣೆ ಪದ್ಮ, ಕೈ ಕಾಲು ಗಟ್ಟಿಯಾಗಿದೆ. ಬಿಡ್ಬೀಸಾಗಿ ಓಡಾಡ್ತೀಯ. ಏನ್ಮಾಡ್ಲಿ, ನಾನು ಆ ಪುಣ್ಯ ಪಡ್ಕೊಂಡ್ ಬಂದಿಲ್ವೇ?.

ಅವ್ರ ಮಾತುಕತೆ ಅಲ್ಲಿಗೆ ನಿಲ್ಲುತ್ತೇನೋ ಅನ್ಕೋತಿದ್ರೆ, ವಾನಪ್ರಸ್ಥಾಶ್ರಮದ ಬಗ್ಗೆ ವ್ಯಾಖ್ಯಾನ, ಪುರಾಣ ಕಥೆಗಳನ್ನ ಶುರು ಮಾಡ್ಕೊಂಡ್ರು. ಅದನ್ನೂ ಯಾವಾಗ್ಲಾದ್ರೂ ಮತ್ತೆ ಹೇಳ್ತೀನಿ.

■

# ಟೂತ್ ಪೇಸ್ಟ್ ಪರಸಂಗ

✍ ಕೆ.ಎಸ್.ಸೋಮೇಶ್ವರ

ಈ ಟೂತ್ ಪೇಸ್ಟ್ ಗಳು ಪದೇ ಪದೇ ಸುದ್ದಿ ಮಾಡುತ್ತಲೇ ಇರುತ್ತವೆ. ಸುಮ್ಮನೆ ನಮ್ಮಗಳ ಹಲ್ಲು ತಿಕ್ಕಿ ಒಂದು ಮೂಲೆಯಲ್ಲಿ ಕೂರುವುದೇ ಇಲ್ಲವೆನಿಸುತ್ತದೆ. ಇದು ಈಗಾಗಲೇ ನನ್ನ ಬೆರಳುಗಳಿಂದ 'ದಂತ ಧಾವನದ ಧಾವಂತಗಳು' ಅಂತ ಒಂದು ದೊಡ್ಡ ಪ್ರಬಂಧವನ್ನೇ ಬರೆಸಿದೆ. ಅದನ್ನು ಹಲವಾರು ಜನ ಓದಿ ಹಲ್ಲು ಕಿರಿದಿದ್ದೂ ಇದೆ. ಅದೇಕೋ ನನಗೆ ಅದರ ಸಲುವಾಗಿ ಯಾರೂ ಇನ್ನೂ ಗೌ. ಡಾ ಕೊಟ್ಟಿಲ್ಲ. ಯಾವ 'ಭಾಗ್ಯದ' ಅಡಿಯಲ್ಲಿ ಅರ್ಜಿ ಹಾಕಬೇಕೋವಿಚಾರಿಸಬೇಕು !

ಮೊದಲೆಲ್ಲ ಇವುಗಳು ಒಂದು ಟ್ಯೂಬಿನಲ್ಲಿ ಬಿಳಿಯ ಬಣ್ಣದ ಹಾವಿನ ನಡಿಗೆಯಂತೆ ಹೊರ ಬರುತ್ತಿದ್ದವು. ಇಲ್ಲಿ ನಾನು ಯಾವ ಹಾವಿನ ಹೆಜ್ಜೆಯನ್ನೂ ಕಂಡಿಲ್ಲ. ಆದರೇನು ? ನಮ್ಮ ಟಿವಿಗಳಲ್ಲಿ ಅದೇನೇನೋ ನಾಗ ಗಳು ಬಂದು ಸರ್ಪ ಸುತ್ತು ನೀಡುತ್ತಿರುತ್ತವಲ್ಲ. ಅದೇ ಸತ್ಯ ಅಲ್ಲವೇ. ಆ ನಂತರದಲ್ಲಿ ಬಂದವು ಫ್ಲೋರೈಡ್, ಜೆಲ್ ಇತ್ಯಾದಿ. ಇವೆಲ್ಲ ಬರಿಯ ಹಲ್ಲು ತಿಕ್ಕಲೇ ಹೊರತು ಬೇರೇನಿಲ್ಲ ಅದಕ್ಕೆ ಮಧ್ಯವರ್ತಿಯಾಗಿ ಒಂದು ಬ್ರಷ್ ಇರಲೇ ಬೇಕಿದೆ. ಇತ್ತೀಚಿನ ದಿನಗಳಲ್ಲಿ ಇವುಗಳು ಬಹುಮುಖಿ ಪಾತ್ರದಾರಿಗಳಾಗಿ ಬಿಟ್ಟಿವೆ. ಏನಾದರೂ ಅಗಿಯುವಾಗ ಸ್ವಲ್ಪ ಆಹ್ ಎಂದರೆ ಮುಗಿಯಿತು ನಿಮ್ಮ ಕಥೆ. 'ನಿಮ್ಮ ಟೂತ್ ಪೇಸ್ಟಿನಲ್ಲಿ ಉಪ್ಪು ಇದೆಯೇ ಅಂತ ಒಬ್ಬ ಸಕ್ಕರೆ ನಗುವಿನ ತರುಣಿ ಪ್ರತ್ಯಕ್ಷಳಾಗಿ ಬಿಡುತ್ತಾಳೆ. ಅವಳಾವ ಲೋಕದಿಂದ ಬಂದಳೋ ಗೂಗಲ್ ನಲ್ಲಿ ಘಲ್ಲು ಘಲ್ಲು ಎನುವ ಗೆಜ್ಜೆ ಹಾದಿಯನ್ನು ಹುಡುಕ ಬೇಕು. ಈ ಅಪ್ಸರೆ ಸರ್ವ ವ್ಯಾಪಿ. ನೀವೆಲ್ಲೋ ಅವಳಲ್ಲೇ ಪ್ರತ್ಯಕ್ಷ.

ಇದರ ಮುಂದಿನ ಭಾಗವಾಗಿ ಕೆಲವು ವಜ್ರದಂತಿಗಳು. ಅವುಗಳೇ ವಜ್ರದಂತೆ ಅಂತ ಬಿಂಬಿಸಿಕೊಳ್ಳುತ್ತವೆ. ಇನ್ನು ಈಗಂತೂ ಇದ್ದಿಲು ಒಳ್ಳೆಯ ಮಾರಾಟ ಜಾಹೀರಾತಿನ ಸರಕಾಗಿದೆ. ಅದು ಟೂತ್ ಪೇಸ್ಟಿನಿಂದ ಮೊದಲಾಗಿ ನಿಮ್ಮ ಮುಖದ ಅಂದ ಚೆಂದಕ್ಕೆಲ್ಲ ತಮ್ಮ ಬಣ್ಣದಿಂದ ಬೀಗುತ್ತವೆ. ಇನ್ನೊಂದು ಜಾಹೀರಾತಿನಲ್ಲಿ ಬೊಚ್ಚು ಬಾಯಿಯ ಅಜ್ಜಿಯೊಬ್ಬಳು ಒಂದು ಪೇಸ್ಟನ್ನು ಹೊರಗೆಳೆಯುತ್ತಾಳೆ. ಕಾರಣ ಅದು ಅವಳ ಮೊಮ್ಮಗಳ ಹಲ್ಲು ಗಟ್ಟಿಯಾಗಿ ಕಬ್ಬಿನ ಜಲ್ಲೆ ಸಿಗಿಯಲೆ ಅಲ್ಲದೇ ವಿಚಿತ್ರ ಆಂಗಲ್ ನ ಪ್ಲಾಸ್ಟಿಕ್ ಕವರ್ ಅನ್ನು ಹಲ್ಲಿನಿಂದ ಹರಿಯಲೂ ಉಪಯೋಗ ಎನ್ನುತ್ತಾಳೆ. ಇದೆಲ್ಲ ಏಕೆ ಫಜೀತಿ ಎಂದು ಇನ್ನೊಂದು ತಯಾರಿಕಾ ಸಂಸ್ಥೆ ತನ್ನ ಟೂತ್ ಪೇಸ್ಟು 'ಟ್ರೂತ್ ಪೇಸ್ಟ್' ಎನ್ನುತ್ತದೆ. ಇದಾವ ಸತ್ಯವನ್ನು ಹೇಳ ಹೊರಟಿದೆಯೋ, ಅದು ಅದಾವ ಸಿ.ಡಿ, ಪೆನ್ ಡ್ರೈವ್ ಗಳಲ್ಲಿದೆಯೋ ಬಲ್ಲವನೇ ಬಲ್ಲ. ಇದು ಯಾವಾಗಲೂ ತನಿಖಾ ವ್ಯಾಪ್ತಿಯಿಂದ ಹೊರಗೇ ಇರುತ್ತದೆ.

ಇಷ್ಟೆಲ್ಲ ಆಯಿತು ಅಂದರೆ ಇತ್ತೀಚೆಗೆ ಈ ಟೂತ್ ಪೇಸ್ಟಗಳ ವಿವಿಧ ಉಪಯೋಗ ಹೇಳುವ ವಿಚಾರ ಸಾಮಾಜಿಕ ಜಲತಾಣಗಳಲ್ಲಿ ಹರಿದಾಡುತ್ತಿತ್ತು. ಅದು ವೈರಲ್ ಆಯಿತೋ ಅಥವ ಆಂಟಿ ಬಯೋಟಿಕ್ ತಿನ್ನಿಸಿ ತಿರುವಿ ಹಾಕಿದ್ದಾರೋ ತಿಳಿಯದು. ಅದರ ಪ್ರಕಾರ ಇದರ ಬಳಕೆ ವಿವಿಧ ರೀತಿಯಲ್ಲಿ ಆಗುತ್ತದೆಯಂತೆ. ಅದಕ್ಕೆ ಒಂದಿಷ್ಟು ಅಕ್ಕಿ ಹಿಟ್ಟು ಬೆರೆಸಿದರೆ ಅದು ಭದ್ರವಾದ ಬಿಡಿಸಲಾರದ ನಂಟು (ಅಲ್ಲ ಅಂಟು) ಆಗುತ್ತದಂತೆ. ಅದೇನಾದರೂ ಕೈ ತಪ್ಪಿ ಬಾಯಿಗೆ ಹೋದರೆ ಬಾಯಿಗೆ ಶಾಶ್ವತ

ಬಂದ್ ಖಂಡಿತ. ಗೋಡೆಗೆ ಮೆತ್ತಿಕೊಂಡಿರುವ ಕ್ರಯಾನ್ ಬಣ್ಣ ಅಳಿಸುವ ಮೊದಲಾಗಿ ನಮ್ಮ ನಿಮ್ಮ ಮನೆಗಳ ನೆಲಹಾಸುಗಳು, ಗಾಜಿನ ಕಪಾಟುಗಳು, ಕನ್ನಡಿಗಳು, ತಂಗಳು ಪೆಟ್ಟಿಗೆಯ ಮೇಲ್ಮೈ ನಿಮ್ಮ ಕಪ್ಪು ಕನ್ನಡಕದ ಮೇಲಿನ ಮಂಜು ನಿವಾರಣೆ, ಟೀ, ಕಾಫಿ ಅಂಟಿಕೊಂಡಿದ್ದರೆ ಆ ಬಟ್ಟಲುಗಳ ಲಕ ಲಕತನ ಹೀಗೆ. ಇದೂ ಸಾಲದೆಂಬಂತೆ ನಿಮ್ಮ ಪಾದರಕ್ಷೆಗಳ ಮೇಲಿನ ಕೊಳೆಯನ್ನು ಅಳಿಸಿ ಹೊಸದರಂತೆ ಮಾಡಿ ಬಿಡುತ್ತದಂತೆ. ಬಚ್ಚಲು ಮನೆಯ ಸುವಾಸನೆಗೂ ಸಹ ಇದೇ ಮೋಡಿ ಮಾಡಿ ಬಿಡುತ್ತದೆ. ನೋಡಿ ಇದ್ಯಾವುದಕ್ಕೂ ನಾವು ಅದಕ್ಕಾಗಿ ಮಾರಾಟ ಮಳಿಗೆಗಳಲ್ಲಿ ನರ್ತನ ಮಾಡುತ್ತಿರುವ ವಿವಿಧ ದ್ರಾವಣಗಳ, ಜೊಲ್ಲು ಸುರಿಸುವ ಜೆಲ್ ಗಳ ಕೊಂಡು ಬಳಸುವ ತಾಪತ್ರಯವೇ ಇಲ್ಲವಂತೆ. ಕೈಯಲ್ಲೊಂದು ಪೇಸ್ಟಿನ ಟ್ಯೂಬ್ ಇದ್ದರೆ ಸಾಕಂತೆ.

'ಅಂತೂ ಇಂತು ಕುಂತಿ ಮಕ್ಕಳಿಗೆ ರಾಜ್ಯ ವಿಲ್ಲ' ಎಂಬಂತೆ ನಮ್ಮ ಹಲ್ಲುಗಳ ತಿಕ್ಕಿ ಫಳ ಫಳ ಮಾಡುವ ಉದ್ಯೋಗಕ್ಕೆ ಇದು ಟಾ ಟಾ ಹೇಳುತ್ತಿದೆ. ಆದರೆ, ನಮ್ಮ ಗತಿಯೇನು ? ಅಂದಿರಾ. ಹೊಗಳಿ ಒಂದು ಸ್ತೋತ್ರ ಪಾಡಿದರೆ ಸಾಕು ಬಂದು ನಿಲ್ಲಬಹುದು.!! ಇಲ್ಲದಿದ್ದರೇನಂತೆ, ಈ ತಯಾರಿಕಾ ಸಂಸ್ಥೆಗಳಿಗೆ ಇನ್ನೇನು ಕೆಲಸ. ಹೊಸದನ್ನು ತಿಕ್ಕಿ ಪಾಲಿಷ್ ಮಾಡಿ ನಮಗೆ ಮಾಲಿಷ್ ಮಾಡಿ ಬಿಡ್ತಾರೆ ಅಷ್ಟೇ !

■



# ಈ ವೇಷ ನೋಡಬೇಡ ಅಮ್ಮಯ್ಯ

✍ ಸುಕೇಶವ

ಸರ್ ಈ ಬೀದೀಲಿ ನನಗೊಂದು ಮನೆ ವಾಸಕ್ಕೆ ಬೇಕಾಗಿತ್ತು ಇದೆಯಾ ಈ ಮಾತು ಕೇಳಿ ಸೋಮು ಪೇಪರಿಂದ ಕಣ್ಣರಳಿಸಿ ಧ್ವನಿ ಬಂದ ಕಡೆ ನೋಡಿ ನಿಮಗೆ ಮದುವೆ ಆಗಿದೆಯಾ ಅಂತ ಕೇಳಿದ ಇಲ್ಲ ಸಾರ್, ಮನೆ ಕೊಟ್ಟೋರು ಮನೆಯೊಡತಿಯನ್ನೂ ಕೊಟ್ಟರೆ ಒಳ್ಳೇದು ಯಾಕೆ ಮಕ್ಕಳನ್ನೂ ಕೊಟ್ಟರೆ ಇನ್ನೂ ಒಳ್ಳೇದಲ್ವಾ ಹೌದು ಸರ್. ನಾನು ಮಕ್ಕಳಿರುವ ವಿಧವೆಗೆ ಬಾಳು ಕೊಡೋಣ ಅಂದುಕೊಂಡಿದ್ದೀನಿ ವಿಧವೆಗೆ ಬಾಳು ಕೊಡೋದೇನೋ ಒಳ್ಳೇದೇ ಆದರೆ ಅದಕ್ಕೆ ಸ್ವಂತ ಮನೆಯಿರಬೇಕು, ಸಾಕಷ್ಟು ದುಡ್ಡಿರಬೇಕು, ಕೊಡುವ ಮನಸ್ಸಿರಬೇಕು, ತ್ಯಾಗ ಮನೋಭಾವವಿರಬೇಕು ಎಲ್ಲ ಇದೆ ಸರ್ ಆದರೆ ವಿಧವೆಯರು ಸಿಗೋದೇ ಕಷ್ಟ ಆಗ್ತಿದೆ ಸರ್ ರೀ ನಿಮ್ಮ ಮಾತು ಎಲ್ಲಿಂದ ಎಲ್ಲೆಲ್ಲಿಗೋ ಹೋಗ್ತಿದೆ. ಇಲ್ಲಿ ಯಾವುದೂ ಮನೆ ಖಾಲಿ ಇಲ್ಲ ಹೊರಡಿ ಅಂದು ಸೋಮು ಎದ್ದ.

ಪರವಾಗಿಲ್ಲ ಸರ್ ಹೇಗಾದರೂ ಮಾಡಿ ನನಗೊಬ್ಬಳು ಮಕ್ಕಳಿರುವ ವಿಧವೆಯುನ್ನು ಹುಡುಕಿಕೊಡಿ. ನಿಮ್ಮ ಪರಿಚಯ ಆಗಿದ್ದು ಸಂತೋಷವಾಯಿತು ಹಾಗಂತ ಪದೇ ಪದೇ ಬರ್ತಾ ಇರಬೇಡಿ. ನನಗೆ ನಿಮ್ಮ ಪರಿಚಯ ಆಗಿದ್ದು ಸಂತೋಷ ಆಗಿಲ್ಲ ಅಂತ ರೇಗಿದ ಸೋಮು ಪರವಾಗಿಲ್ಲ ಬಿಡಿ ಸರ್ ನಾನು ನಿಮ್ಮ ವಿಷಯವನ್ನೇನು ನಿಮ್ಮ ಹೆಂಡತಿಗೆ ತಿಳಿಸೋಲ್ಲ ನನ್ನ ಹೆಂಡತಿಗೆ ನನ್ನ ವಿಷಯ ತಿಳಿಸೋದಕ್ಕೆ ಏನಯ್ಯಾ ಇದೆ. ಅಷ್ಟಕ್ಕೂ ನೀನು ಯಾರು ಯಾರಾದರೆ ನಿಮಗೇನು ಸರ್. ರಾಗಿಣಿ ವಿಚಾರ ನನಗೆ ಎಲ್ಲಾ ಗೊತ್ತು. ಅದು ಬರೀ ನನಗೊಬ್ಬನಿಗೆ ತಿಳಿದಿದ್ದರೆ ಏನು ಪ್ರಯೋಜನ ನಾಲ್ಕು ಜನಕ್ಕೆ ತಿಳಿಸೋ ಉಪಕಾರ ಮಾಡೋಣ ಅಂದ್ಕೊಂಡಿದೀನಿ ನೀನೇನಾದಾರೂ ನಾಲ್ಕು ಜನಕ್ಕಲ್ಲ ಒಬ್ಬರಿಗಾದರೂ ರಾಗಿಣಿ ವಿಚಾರ ತಿಳಿಸಿದರೆ ನಿನ್ನನ್ನು ನಾಲ್ಕು ಜನ ಹೊತ್ಕೊಂಡು ಹೋಗೋ ಹಾಗೆ ಮಾಡಿಬಿಡ್ತೀನಿ ಇವರು ಯಾರತ್ರ ಹೀಗೆ ಮಾತಾಡ್ತಾ ಇದಾರೆ ಅಂತ ಸೋಮಿ ಹೊರಬಂದು ರೀ ಯಾರ್ರೀ ಅದು ಅಂತ ಕೇಳಿದಳು ಬಂದವನು ನಮಸ್ಕಾರಾಮ್ಮ ನನ್ನ ಹೆಸರು ಶ್ರೀನಿಧಿ. ನಿಮ್ಮ ಯಜಮಾನರಿಗೆ ಹಳೇ ಪರಿಚಯ ಹೌದಾ ಹಾಗಾದರೆ ಒಂದು ಸಾರಿನೂ ಇವರು ನಿಮ್ಮ ಹೆಸರು ಹೇಳಿಲ್ಲ ಅಯ್ಯೋ ನನ್ನ ಒಂದು ಹೆಸರೇನು ಮೇಡಂ ಇನ್ನೂ ಹಲವಾರು ಜನರ ಹೆಸರು ನಿಮ್ಮ ಬಳಿ ಹೇಳಿಲ್ಲ. ಬೇಕಾದಾರೆ ನಾನೇ ಒಂದೊಂದಾಗಿ ಹೇಳ್ತೀನಿ. ಅದರಲ್ಲಿ ಗಂಡಸರೆಷ್ಟು ಹೆಂಗಸರೆಷ್ಟು ಅಂತಲೂ ಹೇಳ್ತೀನಿ ಅಂದ ಸೋಮುಗೆ ಸಖತ್ತಾಗಿ ರೇಗಿ ಶ್ರೀನಿಧಿ ಈಗ ನೀನು ಬಾಯಿ ಮುಚ್ಕೊಂಡು ಹೋದ್ಯೋ ಬದುಕ್ದೆ ಇಲ್ಲದಿದ್ದರೆ ಇಲ್ಲೇ ಸತ್ತೆ ಅಂದ ಅಯ್ಯೋ ಯಾಕೆ ಸರ್ ಹಾಗೆ ರೇಗ್ತೀರ. ನಾನೇನು ಈಗ ರಾಗಿಣಿ ವಿಚಾರ ನಿಮ್ಮ ಮನೆಯವರಿಗೆ ಹೇಳಿದೆನಾ ಅಂತ ಶ್ರೀನಿಧಿ ಅಂದಿದ್ದೇ ಅಂದಿದ್ದು ಸೋಮಿ ಬಂದು ಸೋಮುನ ತಿವಿದು ರೀ ಯಾರ್ರೀ ಅದು ರಾಗಿಣಿ, ನನ್ನಿಂದ ಯಾಕ್ರೀ ಅವಳನ್ನು ಮುಚ್ಚಿಟ್ಟಿದ್ರೀ ಅಂತ ಕೇಳಿದಳು ಸೋಮು ದಡಬಡಾಯಿಸಿ ಏನು ಮಾತಾಡಬೇಕು ಎಂದು ತಿಳಿಯದೇ ಸೋಮಿ ರಾಗಿಣಿ ಅಂದರೆ ಅದು ಹುಡುಗಿಯಾಗಲೀ ಹೆಣ್ಣಾಗಲೀ ಅಲ್ಲ ಕಣೆ. ಅದು ನಮ್ಮ ಆಫೀಸಿನ ಮುಂದೆ ಆಗಾಗ ಬರೋ ನಾಯಿ ಕಣೆ. ನಾವೆಲ್ಲಾ ಅದಕ್ಕೆ ಬಿಸ್ಕತ್ತು ಬನ್ನು ಹಾಕ್ತಿರ್ತೀವಿ.

ನಮ್ಮ ಆಫೀಸಿನವರೆಲ್ಲಾ ನನ್ನನ್ನು ಚುಡಾಯಿಸೋಕೆ ರಾಗಿಣಿ ನನ್ನ ಗರ್ಲ್ ಫ್ರೆಂಡು ಅಂತಿದಾರೆ. ಇಲ್ಲ ಮೇಡಂ, ರಾಗಿಣಿ ಅಂದ್ರೆ ನಾಯಿ ಅಲ್ಲ. ಅವರು ಆಗಾಗ ನಿಮ್ಮ ಯಜಮಾನರನ್ನು ಭೇಟಿ ಮಾಡ್ತಿರ್ತಾರೆ. ಅಷ್ಟು ನಾನು ನೋಡಿರೋದು. ಮಿಕ್ಕಿದ್ದು ನನಗೆ ಗೊತ್ತಿಲ್ಲ, ಅಂತ ಶ್ರೀನಿಧಿ ಅನ್ನುತ್ತಾ ಇರುವಾಗ ರೀ ಇದ್ಯಾವ್ದೋ ಚೀಟಿ ನಿಮ್ಮ ಜೋಬಿಂದ ಬಿತ್ತಲ್ರೀ ತಗೊಳಿ. ಇನ್ನೊಬ್ಬರ ವಿಚಾರ ಮಾತಾಡುವಾಗ ನಿಮ್ಮದೆಲ್ಲಾ ಕಳ್ಕೊಂಡು ಬಿಡಬೇಡಿ ಅಂದ.

ಶ್ರೀನಿಧಿ ಜೋಬು ಮುಟ್ಟಿ ನೋಡಿಕೊಂಡು ಸೋಮು ಕೊಟ್ಟ ಚೀಟಿ ಕೈಗೆ ತಗೊಂಡು ನೋಡಿದ. ಅದರಲ್ಲಿ ಈಗ ನೀನು ಬಾಯಿ ಮುಚ್ಚಿಕೊಂಡು ಹೋದರೆ ನಿನಗೆ ಏನು ಬೇಕೋ ಅದನ್ನು ನಾನು ಕೊಡ್ತೀನಿ. ಈಗ ದಯವಿಟ್ಟು ಇಲ್ಲಿಂದ ಹೊರಡು ಅಂತ ಬರೆದಿದ್ದು ಶ್ರೀನಿಧಿ ಓದಿಕೊಂಡ. ಸೋಮು ನಿನ್ನ ಕಾಲಿಗೆ ಬೀಳ್ತೀನಿ ಅನ್ನುವಂತೆ ಮುಖ ಮಾಡಿದ್ದ ಸೋಮಿ ರೀ ಶ್ರೀನಿಧಿ ಮಿಕ್ಕಿದ್ದು ಹೇಳ್ರೀ ಅಂತ ಕೇಳಿದಳು ಏನಿದೆ ಮೇಡಂ ಹೇಳೋಕೆ. ರಾಗಿಣಿ ಮೇಡಂ ಅಂದರೆ ಅವರು ಒಂದು ಅನಾಥಾಶ್ರಮ ನಡೆಸ್ತಿರೋರು. ಅವರಿಗೆ ಈಗ ಎಪ್ಪತ್ತು ವರ್ಷ ವಯಸ್ಸು. ಸೋಮು ಅನಾಥಾಶ್ರಮಕ್ಕೆ ಸಹಾಯ ಮಾಡ್ತಾರೆ. ಹೀಗಾಗಿ ಅವರು ಸೋಮುನ ಆಗಾಗ ನೋಡ್ತಿರ್ತಾರೆ ಅಂದ ಸೋಮಿ ಇನ್ನೇನೋ ಕೇಳೋದರಲ್ಲಿ ಇರುವಾಗ ಶ್ರೀನಿಧಿ ತನ್ನ ಮೊಬೈಲ್ ನೋಡಿಕೊಂಡು ಮೇಡಂ ಯಾವುದೋ ಕಾಲ್ ಬರ್ತಿದೆ ಒಂದು ನಿಮಿಷ ಅಂತ ಹೊರಗೆ ಹೋದೋನು ಹಾಗೇ ಹೊರಟುಹೋದ. ಇದರಿಂದಾಗಿ ಸೋಮುಗೆ ಬಹಳ ಸಮಾಧಾನವಾದರೆ ಸೋಮಿಗೆ ಅನುಮಾನ ಹೆಚ್ಚಾಯಿತು.

ರೀ ನಿಜ ಹೇಳಿ ರಾಗಿಣಿ ಅಂದ್ರೆ ಯಾರು ಅಂತ ಕೇಳಿದಳು ಸೋಮಿ ನೀನು ನನ್ನ ಮೇಲೆ ಅನುಮಾನ ಪಡ್ತಿರೋದು ಇದು ನೂರಾ ಐವತ್ತೊಂದನೇ ಸಾರಿ. ನೀನು ನಾಳೆ ನಮ್ಮ ಆಫೀಸಿಗೆ ಬಾ ನಾನು ರಾಗಿಣಿನ ಕರೆಸ್ತೀನಿ ನೀನೇ ನೊಡಿ ಮಾತಾಡು ಅಂದ. ಸೋಮಿ ಸುಮ್ಮನಾದಳು ಅಬ್ಬಾ ಬೀಸೋ ದೊಣ್ಣೆ ತಪ್ಪಿಸಿಕೊಂಡರೆ ಸಾವಿರ ವರ್ಷ ಆಯಸ್ಸು ಅನ್ನೋದು ನಿಜವಾಯ್ತು ಅಂದುಕೊಂಡು, ಎಲ್ಲಾ ಸರಿ ಈಗ ಬಂದೋನು ಯಾರು, ಶ್ರೀನಿಧಿ ಅನ್ನೋರು ಯಾರೂ ನನಗೆ ಗೊತ್ತಿಲ್ಲವಲ್ಲ. ಅವನು ಬಂದಿದ್ದು ಮನೆ ಬಾಡಿಗೆಗೆ ಇದೆಯಾ ಅಂತ ಕೇಳೋಕೆ. ಆದರೆ ಮಾತಾಡಿದ್ದು ಮಾತ್ರ ಎಲ್ಲ ಅಸಂಬದ್ಧ.

ಮರುದಿನ ಸೋಮು ಆಫೀಸಿಗೆ ಹೊರಟಾಗ ಸೋಮಿನೂ ಜೊತೇಲೇ ಹೊರಟಳು ಸೋಮು ಕಣ್ಣರಳಿಸಿ ಇದೇನೇ ಅಂತ ಕೇಳಿದ ನೀವೇ ಹೇಳಿದ್ರಲ್ಲ ರಾಗಿಣಿ ಯಾರು ಅನ್ನೋದನ್ನು ನೋಡು. ಅವರನ್ನು ಕರೆಸ್ತೀನಿ ಅಂತ ಅಂದಳು ಸೋಮು ಮತ್ತೆ ಗಾಬರಿಯಾದರೂ ತೋರಿಸಿಕೊಳ್ಳದೇ ಮೊಬೈಲ್ ತೆಗೆದು ನಂಬರುಗಳನ್ನು ಒತ್ತಿ ಹಲೋ ರಾಗಿಣಿಯವರಾ ನಮಸ್ಕಾರ ನಾನು ಸೋಮು. ಮೇಡಂ ಇವತ್ತು ನೀವು ನಮ್ಮ ಆಫೀಸಿಗೆ ಬರೋಕೆ ಆಗುತ್ತಾ. ನೀವು ರಾಗಿಣಿ, ಎಪ್ಪತ್ತು ವರ್ಷ ವಯಸ್ಸಿನವರು, ಅನಾಥಾಶ್ರಮ ನಡೆಸ್ತಿದಾರೆ ಅಂದರೆ ನನ್ನ ಹೆಂಡ್ತಿಗೆ ನಂಬಿಕೆನೇ ಬರ್ತಿಲ್ಲ. ಅದಕ್ಕೇ ನೀವು ನಮ್ಮ ಆಫೀಸಿಗೆ ಬಂದು ನೀವು ಎಪ್ಪತ್ತು ವರ್ಷದ ರಾಗಿಣಿ ಅನ್ನೋದನ್ನು ಅವಳಿಗೆ ತೋರಿಸಿ ಅಂದ. ಸೋಮಿ ಸೋಮು ಸ್ಕೂಟರು ಹತ್ತಿ ಕೂತಳು.

ಆಫೀಸಿನಲ್ಲಿ ಎಲ್ಲರೂ ಇದೇನ್ಸಾರ್ ನಿಮ್ಮ ಹೆಂಡ್ತಿ ನಿಮ್ಮನ್ನು ಆಫೀಸಿಗೆ ಕರ್ಕೊಂಡು

ಬಂದ್ರಾ ಇಲ್ಲಾ ನೀವೇ ನಿಮ್ಮ ಹೆಂಡ್ತಿನ ಆಫೀಸಿಗೆ ಕರ್ಕ್ಕೊಂಡು ಬಂದ್ರಾ ಅಂತ ಕೇಳಿದರು ಸೋಮು ನೀನು ಇಲ್ಲಿ ಕೂತಿರು ರಾಗಿಣಿ ಬಂದ್ರೆ ಕರೀತೀನಿ ಅಂತ ಸೋಮಿನ ಮೀಟಿಂಗ್ ರೂಮಿನಲ್ಲಿ ಕೂರಿಸಿ ತನ್ನ ಕೆಲಸ ನೋಡಿದ. ಹನ್ನೆರಡು ಗಂಟೆಯ ಹೊತ್ತಿಗೆ ರಾಗಿಣಿ ಬಂದಳು. ಸೋಮು ಅವಳನ್ನು ಮೀಟಿಂಗ್ ರೂಮಿಗೆ ಕರೆದುಕೊಂಡು ಬಂದು ಸೋಮಿನ ಪರಿಚಯ ಮಾಡಿಸಿದ. ಇಬ್ಬರೂ ಸ್ವಲ್ಪ ಹೊತ್ತು ಮಾತಾಡಿದರು. ಸೋಮಿಗೆ ಇದ್ದ ಅನುಮಾನ ಹೆಚ್ಚಾಯಿತೇ ಹೊರತು ಕಡಿಮೆಯಾಗಲಿಲ್ಲ. ಸೋಮು ನೀವಿಬ್ರೂ ಮಾತಾಡ್ತಾ ಇರಿ ನಾನು ಕಾಫಿಗೆ ಹೇಳಿ ಬರ್ತೀನಿ ಅಂತ ಹೊರಗೆ ಹೊರಟ ಸ್ವಲ್ಪ ಹೊತ್ತಿಗೆ ಸೋಮಿ ರಾಗಿಣಿಯ ಜಡೆಯನ್ನು ಜಗ್ಗಿದಾಗ ಅದು ಅವಳ ಕೈಗೇ ಬಂತು. ರಾಗಿಣಿಯ ನಿಜವಾದ ವೇಷ ಬಯಲಾಯಿತು. ಅಷ್ಟೊತ್ತಿಗೆ ಅಲ್ಲಿಗೆ ಬಂದ ಸೋಮು ಇದೇನು ರಾಗಿಣಿಯವರೇ ಈ ಅವತಾರ. ಇಷ್ಟು ದಿವಸ ಈ ನಿಮ್ಮ ವೇಷದಿಂದ ನನ್ನನ್ನೂ ಅಚ್ಚರಿಗೊಳಿಸಿದ್ದಿರಿ. ನೀವು ಯುವತಿ, ಆದರೆ ಮುದುಕಿಯ ಹಾಗೆ ಯಾಕೆ ವೇಷ ಹಾಕ್ಕೊಂಡಿದ್ರಿ ಅಂದ ಸೋಮಿ ಸೋಮು ಕಡೆ ಕೆಂಗಣ್ಣು ಬಿಟ್ಟು ನೋಡಿ ರೀ ಬಾಯಿ ಮುಚ್ಚಿ, ನಿಮ್ಮ ನಾಟಕ ನಿಲ್ಲಿಸಿ, ಇವತ್ತು ಮನೆಗೆ ಬನ್ನಿ ನಿಮಗೆ ಇದೆ ಗ್ರಹಚಾರ ಅಂದು ಕಾಫಿನೂ ಕುಡಿದೇ ಹೋದಳು.

ಸೋಮು ರಾಗಿಣಿ ಕಡೆ ನೋಡಬೇಕೋ ಹೋಗ್ತಾ ಇರೋ ಸೋಮಿ ಕಡೆ ನೋಡಬೇಕೋ ತಿಳಿಯದೇ ತಡಬಡಾಯಿಸುತ್ತಾ ಸೋಮಿ ಸೋಮಿ ಸೋಮಿ ಹೋಗಬೇಡ ಹೋಗಬೇಡ ಅಂತ ಕೂಗಿದ ಬೆನ್ನ ಮೇಲೊಂದು ಒದೆ ಬಿತ್ತು. ಯಾರು ಹೊಡೆದರು ಅಂತ ನೋಡೋದ್ರಲ್ಲಿ ಇನ್ನೆರಡು ಒದೆ ಬಿತ್ತು. ಯಾರು ಹೊಡೆಯೋರು ಅಂತ ಕಣ್ಣೂ ಬಿಟ್ಟರೆ ಸೋಮಿ ಸೊಂಟದ ಮೇಲೆ ಕೈ ಇಟ್ಟು ನಿಂತಿದ್ದಳು. ನಾನೆಲ್ಲಿಗೆ ಹೋಗ್ತಿದ್ದೆ ನೀವು ಯಾಕೆ ಕೂಗ್ತಾ ಇದೀರ ಅಂತ ಕೇಳಿದಳು ಶ್ರೀನಿಧಿ ಯಾರು, ರಾಗಿಣಿ ವೇಷ ಏನು, ಯಾಕಿಂಥಾ ಕನಸು ಬಿತ್ತು ಅಂತ ಗೊಂದಲದಲ್ಲಿ ಬಿದ್ದು ಸೋಮಿ ಕಡೆ ನೋಡಿಕೊಂಡು ಪೆದ್ದು ಪೆದ್ದಾಗಿ ನಕ್ಕು ಬಚ್ಚಲು ಮನೆ ಕಡೆ ಹೋದ.

■

### "ಹೌದು, ಹಾಗೆ ಅಂದ್ಕೊಂಡಿದ್ದು...!"

ಬಸ್ಸಿನಲ್ಲಿ ತುಂಬಾ ರಷ್ ಇತ್ತು. ಆಗ ಮುಂದಿನ ಸ್ಟಾಪ್ ನಲ್ಲಿ ಒಬ್ಬ ಮಹಿಳೆಯು ಬಸ್ಸೇರಿದಾಗ, ಕುಳಿತಿದ್ದ ಒಬ್ಬ ಯುವಕನು ಆಕೆಗೆ ತನ್ನ ಜಾಗವನ್ನು ಕೊಡಲು ಬಂದಾಗ, ಆಕೆಯು – ರೀ ಮಿಸ್ಟರ್ , ನನ್ನ ಬದಲಿಗೆ ಯಾರಾದರೂ ಒಬ್ಬರು ವಯಸ್ಸಾದ ಮುದುಕಿಯು ಹತ್ತಿದ್ದರೂ ನೀವು ಹೀಗೆ ಜಾಗ ಬಿಟ್ಟುಕೊಡುತ್ತಿದ್ರಾ ? ಎಂದು ಪ್ರಶ್ನಿಸಿದಾಗ, ಆ ಚೂಟಿ ಯುವಕನು – ಹೌದು ಮೇಡಂ, ನಾನು ನಿಮಗೂ ಹಾಗೆ ಅಂದ್ಕೊಂಡೇ ಜಾಗ ಬಿಡಲು ತಯಾರಾದದ್ದು ಎಂದಾಗ, ಆಕೆಯ ಪರಿಸ್ಥಿತಿ ಇಂಗು ತಿಂದ ಮಂಗನಂಗೆ ಆಗಿತ್ತು....!